ಕಲ್ಯಾಣ ಕಿರಣ

ನವೆಂಬರ್-2009


ಬೆಲೆ
ರೂ.10/-



ಜಗನ್ಮಾತಾ ಅಕ್ಕಮಹಾದೇವಿ

ಓಂ ಶ್ರೀ ಗುರು ಬಸವ ಲಿಂಗಾಯ ನಮಃ

866666



ಬಸವ ಶರಣೆ ಕದಿರೆ ರೆಮ್ಮವ್ವೆ

॥ ಓಂ ಶ್ರೀ ಗುರು ಬಸವ ಲಿಂಗಾಯ ನಮಃ ॥

866666

ಸಂಪುಟ-39 ಬಸವ ಶಕೆ -876 ಆಜೀವ ಸದಸ್ಯತ್ವ 1000 ರೂ.

ಸಂಚಿಕೆ-11 ನವೆಂಬರ್- 2009 ವಾರ್ಷಿಕ ಚಂದಾ 100/- ರೂ.

ಶರಣ ಮೇಳಕೆ ಬರುವ ಶರಣರಿಗೆ ಸ್ವಾಗತ

ಜನ್ಮ ಭೂಮಿ ಭಾರತ ಧರ್ಮಕ್ಷೇತ್ರ ಸಂಗಮ
ಶರಣ ಮೇಳಕೆ ಬರಲಿರುವ ಶರಣರಿಗೆ ಸ್ವಾಗತ ॥ಪ॥
ಗುರುಗಳಿಗೆ ಸ್ವಾಗತ ಹಿರಿಯರಿಗೆ ಸ್ವಾಗತ
ಕಿರಿಯರಿಗೆ ಸ್ವಾಗತ ಸರ್ವರಿಗೂ ಸ್ವಾಗತ ॥ಅ.ಪ॥

ಧರ್ಮ ನೀತಿ ನ್ಯಾಯ ಶಾಂತಿ
ಸಾರುತಿರುವ ಮೇಳವು
ಮನುಜರೆಲ್ಲರೊಂದೆ ಎಂದು
ಆದರಿಸುವ ಮೇಳವು ॥ ಓ ದಿವ್ಯ ಮೇಳವು॥ ॥1॥

ಶ್ರೀ ಸಂಗಮೇಶನ ದಿವ್ಯ ತಾಣ ಸಂಗಮ
ಗುರು ಬಸವೇಶನ ಐಕ್ಯಕ್ಷೇತ್ರ ಸಂಗಮ
ಮಲಪ್ರಭೆ-ಕೃಷ್ಣೆಯರು ಸೇರುತಿರುವ ಸಂಗಮ
ಮಹಾಮನೆಯ ಹೊಂದಿರುವ ಧರ್ಮಕ್ಷೇತ್ರ ಸಂಗಮ ॥ಓ ದಿವ್ಯ ಕ್ಷೇತ್ರವು॥ ॥2॥

ಬಸವ ಕ್ರಾಂತಿ ದಿವ್ಯದಿನದಿ ನಾವು-ನೀವು ಸೇರುವ
ಗುರು ಬಸವಣ್ಣನ ಹಿಗ್ಗಿನಿಂದ ಸ್ಮರಿಸುವಾ
ಶರಣ ಧರ್ಮ ಅರಿಯುವ ಶರಣರಾಗಿ ಬೆಳೆಯುವ
ಬಸವ ಕಿರಣವಾಗಿ ನಾವು ಇಲ್ಲಿಂದ ಸಾಗುವ।
ಓ ದಿವ್ಯ ಮೇಳವು, ಓ ದಿವ್ಯ ಮೇಳವು. ॥3॥

- ಮಾತಾಜಿ

ಬಸವಾದೇಶ

ಭಕ್ತನು ಭಕ್ತನ ಮನೆಗೆ ಬಂದಡೆ, ಭೃತ್ಯಾಚಾರವ ಮಾಡಬೇಕು;
ಕರ್ತನಾಗಿ ಕಾಲ ತೊಳೆಯಿಸಿಕೊಂಡಡೆ, ಹಿಂದೆ ಮಾಡಿದ ಭಕ್ತಿಗೆ ಹಾನಿ!
ಲಕ್ಷ ಗಾವುದ ದಾರಿಯ ಹೋಗಿ, ಭಕ್ತನು ಭಕ್ತನ ಕಾಂಬುದು ಸದಾಚಾರ.
ಅಲ್ಲಿ ಕೂಡಿ ದಾಸೋಹವ ಮಾಡಿದೊಡೆ
ಕೂಡಿಕೊಂಬನು ನಮ್ಮ ಲಿಂಗದೇವನು.

ಅಕ್ಕನ ಅಮರವಾಣಿ

ಕಣ್ಗೆ ಶೃಂಗಾರ ಗುರು ಹಿರಿಯರ ನೋಡುವುದು
ಕರ್ಣಕ್ಕೆ ಶೃಂಗಾರ ಪುರಾತರ ಸುಗೀತಂಗಳ ಕೇಳುವುದು
ವಚನಕ್ಕೆ ಶೃಂಗಾರ ಸತ್ಯವ ನುಡಿವುದು
ಸಂಭಾಷಣೆಗೆ ಶೃಂಗಾರ ಸದ್ಭಕ್ತರ ನುಡಿಗಡಣ
ಕರಕ್ಕೆ ಶೃಂಗಾರ ಸತ್ಪಾತ್ರಕ್ಕೀವುದು
ಜೀವಿಸುವ ಜೀವಿತಕ್ಕೆ ಶೃಂಗಾರ ಗಣ ಮೇಳಾಪ
ಇವಿಲ್ಲದ ಜೀವಿಯ ಬಾಳುವ ಏತಕ್ಕೆ ಬಾತೆಯಯ್ಯಾ
ಚನ್ನಮಲ್ಲಿಕಾರ್ಜುನಾ ?

★ ಕಲ್ಯಾಣ ಕಿರಣ ★

ಕಿರಣಗನ್ನಡಿ

ಶರಣ ವ್ರತ ಸ್ವೀಕಾರ

ಶರಣ ಬಂಧುಗಳೇ,

ಶರಣ ವ್ರತ ಸ್ವೀಕಾರ ಮಾಡಿ ಶರಣ ಮೇಳಕ್ಕೆ ಅನೇಕರು ಬರುವುದುಂಟು. 40 ದಿವಸಗಳ ಗುರುಸಾರಾಯ ಸಂಪದ್ ವ್ರತ, 30 ದಿನಗಳ ಲಿಂಗ ಸಾರಾಯ ಸಂಪದ್ ವ್ರತ, 20 ದಿವಸಗಳ ಜಂಗಮ ಸಾರಾಯ ಸಂಪದ್ ವ್ರತ, 10 ದಿವಸಗಳ ಪ್ರಸಾದ ಸಾರಾಯ ಸಂಪದ್ ವ್ರತ. ಇವುಗಳಲ್ಲಿ ಯಾವುದನ್ನಾದರೂ ಸ್ವೀಕರಿಸಿ ದಿ. 14-01-2010ರಂದು ವ್ರತವನ್ನು ಪೂರ್ಣ ಗೊಳಿಸಬೇಕು.

1. ಗುರು ಸಾರಾಯ ಸಂಪದ್ ವ್ರತ - ಡಿಸೆಂಬರ್ 2ರಂದು
2. ಲಿಂಗ ಸಾರಾಯ ಸಂಪದ್ ವ್ರತ - ಡಿಸೆಂಬರ್ 12ರಂದು
3. ಜಂಗಮ ಸಾರಾಯ ಸಂಪದ್ ವ್ರತ - ಡಿಸೆಂಬರ್ 22ರಂದು
4. ಪ್ರಸಾದ ಸಾರಾಯ ಸಂಪದ್ ವ್ರತ - ಜನವರಿ 1ರಂದು

ಶರಣ ಮೇಳ ಉತ್ಸವ ಸಮಿತಿ,
ಬಸವ ಮಂಟಪ, 2035, 20ನೇ ಮುಖ್ಯ ರಸ್ತೆ, ಕಾರ್ಡ್‌ರೋಡ್
2ನೇ ಬ್ಲಾಕ್, ರಾಜಾಜಿ ನಗರ, ಬೆಂಗಳೂರು -560010

Kalyana Kirana -Reg No.19988/70. Monthly Magazine Edited And Published by Pujya Mate Kasturidevi on behalf of Vishwa kalyana Mission Charitable Trust, Basava Mantapa, 2035, 20th Main, 2nd Block, Rajajinagar, Bangalore-10.
Ph: 9481249857, 9036351066, 9620058492



॥ ಓಂ ಶ್ರೀ ಗುರು ಬಸವ ಲಿಂಗಾಯ ನಮಃ ॥

866666

ಕೂಡಲ ಸಂಗಮ ಸುಕ್ಷೇತ್ರದಲ್ಲಿ ಲಿಂಗಾಯತ ಧರ್ಮ ಸಂಸ್ಥಾಪನಾ ದಿನದ ಅಂಗವಾಗಿ ಇಪ್ಪತ್ಮೂರನೆಯ

ಶರಣ ಮೇಳ

2010ರ ಜನವರಿ 11, 12, 13, 14 ಮತ್ತು 15 ರಂದು

ಶರಣ ಬಂಧುಗಳೇ,

ಮಹಾಮಾನವತಾವಾದಿ, ಲಿಂಗಾಯತ ಧರ್ಮ ಸಂಸ್ಥಾಪಕ, ಧರ್ಮಗುರು ಬಸವಣ್ಣನವರ ಕಾರಣಿಕತ್ವ ಮತ್ತು ಸಂದೇಶಗಳಲ್ಲಿ ನಂಬಿಕೆ ಇಟ್ಟು ನಡೆಯುವ ಬಸವ ಭಕ್ತರು, ಬಸವ ಧರ್ಮೀಯರಾದ ಲಿಂಗಾಯತರು ಮತ್ತು ಬಸವ ತತ್ತ್ವಾಭಿಮಾನಿಗಳೆಲ್ಲರೂ ವರ್ಷಕ್ಕೆ ಒಮ್ಮೆಯಾದರೂ ಒಂದು ಸ್ಥಳದಲ್ಲಿ ಸಮಾವೇಶವಾಗುವುದು ಅತ್ಯಂತ ಆವಶ್ಯಕ. ಇದು ಸಮಾನತ್ವ ಮತ್ತು ಸಹೋದರತ್ವ ಬೆಳೆಸಲು ಸಹಕಾರಿಯಾಗುವುದು ಎಂಬ ಉದ್ದೇಶದಿಂದ ಆದಿ ಶರಣರ ಸಂಕಲ್ಪದಂತೆ ಶರಣ ಮೇಳವನ್ನು ನಡೆಸಲಾಗುತ್ತಿದೆ. ಧರ್ಮಕರ್ತ ಬಸವಣ್ಣನವರ ವಿದ್ಯಾಭೂಮಿ, ತಪೋಸ್ಥಾನ, ಐಕ್ಯಕ್ಷೇತ್ರ ಕೂಡಲ ಸಂಗಮವನ್ನು ಲಿಂಗಾಯತ(ಬಸವ) ಧರ್ಮೀಯರ ಧರ್ಮಕ್ಷೇತ್ರ ಎಂದು ಗುರುತಿಸಿಕೊಂಡು 1988ರ ಜನವರಿ 14, 15 ಮತ್ತು 16 ರಂದು ಪ್ರಥಮ ಚಾರಿತ್ರಿಕ ಶರಣ ಮೇಳವನ್ನು ನಡೆಸಲಾಯಿತು. ಮೊಟ್ಟ ಮೊದಲನೆಯ ಚಾರಿತ್ರಿಕ ಶರಣ ಮೇಳವು ಎರಡೂವರೆ ಲಕ್ಷಕ್ಕೂ ಮಿಕ್ಕಿದ ಜನ ಸಮೂಹವನ್ನು ಆಕರ್ಷಿಸಿತು.

ಇಂತಹ ಶರಣ ಮೇಳವು ಪ್ರತಿವರ್ಷವೂ ಬಸವ ಧರ್ಮ ಸಂಸ್ಥಾಪನಾ ದಿನದ ಅಂಗವಾಗಿ ನಡೆಯುತ್ತಲಿದ್ದು ಇಪ್ಪತ್ಮೂರನೆಯ ಶರಣ ಮೇಳವು 2010ರ ಜನವರಿ 11, 12, 13, 14ಮತ್ತು 15ರಂದು ನಡೆಯುವುದು. ಸಾಮೂಹಿಕ ಪ್ರಾರ್ಥನೆ, ಸಾಮೂಹಿಕ ಲಿಂಗ ಪೂಜೆ, ಗಣಲಿಂಗ ದರ್ಶನ ಶರಣ ಮೇಳದ ಪ್ರಮುಖ ಧಾರ್ಮಿಕ ವಿಧಿಗಳು. ಜನವರಿ 14ರಂದು ಬೆಳಿಗ್ಗೆ 10 ರಿಂದ ಧ್ವಜಾರೋಹಣ, ಪಥ ಸಂಚಲನ, ಸಮುದಾಯ ಪ್ರಾರ್ಥನೆ ಇರುತ್ತದೆ. [ಐದು ದಿನ ಭಾಗವಹಿಸಲು ಆಗದೆ ಇದ್ದವರು ಸಮುದಾಯ ಪ್ರಾರ್ಥನೆಯಲ್ಲಿ ಭಾಗವಹಿಸುವುದು ಕಡ್ಡಾಯ ವಿಧಿಯಾಗಿರುತ್ತದೆ.] ಸಂಜೆ 7 ಗಂಟೆಗೆ ಸಾಮೂಹಿಕ ಇಷ್ಟಲಿಂಗಾರ್ಚನೆ ಇರುತ್ತದೆ. ಇವುಗಳಲ್ಲಿ ಶರಣ ವ್ರತಿಗಳು ಭಾಗವಹಿಸುವುದು ಕಡ್ಡಾಯವಾಗಿರುತ್ತದೆ. 40, 30, 20 ಮತ್ತು 10 ದಿವಸಗಳ 'ಶರಣ ವ್ರತ'ವನ್ನು ಅವರವರ ಸಮಯಾವಕಾಶಕ್ಕೆ ತಕ್ಕಂತೆ ಸ್ವೀಕರಿಸಿ, ಆಚರಿಸಿ ಯಾರು ಬೇಕಾದರೂ ಶರಣ ಮೇಳದಲ್ಲಿ ಭಾಗಿಗಳಾಗ ಬಹುದು. ಚಿಂತನ ಗೋಷ್ಠಿ, ಉಪನ್ಯಾಸ, ಧಾರ್ಮಿಕ ರಸಪ್ರಶ್ನೆ ಮುಂತಾದ ಕಾರ್ಯಕ್ರಮಗಳಿಂದ ಕೂಡಿದ ಶರಣ ಮೇಳವು ಉತ್ತಮ ಜ್ಞಾನ ದಾಸೋಹದೊಡನೆ, ಅನ್ನದಾಸೋಹವನ್ನು ಅಚ್ಚು ಕಟ್ಟಾಗಿ ಮಾಡುತ್ತಿದೆ.ದಿ. 11 ಮತ್ತು 12 ರಂದು ಧರ್ಮಚಿಂತನ ಗೋಷ್ಠಿ ನಡೆಯುತ್ತಿದ್ದು ಸಮಾಜ-ಧರ್ಮಗಳಿಗೆ ಸಂಬಂಧಪಟ್ಟಂತೆ ಮುಕ್ತ ಚರ್ಚೆಗೆ ಅವಕಾಶವಿರುತ್ತದೆ. ಹೆಚ್ಚಿನ ಸಂಖ್ಯೆಯಲ್ಲಿ ಬಂದು ಯಾರು ಬೇಕಾದರೂ ಚಿಂತನ ಗೋಷ್ಠಿಯಲ್ಲಿ ಪಾಲ್ಗೊಳ್ಳಬಹುದು.

ಶರಣ ಮೇಳಕ್ಕೆ ಧನ ಸಹಾಯ

ಶರಣ ಮೇಳವು ಬಸವ ಧರ್ಮೀಯರ ಜಾಗತಿಕ ಉತ್ಸವವಾಗಿರುವುದರಿಂದ ವರ್ಷದಿಂದ ವರ್ಷಕ್ಕೆ ವಿಸ್ತಾರಗೊಳ್ಳುತ್ತಿದೆ. ಕರ್ನಾಟಕ ರಾಜ್ಯದ ವಿವಿಧ ಜಿಲ್ಲೆಗಳಿಂದ ಮಾತ್ರವಲ್ಲದೆ, ಹೊರರಾಜ್ಯಗಳಿಂದಲೂ ಶರಣ ವ್ರತಿಗಳು ಆಗಮಿಸುವರು. ಜನವರಿ ದಿ.10ನೆಯ ರಾತ್ರಿಯಿಂದ 15ನೆಯ ದಿನಾಂಕದ ರಾತ್ರಿಯವರೆಗೆ ಭಾಗಿಗಳಾಗುವ ಎಲ್ಲರಿಗೂ ಪ್ರಸಾದದ

ವ್ಯವಸ್ಥೆ ಮಾಡಲಾಗುವುದು. ಬೆಳಗಿನ ಉಪಾಹಾರ, ಮಧ್ಯಾಹ್ನದ ಊಟ ಮತ್ತು ರಾತ್ರಿಯ ಊಟಗಳನ್ನು ವ್ಯವಸ್ಥೆ ಮಾಡಲಾಗುತ್ತದೆ. ಭವ್ಯವಾದ ಸಭಾ ಮಂಟಪ, ಶಾಮಿಯಾನಾ ಕೊಠಡಿಗಳು, ವಿಶಾಲವಾದ ಪ್ರಸಾದ (ಊಟ) ಮಂಟಪ ಮುಂತಾದವುಗಳ ವ್ಯವಸ್ಥೆ ಮಾಡಲು ಅಪಾರವಾದ ಹಣದ ಆವಶ್ಯಕತೆ ಇರುತ್ತದೆ. ದಾನಿಗಳು ಕೆಳಗಿನಂತೆ ಧನ ಸಹಾಯ ಮಾಡಬಹುದು.

1. ಮಹಾಪೋಷಕರು : 5000 ರೂ. ಮತ್ತು ಮೇಲೆ ಕೊಟ್ಟವರು 4. ಹಿತೈಷಿಗಳು : 500 ರೂ.
2. ಪೋಷಕರು : 2000 ರೂ. ಮತ್ತು ಮೇಲೆ ಕೊಟ್ಟವರು. 5. ಸ್ವಾಗತ ಸಮಿತಿ ಸದಸ್ಯತ್ವ: 250 ರೂ.
3. ದಾನಿಗಳು: 1000 ರೂ. ಮತ್ತು ಮೇಲೆ ಕೊಟ್ಟವರು. 6. ಪ್ರತಿನಿಧಿ ಶುಲ್ಕ : 150 ರೂ.

ಅನ್ನ ದಾಸೋಹಕ್ಕಾಗಿ ಎಷ್ಟಾದರೂ ಭಕ್ತಿಪೂರ್ವಕ
ಕಾಣಿಕೆಯನ್ನು ಕೊಡಬಹುದು.

ಶರಣ ಮೇಳಕ್ಕೆ ತಮ್ಮ ಕೊಡುಗೆ ನಿರಂತರವಾಗಿ ಇರಲಿ ಎಂಬ ಇಷ್ಟವಿದ್ದವರು 5000/10000 ರೂಪಾಯಿಗಳ ಪುದುವಟ್ಟು (F.D.)ಇಡಲು ದೇಣಿಗೆ ನೀಡಿದರೆ, ಈ ಪುದುವಟ್ಟಿನ ಬಡ್ಡಿಯ ಹಣವನ್ನು ಶರಣ ಮೇಳದ ದಾಸೋಹಕ್ಕೆ ವಿನಿಯೋಗಿಸಲಾಗುವುದು.

ಜನರು ತಮ್ಮ ಕೈಲಾದಷ್ಟು ದೇಣಿಗೆ ಸಲ್ಲಿಸಬಹುದು. ದವಸ-ಧಾನ್ಯಗಳ ರೂಪದಲ್ಲಿ ಕೊಡಬಹುದು. ಬ್ಯಾಂಕ್ ಡ್ರಾಫ್ಟ್, ಚೆಕ್ಕುಗಳನ್ನು ''ಶರಣ ಮೇಳ ಉತ್ಸವ ಸಮಿತಿ, ಕೂಡಲ ಸಂಗಮ''ದ ಹೆಸರಿನಲ್ಲಾಗಲೀ, (ಕೂಡಲ ಸಂಗಮಕ್ಕೆ ಡಿ.ಡಿ. ತೆಗೆಸುವವರು ಕೇವಲ State Bank of Indiaದ Koodala Sangama ಶಾಖೆಗೆ ಡಿ.ಡಿ. ತೆಗೆಸಬೇಕು.) ಬೆಂಗಳೂರಿನ ಯಾವುದೇ ಬ್ಯಾಂಕ್ ಶಾಖೆಯ ಡಿ.ಡಿ.ಯನ್ನಾಗಲಿ ತೆಗೆಸಿ ಕಳಿಸಬಹುದು. ಎರಡೂ ವಿಳಾಸಗಳನ್ನು ಕೆಳಗೆ ಕೊಡಲಾಗಿದೆ.

ಮುಸಲ್ಮಾನ್ ಧರ್ಮೀಯರಿಗೆ ಮೆಕ್ಕಾ, ಸಿಖ್ಖರಿಗೆ ಅಮೃತಸರ, ಬೌದ್ಧರಿಗೆ ಬುದ್ಧ ಗಯೆ ಧರ್ಮಕ್ಷೇತ್ರಗಳಾಗಿರುವಂತೆ ಲಿಂಗಾಯತ ಧರ್ಮಾನುಯಾಯಿಗಳಿಗೆ ವಿಶ್ವಗುರು ಬಸವಣ್ಣನವರ ಐಕ್ಯಸ್ಥಾನ ಕೂಡಲ ಸಂಗಮವೇ ಧರ್ಮಕ್ಷೇತ್ರ. ತನ್ನ ಜೀವಮಾನದಲ್ಲಿ ಆಯುಷ್ಯ, ಆರೋಗ್ಯ ಇರುವವರೆಗೆ ಎಷ್ಟು ಸಲ ಒಬ್ಬ ವ್ಯಕ್ತಿ ಶರಣ ಮೇಳದಲ್ಲಿ ಭಾಗಿಯಾಗುತ್ತಾನೋ ಆತ ನಿಜಕ್ಕೂ ಹೆಚ್ಚು ಪುಣ್ಯವಂತ. ಪ್ರತಿಯೊಬ್ಬ ಬಸವ ಧರ್ಮಾನುಯಾಯಿಯು ತನ್ನ ಜೀವಮಾನದಲ್ಲಿ ಎಷ್ಟೇ ಅನಾನುಕೂಲತೆ ಇದ್ದರೂ ಒಮ್ಮೆಯಾದರೂ ಶರಣ ಮೇಳದ (ಜನವರಿ 14 ರಂದು ನಡೆಯುವ)ಸಮುದಾಯ ಪ್ರಾರ್ಥನೆಯಲ್ಲಿ ಭಾಗಿಯಾಗಿ, ಗಣಲಿಂಗ ದರ್ಶನ ಪಡೆದು ತನ್ನ ಅನುಯಾಯಿತ್ವವನ್ನು ಸ್ಥಿರೀಕರಿಸದೇ ಇದ್ದರೆ ಅವನು ಪ್ರಾಮಾಣಿಕ ಲಿಂಗಾಯತನಾಗನು. ಇಂತಹ ಪವಿತ್ರ ಶರಣ ಮೇಳಕ್ಕೆ ಸಹೋದರ ಭಾವನೆಯಿಂದ ಎಲ್ಲರೂ ಲಕ್ಷ ಗಟ್ಟಳೆ ಸಂಖ್ಯೆಯಲ್ಲಿ ಬನ್ನಿರಿ.

ಶರಣರ ಬರುವೆಮಗೆ ಪ್ರಾಣ ಜೀವಾಳ

ಶರಣ ಮೇಳ ಉತ್ಸವ ಸಮಿತಿ (ರಿ.)
ಬಸವ ಮಂಟಪ, 2035, 20ನೆಯ ಮೇನ್
2ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು-560010
ದೂ : 080-22923736/23131476

ಪೂಜ್ಯ ಶ್ರೀ ಮಹಾಜಗದ್ಗುರು ಮಾತೆ ಮಹಾದೇವಿ
ಕಾರ್ಯಾಧ್ಯಕ್ಷೆ, ಶರಣ ಮೇಳ ಉತ್ಸವ ಸಮಿತಿ,
ಕೂಡಲ ಸಂಗಮ-587115
ತಾ-ಹುನಗುಂದ, ಜಿ-ಬಾಗಲಕೋಟ
ದೂ : 08351-268014/268007/268140

ಸಂಪಾದಕೀಯ : - ಮಾತಾಜಿ

1. ಶರಣರ ಹಬ್ಬಗಳ ಆಚರಣೆ

ಲಿಂಗಾಯತ ಧರ್ಮಕ್ಕೆ ಗುರು ಬಸವಣ್ಣನವರೇ ಆದ್ಯರಾದ ಒಂದು ಶರಣ ಪರಂಪರೆಯಿದೆ. ಎಲ್ಲ ಶರಣರೂ ಪೂಜ್ಯರು, ಅಭಿನಂದನಾರ್ಹರೂ ಆಗಿದ್ದಾರೆ. ಅದಕ್ಕಾಗಿಯೇ 770 ಆದಿ ಶರಣರನ್ನು ವಿಜಯ ದಶಮಿಯಂದು ಆಚರಿಸುವ ಬಸವ ಧರ್ಮ ವಿಜಯೋತ್ಸವದಂದು ಸ್ಮರಣೆ ಮಾಡಿಕೊಂಡು ಶರಣ ವಂದನೆ ಮಾಡಿ, ಅವರಿಗೆ ಶರಣು ಶರಣಾರ್ಥಿಗಳನ್ನು ಅರ್ಪಿಸಲಾಗುವುದು. ಬಸವ ಕಲ್ಯಾಣದಲ್ಲಿ ನಡೆಯುವ ಕಲ್ಯಾಣ ಪರ್ವದ 2ನೆಯ ದಿವಸ ಸಾಮೂಹಿಕವಾಗಿ ಶರಣ ವಂದನೆ ಮಾಡಲಾಗುವುದು.

ಕೆಲವು ಶರಣರ ಕೊಡುಗೆ ಅಪ್ರತಿಮ. ಅವರು ವಚನ ಸಾಹಿತ್ಯ ಸಂವಿಧಾನ ಶಿಲ್ಪಿಗಳಾಗಿದ್ದಾರೆ. ಅವರ ವಾಣಿ ಶಾಸನ ವಾಕ್ಯಗಳಾಗಿವೆ. ಅವರ ಜಯಂತಿ ಮತ್ತು ಲಿಂಗೈಕ್ಯ ಸಂಸ್ಮರಣೆಯನ್ನು ಪ್ರತಿಯೊಬ್ಬ ಬಸವ ಪಥಿಕನೂ ಆಚರಿಸಬೇಕಾದುದು ಕರ್ತವ್ಯವಾಗಿದೆ.

1. ಅ. ಧರ್ಮಗುರು ಬಸವಣ್ಣನವರ ಜಯಂತಿಯನ್ನು ವೈಶಾಖ ಮಾಸದ ರೋಹಿಣಿ ನಕ್ಷತ್ರದಲ್ಲಿ (ಅಕ್ಷಯ ತೃತೀಯಾದಂದು).
   ಆ. ಲಿಂಗೈಕ್ಯ ಸಂಸ್ಮರಣೆಯನ್ನು ಶ್ರಾವಣ ಶುದ್ಧ ಪಂಚಮಿಯಂದು.
2. ಅ. ಚಿನ್ಮಯ ಜ್ಞಾನಿ ಚನ್ನಬಸವಣ್ಣನವರ ಜಯಂತಿಯನ್ನು ಕಾರ್ತಿಕ ಪ್ರತಿಪದೆ ದೀಪಾವಳಿಯಂದು. ಆ.ಲಿಂಗೈಕ್ಯವನ್ನು ಕಾರ್ತಿಕ ಪೌರ್ಣಿಮೆಯಂದು
   ಇ.ಲಿಂಗೈಕ್ಯ ಸಂಸ್ಮರಣೆಯನ್ನು (ಗಣ ಭೋಜನ) ಮಾಘ ಪೌರ್ಣಿಮೆಯಂದು.
3. ಅ. ಶೂನ್ಯ ಪೀಠಾಧೀಶ ಅಲ್ಲಮಪ್ರಭುದೇವರ ಜಯಂತಿಯನ್ನು ಮತ್ತು ಪ್ರಥಮ ಶೂನ್ಯ ಪೀಠಾರೋಹಣೋತ್ಸವ ಸಂಸ್ಮರಣೆಯನ್ನು ಯುಗಾದಿ ಪ್ರತಿಪದೆಯಂದು.
   ಆ. ಲಿಂಗೈಕ್ಯ ಸಂಸ್ಮರಣೆಯನ್ನು ಆಷಾಢ ಶುದ್ಧ ಪ್ರತಿಪದೆಯಂದು.
4. ಶ್ರೀ ಸಿದ್ಧರಾಮೇಶ್ವರ ಜಯಂತಿಯನ್ನು ಮಕರ ಸಂಕ್ರಾಂತಿಯಂದು.
5. ವೀರ ವಿರಾಗಿಣಿ ಅಕ್ಕಮಹಾದೇವಿಯವರ ಜಯಂತಿಯನ್ನು ಚೈತ್ರ ಪೌರ್ಣಿಮೆಯಂದು.
6. ವೀರ ಮಾತೆ ಅಕ್ಕನಾಗಲಾಂಬಿಕೆಯವರ ಸಂಸ್ಮರಣೆಯನ್ನು ವಿಜಯ ದಶಮಿಯಂದು, ಬಸವ ಧರ್ಮದ ವಿಜಯೋತ್ಸವ ಆಚರಿಸುವ ಮೂಲಕ.
7. ವೀರಗಣಾಚಾರಿ ಮಡಿವಾಳ ಮಾಚಿದೇವರ ಜಯಂತಿಯನ್ನು ಕಾಯಕದ ದಿನ ಮೇ 1.
8. ದಾಸೋಹ ಮೂರ್ತಿ ತಾಯಿ ನೀಲಾಂಬಿಕೆಯವರ ಲಿಂಗೈಕ್ಯ ಸಂಸ್ಮರಣೆಯನ್ನು ಶ್ರಾವಣ ಶುದ್ಧ ಷಷ್ಠಿಯಂದು.
9. ಹುತಾತ್ಮ ಚೇತನರಾದ ಹರಳಯ್ಯ -ಮಧುವರಸ -ಶೀಲವಂತರನ್ನು ಮಹಾನವಮಿಯಂದು ಸ್ಥಳೀಯವಾಗಿ ಸ್ಮರಿಸಿಕೊಂಡು, ಕಲ್ಯಾಣ ಪರ್ವದ 2ನೆಯ ದಿನ ಅವರಿಗೆ ಸಾರ್ವತ್ರಿಕವಾಗಿ ಶ್ರದ್ಧಾಂಜಲಿ ಸಲ್ಲಿಸಲಾಗುವುದು.
10. ಧರ್ಮ ಬಂಧುಗಳೆಲ್ಲ ಸೇರಿ ಆಚರಿಸಬೇಕಾದ ಮತ್ತೆರಡು ದಿವಸಗಳೆಂದರೆ ಮಕರ ಸಂಕ್ರಾಂತಿಯಂದು ಲಿಂಗಾಯತ ಧರ್ಮ ಸಂಸ್ಥಾಪನಾ ದಿನವನ್ನು ಹಾಗೂ ಮಹಾಶಿವರಾತ್ರಿಯಂದು ಗಣ ಮೇಳವನ್ನು.

ಪ್ರತಿಯೊಬ್ಬ ಲಿಂಗಾಯತನು ಇವಿಷ್ಟು ಕಡ್ಡಾಯವಾಗಿ ಆಚರಿಸಬೇಕು. ಇನ್ನು ಐಚ್ಛಿಕವಾಗಿ ಮಹಾತ್ಮಾಗಾಂಧಿ ಜಯಂತಿ, ಡಾ|| ಅಂಬೇಡ್ಕರ್ ಜಯಂತಿ ಮುಂತಾದುವನ್ನು ಕನ್ನಡ ರಾಜ್ಯೋತ್ಸವ, ಸ್ವಾತಂತ್ರ್ಯೋತ್ಸವ ಮುಂತಾದ ರಾಷ್ಟ್ರೀಯ ಹಬ್ಬಗಳನ್ನು ಆಚರಿಸಬೇಕು. ರಾಷ್ಟ್ರೀಯ ಬಸವ ದಳಗಳವರು ರಾ.ಬ.ದಳದ ಪರಿಕಲ್ಪನೆ ನೀಡಿದ ಲಿಂ|| ಪೂಜ್ಯ ಶ್ರೀ ಮಹಾಜಗದ್ಗುರು ಲಿಂಗಾನಂದ ಅಪ್ಪಾಜಿಯವರ ಜಯಂತಿ, ಲಿಂಗೈಕ್ಯ ಸಂಸ್ಮರಣೆಯನ್ನು ಆಚರಿಸಬೇಕು.

ಭಾರತ ದೇಶದಲ್ಲಿ ಹಿಂದು ಸಂಸ್ಕೃತಿಯ ಹಬ್ಬಗಳು ಆಚರಣೆಯಲ್ಲಿದ್ದು ಅವುಗಳ ಹಿಂದೆ ವಿಲಕ್ಷಣವಾದ ಪೌರಾಣಿಕ ಕಥೆಗಳಿವೆ. ಮುಖ್ಯವಾಗಿ ದೇವತೆಗಳು ರಾಕ್ಷಸರನ್ನು ದೇಶಬಿಟ್ಟು ಓಡಿಸಿದ, ಪಾತಾಳಕ್ಕೆ ತುಳಿದ, ಕೊಂದ ಕಥೆಗಳೇ ಪ್ರಧಾನ, ಇವುಗಳು ಆರ್ಯ -ದ್ರಾವಿಡ ಸಂಘರ್ಷದ ಕಥೆಗಳು, ಕೊಂದವರ ಕಥೆಗಳನ್ನು ಓದುವುದಕ್ಕಿಂತ, ಕೇಳುವುದಕ್ಕಿಂತ ಜನರನ್ನು ಉಳಿಸಿದ,

ಮಾರ್ಗದರ್ಶನ ಮಾಡಿದ ಶರಣರ ಕಥೆಗಳನ್ನು ಓದುವುದು ಶ್ರೇಯಸ್ಕರವೆಂದು ನವರಾತ್ರಿಯ ಸಮಯದಲ್ಲಿ ಶರಣರ ಚರಿತ್ರೆಗಳನ್ನು ಓದುವ ಅಭ್ಯಾಸ ರೂಢಿಗೆ ತರಲಾಗಿದೆ. ದೇವಿ ಪುರಾಣದ ಬದಲಿಗೆ ಶರಣರ ಕಥೆಗಳನ್ನು ಓದಲೆಂದು ''ಶರಣ ರತ್ನಗಳು ಎಂಬ ಕೃತಿಯನ್ನು ಬರೆದು ಪ್ರಕಟಿಸಿದ್ದೇನೆ.

ಆಶ್ವಯುಜ ಮಾಸದ ದಸರಾ ಸಮಯದಲ್ಲಿ ಓದುವ ಪರಿಕ್ರಮ.

ಪ್ರತಿಪದೆಯಂದು - ವಿಶ್ವಗುರು ಬಸವಣ್ಣನವರು
ದ್ವಿತೀಯದಂದು - ಚಿನ್ಮಯಜ್ಞಾನಿ ಚನ್ನಬಸವಣ್ಣನವರು
ತೃತೀಯದಂದು - ಶೂನ್ಯ ಪೀಠಾಧೀಶ ಅಲ್ಲಮಪ್ರಭುದೇವರು
ಚತುರ್ಥಿಯಂದು - ಬಸವ ಯೋಗಿ ಸಿದ್ಧರಾಮೇಶ್ವರರು
ಪಂಚಮಿಯಂದು - ವೀರ ವಿರಾಗಿಣಿ ಅಕ್ಕಮಹಾದೇವಿ
ಷಷ್ಠಿಯಂದು - ವೀರ ಮಾತೆ ಅಕ್ಕನಾಗಲಾಂಬಿಕೆ
ಸಪ್ತಮಿಯಂದು - ವೀರ ಗಣಾಚಾರಿ ಮಡಿವಾಳ ಮಾಚಿದೇವರು
ಅಷ್ಟಮಿಯಂದು - ಕಲ್ಯಾಣ ಕ್ರಾಂತಿಯ ಕಥೆ, ಹರಳಯ್ಯ -ಮಧುವರಸ
ನವಮಿಯಂದು - ಕಲ್ಯಾಣ ಕ್ರಾಂತಿಯ ಕಥೆಯ ಮುಕ್ತಾಯ
ದಶಮಿಯಂದು - ಬಸವ ಧರ್ಮ ವಿಜಯೋತ್ಸವ ಆಚರಣೆ -ಶರಣ ವಂದನೆ.

ಬಸವ ಮಂಟಪಗಳಿರುವಲ್ಲಿ, ಬಸವ ಮಂಟಪ ಇಲ್ಲದಿದ್ದರೂ ಸಾಮೂಹಿಕ ಪ್ರಾರ್ಥನೆ ಮಾಡುವ ಸ್ಥಳಗಳಲ್ಲಿ ಮನೆಮನೆಗಳಲ್ಲಿ ಅಂದಂದು ಆಯಾ ಶರಣರ ಭಾವಚಿತ್ರ ಇಟ್ಟು ಅಲಂಕಾರ ಮಾಡಿ, ಪೂಜೆ ಮಾಡಬೇಕು, ಶರಣ ಬಂಧುಗಳು ದರ್ಶನವನ್ನು ಪಡೆಯಬೇಕು.

ಸಿಖ್ ಧರ್ಮೀಯರು ಗುರುದ್ವಾರಗಳಲ್ಲಿ ತಮ್ಮ ದಶಗುರುಗಳ ಜಯಂತಿ ಮತ್ತು ಬಲಿದಾನ ದಿನಗಳನ್ನು ಭಕ್ತಿಪೂರ್ಣವಾಗಿ ಆಚರಿಸುತ್ತಾರೆ. ಅನುಯಾಯಿಗಳು ಗುರುದ್ವಾರಕ್ಕೆ ಬಂದು ದರ್ಶನ ಪಡೆದು ಗುರುಗಳಿಗೆ, ಗ್ರಂಥಕ್ಕೆ ಗೌರವ ಮತ್ತು ಕಾಣಿಕೆ ಸಲ್ಲಿಸುತ್ತಾರೆ. ಗುರು ನಾನಕ ಜಯಂತಿಯಂದು ಆಹ್ವಾನವಿಲ್ಲದಿದ್ದರೂ ಪ್ರಧಾನಿ ಮನಮೋಹನಸಿಂಗ್‌ರವರು ಗುರುದ್ವಾರಕ್ಕೆ ಬಂದು ದರ್ಶನ ಪಡೆಯುತ್ತಾರೆ. (ಅದೇ ಶ್ರೀ.ಬಿ.ಎಸ್.ಯಡೆಯೂರಪ್ಪನವರು ಅಧಿಕಾರ ಸ್ವೀಕಾರದ ದಿನ ಧರ್ಮಗುರು ಬಸವಣ್ಣನವರ ಪುತ್ಥಳಿಗೆ ಮಾತ್ರ ಮಾಲಾರ್ಪಣೆ ಮಾಡಲು (ಉದ್ದೇಶ ಪೂರ್ವಕವಾಗಿ) ಮರೆತು ಮಹಾತ್ಮ ಗಾಂಧೀಜಿ, ಡಾ|| ಬಿ.ಆರ್.ಅಂಬೇಡ್ಕರ್ ಪುತ್ಥಳಿಗೆ ಮಾತ್ರ ಮಾಲಾರ್ಪಣೆ ಮಾಡಿ ಧರ್ಮಗುರುವಿಗೆ (ಅ)ಗೌರವ ಸಲ್ಲಿಸಿದರು) ಅದೇ ರೀತಿ ನಾವೂ ಸಹ ಆಯಾ ಜಯಂತಿ, ಲಿಂಗೈಕ್ಯ ಸಂಸ್ಮರಣೆಗಳಂದು ಶರಣರ 3 ಅಡಿ ಅಗಲ 4 ಅಡಿ ಎತ್ತರದ ಭಾವಚಿತ್ರಗಳನ್ನಿಟ್ಟು ಅಲಂಕರಿಸಬೇಕು. ಶರಣ ಬಂಧುಗಳು ಬಂದು ದರ್ಶನ ಪಡೆಯಬೇಕು.

ಎಲ್ಲ ಬಸವ ಮಂಟಪಗಳವರೂ ಕಡ್ಡಾಯವಾಗಿ 3'X4' ಅಥವಾ 2'X3' ಅಳತೆಯ ಸಪ್ತಗಣಾಧೀಶರ, ತಾಯಿ ನೀಲಾಂಬಿಕೆ ಮತ್ತು ಹುತಾತ್ಮ ಶರಣರ ಭಾವಚಿತ್ರಗಳನ್ನು ಮಾಡಿಸಿ ಇಟ್ಟುಕೊಳ್ಳಬೇಕು. ಬಸವ ಮಂಟಪ ಕಟ್ಟದಲ್ಲಿ ಗೋಡೆ ಮೇಲೆ ಹಾಕಿಟ್ಟಿರಬೇಕು.

(ನಾವು ಈಗಾಗಲೇ ನಮ್ಮ ಸಂಸ್ಥೆಯಿಂದ ಇವನ್ನೆಲ್ಲ ಬರೆಸಿ ಇಟ್ಟಿದ್ದು ಕೇಳಿದವರಿಗೆ ಮಾಡಿಸಿಯೂ ಕೊಡುತ್ತೇವೆ).

ಲಿಂಗಾಯತ ಧರ್ಮದ ಮಠಮಾನ್ಯಗಳವರು ಸಹ ಶರಣರ ಜಯಂತಿ -ಲಿಂಗೈಕ್ಯ ಸಂಸ್ಮರಣೆಗಳಂದು ಮಠದ ಮುಖ್ಯ ಹಾಲ್‌ದಲ್ಲಿ ಶರಣರ ಭಾವಚಿತ್ರ ಇಟ್ಟು ಅಲಂಕರಿಸಿ ಜನರು ಬಂದು ದರ್ಶನ ಪಡೆಯಲು ವ್ಯವಸ್ಥೆ ಮಾಡಬೇಕು. ಇದರಿಂದ ಮಠಗಳು ಕಳಾಯುಕ್ತವಾಗುತ್ತವೆ. ಜನರಲ್ಲಿ ಉತ್ತಮ ಸಂಸ್ಕಾರವು ಬೆಳೆಯುತ್ತದೆ.

2. ವಿವಾಹ ಮತ್ತು ಮತಾಂತರ

ಭಾರತೀಯ ಧರ್ಮಗಳಾದ ಜೈನ-ಬೌದ್ಧ ಲಿಂಗಾಯತ ಸಿಖ್ ಧರ್ಮಗಳಲ್ಲಿ ಮತಾಂತರಕ್ಕೆ ಅಂದರೆ ಯಾವುದೇ ಧರ್ಮದ ಜಾತಿ - ಮತದ ವ್ಯಕ್ತಿ ದೀಕ್ಷೆ ಪಡೆದು ಪ್ರವೇಶಿಸಲಿಕ್ಕೆ ಅವಕಾಶವಿದೆಯಾದರೂ, ಹಿಂದೂ ಧರ್ಮದ ಒಂದು ಪಂಥವಾದ ಆರ್ಯ ಸಮಾಜದಲ್ಲಿ ಸಹ ದೀಕ್ಷಾ ಸ್ವೀಕಾರಕ್ಕೆ ಅವಕಾಶವಿದೆಯಾದರೂ ಇವರಾರೂ ಒತ್ತಾಯ ಪೂರ್ವಕವಾಗಿ ಮತಾಂತರ ಮಾಡುವವರಲ್ಲ.

ಮತ್ತು ಅದನ್ನೇ ಗುರಿಯನ್ನಾಗಿ ಇಟ್ಟುಕೊಂಡು ವರ್ತಿಸುವವರೂ ಅಲ್ಲ. ಸ್ವಯಂ ಪ್ರೇರಣೆಯಿಂದ ಬರುವವರಿಗೆ ಮುಕ್ತ ಮನಸ್ಸಿನಿಂದ ದೀಕ್ಷೆ ಕೊಡಲು ಅರ್ಥಾತ್ ಸಾಮಾಜಿಕ-ಧಾರ್ಮಿಕ ಪ್ರವೇಶ ನೀಡಲು ಸಿದ್ಧರಿದ್ದಾರೆ.

ಇತ್ತೀಚೆಗೆ ಒಂದು ಸುದ್ದಿ ಸ್ಫೋಟಗೊಂಡಿತು. ಮಂಗಳೂರು ಮುಂತಾದೆಡೆ ಒಂದು (ಅಥವಾ ಹಲವು) ಇಸ್ಲಾಮಿಕ್, ಯುವ ಸಂಘಟನೆ ಇದೆ/ಇವೆ. ಅವುಗಳು ತರುಣ-ತರುಣಿಯರನ್ನು ಸದಸ್ಯರನ್ನಾಗಿ ಮಾಡಿಕೊಳುತ್ತವೆ. ಮುಸ್ಲೀಮ್ ತರುಣ/ತರುಣಿಯರು ಸಾಧ್ಯವಾದಷ್ಟು ಭಾರತೀಯ (ಹಿಂದು)ಧರ್ಮಗಳ ತರುಣ/ತರುಣಿಯರನ್ನು ಪ್ರೇಮಿಸಬೇಕು. ಅವರಿಗೆ ಇಸ್ಲಾಮಿಕ್ ಸಾಹಿತ್ಯ ಕೊಟ್ಟು ಓದಿಸಿ, ಈ ಬಗ್ಗೆ ಅಭಿಮಾನ ಬೆಳೆಯುವಂತೆ ಮಾಡಬೇಕು. ಇದಕ್ಕೆ ಒಂದು ನಿಗದಿತ ಸಮಯ ಕೊಡಬೇಕು. ವ್ಯವಸ್ಥಿತ ಪ್ರಯತ್ನದ ನಂತರವೂ ಅವರು ಇವನಿಗೆ/ ಇವಳಿಗೆ ಮತ್ತು ಇಸ್ಲಾಂಗೆ ಒಲಿಯದಿದ್ದರೆ ಆಗ ಪ್ರಯತ್ನ ಕೈ ಬಿಟ್ಟು ಬೇರೆಯವರನ್ನು ಪರಿವರ್ತಿಸಲು ಪ್ರಯತ್ನಿಸಬೇಕು. ಇದು ಬಹಳ ತ್ವರಿತಗತಿಯಲ್ಲಿ ಕೆಲಸ ಮಾಡುತ್ತಿದ್ದು ವಿಪರೀತ ಸಂಖ್ಯೆಯಲ್ಲಿ ತರುಣಿಯರು/ ತರುಣರು ಮತಾಂತರಗೊಳ್ಳುತ್ತಿದ್ದಾರೆ. ಹುಡುಗಿಯರನ್ನು ಓಡಿಸಿಕೊಂಡು ಹೋಗಿ ಮದರಸಾಗಳಲ್ಲಿ ಇಟ್ಟು ಇಸ್ಲಾಂ ಬೋಧನೆ ಮಾಡಿ, ಹುಡುಗಿಯರ ತಾಯಿ ತಂದೆ ಕೋರ್ಟ್ ಮೂಲಕ ಕರೆಸಿಕೊಂಡಾಗ ತಾನು ಸ್ವಯಂ ಇಚ್ಛೆಯಿಂದ ಮತಾಂತರಗೊಂಡುದಾಗಿ ಹುಡುಗಿಯಿಂದ ಹೇಳಿಕೆ ಕೊಡಿಸುವರು.

ಬಸವ ಮಂಟಪದ ಸಕ್ರಿಯ ಸದಸ್ಯನಾದ ಒಬ್ಬ ಹುಡುಗ ಒಂದು ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದಾನೆ. ಅಲ್ಲಿ ಕೆಲಸ ಮಾಡುವ ಕ್ರೈಸ್ತ ತರುಣಿಯೊಬ್ಬಳು ಈತನ ಮಿತ್ರನ ಸುತ್ತ ಮಾಯಾ ಜಾಲವನ್ನು ಹರಡುತ್ತಿದ್ದಾಳಂತೆ. ಅವನು ಲಿಂಗಾಯತ ಧರ್ಮದವನು. ಈತನು ತನ್ನ ಸಹೋದ್ಯೋಗಿಗೆ ಎಚ್ಚರಿಕೆಯಿಂದ ಇರಲು ಸಾಕಷ್ಟು ಸಲ ಹೇಳುತ್ತಿದ್ದಾನಂತೆ. ಆ ಹುಡುಗಿ ಒಮ್ಮೆ ಈತನಿಗೆ ಹೇಳಿದಳಂತೆ. ''ನನ್ನ ಅಕ್ಕ ಲಿಂಗಾಯತ ಹುಡುಗನನ್ನು ಒಲಿಸಿಕೊಂಡಳು. ನಾನೂ ಸಹ ಲಿಂಗಾಯತ ಹುಡುಗನನ್ನು ಒಲಿಸಿಕೊಳ್ಳುವ ಮನಸ್ಸು ಮಾಡಿದ್ದೇನೆ.''

ಇಸ್ಲಾಂ, ಕ್ರೈಸ್ತ ಧರ್ಮಗಳನ್ನು ಕೊಟ್ಟ ಪ್ರವಾದಿಗಳ ಉದ್ದೇಶ ಆ ಪರಿಸರದಲ್ಲಿದ್ದ ನಾಸ್ತಿಕರು, ಬಹುದೇವತೋಪಾಸಕರು, ಅಧರ್ಮಿಗಳನ್ನು ದೇವರ ಮಾರ್ಗಕ್ಕೆ ಕರೆತರುವುದಾಗಿತ್ತು. ''ನೀನು ಒಬ್ಬನನ್ನು ಈ ಮಾರ್ಗಕ್ಕೆ ಕರೆತಂದರೂ ದೇವರಿಗೆ ಹತ್ತಿರದವನಾಗುತ್ತೀಯ'' ಎಂದು ಪ್ರವಾದಿಗಳು, ಧರ್ಮಬೋಧಕರು ಹೇಳಿದರು. ಈ ಮಾತನ್ನು ದೃಢವಾಗಿ ನಂಬುವ ಕ್ರೈಸ್ತರು, ಮುಸಲೀಮರು ಅವರಲ್ಲಿರುವ ಅಧರ್ಮಿಗಳನ್ನು, ಮದ್ಯಪಾನಿಗಳನ್ನು, ಕ್ರೂರಿಗಳನ್ನು ಸಾತ್ವಿಕಗೊಳಿಸುವ ಅಧ್ಯಾತ್ಮಿಕ ಪರಿವರ್ತನೆಯ ಕಾರ್ಯಯೋಜನೆ ರೂಪಿಸುವುದು ಬಿಟ್ಟು ಸದಾ ಇತರ (ಭಾರತೀಯ) ಧರ್ಮಗಳವರನ್ನು ಮತಾಂತರಿಸುವುದರಲ್ಲೇ ಗಮನವನ್ನು ಕೇಂದ್ರೀಕರಿಸುತ್ತಾರೆ.

ಭಾರತೀಯ ಧರ್ಮಗಳ ನೇತಾರರು ಸದಾ ಕಾಲ ಶಾಂತಿ, ಪ್ರೀತಿ, ಪೂಜೆ, ಧ್ಯಾನ, ಯೋಗ ಸೇವೆ ಮುಂತಾದ ವಿಷಯಗಳಿಗೆ ಒತ್ತುಕೊಟ್ಟು ತಮ್ಮ ಜನರನ್ನು ಸಂಸ್ಕರಿಸಿದರೆ ಕ್ರೈಸ್ತ, ಇಸ್ಲಾಂ ಧರ್ಮಗಳವರು ಅಧ್ಯಾತ್ಮಿಕ ಸಂಸ್ಕಾರ ಕೊಡುವುದಕ್ಕಿಂತ ಅನ್ಯ ಧರ್ಮೀಯರನ್ನು ಮತಾಂತರಿಸು-ವುದಕ್ಕೇ ಹೆಚ್ಚಿನ ಗಮನ ಕೊಡುತ್ತಾರೆ. ಇದರ ಒಂದು ಅಂಗ ಲವ್ ಜಿಹಾದ್, ಅವರ ಧರ್ಮಗಳನ್ನು ವಿಸ್ತರಿಸುವ ಪ್ರಣಯ ತಂತ್ರ.

ಪ್ರೀತಿ, ಪ್ರಣಯದ ಹುಚ್ಚು ಕುದುರೆಯನ್ನೇರಿದ ತರುಣ, ತರುಣಿಯರಿಗೆ ಒಂದು ಬಗೆಯ ನಶೆ (ಮತ್ತು) ಮತ್ತು ನಿಶೆ (ಕತ್ತಲು) ಏರಿರುತ್ತದೆ. ಆಗ ಅವರು ಯಾರ ಬುದ್ಧಿವಾದವನ್ನೂ ಕೇಳುವ ಮನಸ್ಥಿತಿ ಹೊಂದಿರುವುದಿಲ್ಲ. ಮದ್ಯಪಾನ ಮಾಡಿದವನು ಹೋಗಿ ಗುಂಡಿಗೆ ಬಿದ್ದಂತೆ ಪ್ರಣಯಿಗಳೂ ಭ್ರಾಂತಿಯ ಗುಂಡಿಗೆ ಬೀಳುತ್ತಾರೆ. ಎಲ್ಲ ಪ್ರೇಮ ವಿವಾಹಗಳೂ ಖೆಡ್ಡಾಗಳೇನಲ್ಲ. ವಿದ್ಯೆ, ವಿವೇಕ, ಸಮಾನ ಅಭಿರುಚಿ, ಪ್ರೌಢ ಚಿಂತನೆ ಇದ್ದು ಒಂದು ಆದರ್ಶದ ತಳಹದಿಯ ಮೇಲೆ ಒಂದಾದವರು ಉದಾತ್ತವಾದುದನ್ನು ಸಾಧಿಸುವರು. ಲವ್ ಜಿಹಾದ್‌ದಂತಹ ಖೆಡ್ಡಾಕ್ಕೆ ಬೀಳುವವರು ಮುಂದೆ ಅಪಾಯಕ್ಕೆ ಸಿಲುಕುವರು. ಕರ್ನಾಟಕ ಮತ್ತು ಕೇರಳ ಹೈಕೋರ್ಟ್‌ಗಳು ಲವ್ ಜಿಹಾದ್ ಬಗ್ಗೆ ಆತಂಕ ವ್ಯಕ್ತಪಡಿಸಿವೆ. ಸಹಜ ಪ್ರೀತಿಯಾದರೆ ಅದು ಸಹ್ಯ ಮತ್ತು ಸಹಜ. ಮತಾಂತರವೊಂದನ್ನೇ ಗುರಿಯಾಗಿಟ್ಟುಕೊಂಡ ಪ್ರಣಯ ಪ್ರಸಂಗ ಅಪಾಯಕಾರಿ. ಆದ್ದರಿಂದ ಯುವಕ ಯುವತಿಯರು ಕೇವಲ ತಮ್ಮ ಅಲ್ಪಾಕಾಂಕ್ಷೆ (ಕಾಮ)ಗಾಗಿ ತನ್ನ ಧರ್ಮವನ್ನು ತೊರೆದು ಮತಾಂತರಗೊಳ್ಳುವುದು ಪಾಪಕರ ಎಂಬುದನ್ನು ಮನವರಿಕೆ ಮಾಡಿಕೊಳ್ಳಬೇಕು.

3. ಶರಣ ಮೇಳ ಉತ್ಸವವಲ್ಲ; ಧಾರ್ಮಿಕ ವಿಧಿ

ಶರಣ ಮೇಳದ ಕಾಣಿಕೆ ಸಂಗ್ರಹಕ್ಕೆ ನಮ್ಮವರು ಹೋಗಿದ್ದರು. ಪತ್ನಿ ಭಾವುಕರು, ಭಕ್ತಿಜೀವಿ, ಪತಿ ವಿಚಾರವಾದಿ ತುಸು ನಾಸ್ತಿಕರು. "ಈ ಸಲ ತುಂಬಾ ಮಳೆಯಿಂದ, ನೆರೆಯಿಂದ ಉತ್ತರ ಕರ್ನಾಟಕದ ಜನರು ಸಂತ್ರಸ್ತರಾಗಿದ್ದಾರೆ. ಆದ್ದರಿಂದ ಶರಣ ಮೇಳ ಮಾಡಬೇಡಿರಿ." ಎಂದು ಪತಿಯು ಸಲಹೆ ನೀಡಿದರು. ಮತ್ತೊಬ್ಬರು ಫೋನ್ ಮಾಡಿ, "ಶರಣ ಮೇಳವನ್ನು ವೈಭವದಿಂದ ಆಚರಿಸದೆ ಸರಳವಾಗಿ ಆಚರಿಸಿರಿ." ಎಂದು ಸಲಹೆ ನೀಡಿದರು.

ಶರಣ ಮೇಳ ಒಂದು ಧಾರ್ಮಿಕ ವಿಧಿ. ಇಲ್ಲಿ ಭಕ್ತಿ, ಪೂಜೆ -ಪ್ರಾರ್ಥನೆ, ಯೋಗ -ಚಿಂತನಗೋಷ್ಠಿ ಇಂಥದಕ್ಕೆ ಅವಕಾಶವುಂಟಲ್ಲದೆ ವೈಭವಕ್ಕೆ ಒಂದು ಪೈಸೆಯಷ್ಟೂ ಖರ್ಚು ಇರದು. ಕಣ್ಣು ಕುಕ್ಕುವ ಪೆಂಡಾಲ್ ಇರುವುದಿಲ್ಲ, ಪಲ್ಲಕ್ಕಿ ಉತ್ಸವ ಇರುವುದಿಲ್ಲ. ಶರಣ ಮೇಳದ ಮುಖ್ಯ ಆಕರ್ಷಣೆ ಎಂದರೆ ಜ್ಞಾನ ದಾಸೋಹ ಮತ್ತು ಅನ್ನ ದಾಸೋಹ. 5 ದಿನಗಳ ಕಾಲ ನಿರಂತರವಾಗಿ ಅನ್ನ ದಾಸೋಹದ ಜೊತೆಗೆ ಜ್ಞಾನ ದಾಸೋಹ ನಡೆಯುವುದು. ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಕೊಟ್ಟಂತಹ ವೈಭವದ ಖಾದ್ಯಗಳಿರುವುದಿಲ್ಲ. ಏಕೆಂದರೆ ಸರಕಾರದ ಧನ ಸಹಾಯ ಇರುವುದಿಲ್ಲ. ಸುಳ್ಳು ಲೆಕ್ಕ ತೋರಿಸಿ ಖರ್ಚು ಹಾಕುವ ಅಗತ್ಯ ಶರಣ ಮೇಳದಲ್ಲಿ ಇಲ್ಲ. ಜನ ಸಾಮಾನ್ಯರು ಕೊಡುವ ಕಾಸನ್ನು ಸೇರಿಸಿ ಸರಳವಾದ, ರುಚಿ, ಶುಚಿಯಾದ ಆಹಾರವನ್ನು ದಾಸೋಹ ಮೂಲಕ ನೀಡಲಾಗುವುದು.

ಕೂಡಲ ಸಂಗಮದಲ್ಲಿ ಸಹ ಕೃಷ್ಣಾ ಮತ್ತು ಮಲಪ್ರಭಾ ದಂಡೆ ಮೀರಿ ಹರಿದು ಪ್ರವಾಹ ಉಂಟಾದಾಗ ಹಲವಾರು ಹಳ್ಳಿಗಳು ಮುಳುಗಡೆಯಾಗಿವೆ. ಜನರು ಸಂಕಷ್ಟಕ್ಕೆ ಒಳಗಾಗಿದ್ದಾರೆ. ಕೂಡಲ ಸಂಗಮದಲ್ಲಿ ಕೃಷ್ಣಾ ಮತ್ತು ಮಲಪ್ರಭಾ, ಸಂಗಮ ಕ್ರಾಸ್ ದಿಂದ ಸಂಗಮ ಗ್ರಾಮದೊಳಕ್ಕೆ ಹೋಗುವ ರಸ್ತೆಗೆ ಅಡ್ಡಲಾಗಿ ಹರಿಯುವ ಒಂದು ಹಳ್ಳ ಪ್ರವಾಹ ತುಂಬಿ ಕೂಡಲ ಸಂಗಮವೂ ಅಕ್ಷರಶಃ ದ್ವೀಪವಾಗಿತ್ತಂತೆ. 3-4 ದಿನ ವಾಹನಗಳು ಸಂಗಮದೊಳಕ್ಕೆ ಹೋಗಲು ಸಾಧ್ಯವಾಗಲಿಲ್ಲ-ವಂತೆ. ಆಗ ಬಂದಿಳಿದ ಕೆಲವು ಜನರು ಹಳ್ಳದಾಟಲಾರದೆ ನಿಂತಾಗ ನಮ್ಮ ಟ್ರಾಕ್ಟರ್ ಕಳಿಸಿ ದಾಟಿಸಲಾಯಿತಂತೆ. ವಿಪರೀತ ಮಳೆಯಿಂದ ಮನೆಗಳು ಬಿದ್ದಾಗ ಅಂಥ ಕೆಲವರು ಬಸವ ಧರ್ಮ ಪೀಠದ ವಸತಿ ಗೃಹದಲ್ಲಿ ಉಳಿಯಲು ಮತ್ತು ಊಟೋಪಚಾರದ ವ್ಯವಸ್ಥೆಯನ್ನು ಸಹ ಮಾಡಲಾಯಿತೆಂದು ಕೆಲವರು ಕೊಂಡಾಡಿದರು. ನಾವು ಬಸವ ಕಲ್ಯಾಣದಲ್ಲಿ ಕಾರ್ಯಕ್ರಮ ನಿರತರಾಗಿದ್ದಾಗ ಕೂಡಲ ಸಂಗಮದಿಂದ ಪೂಜ್ಯ ಶ್ರೀ ಮಾದೇಶ್ವರ ಸ್ವಾಮಿಗಳ ಫೋನ್ ಬಂದಿತು. ಸಿಕ್ಕಾಪಟ್ಟೆ ಮಳೆ ಸುರಿಯುತ್ತಿರುವುದಾಗಿಯೂ ಹೇಳಿದಾಗ, "ಖಂಡಿತಾ ಆಶ್ರಯ ಕೊಡಿರಿ ಊಟದ ವ್ಯವಸ್ಥೆ ಸಹ ಮಾಡಿರಿ. ಇಂಥ ಸಮಯದಲ್ಲಿ ಆಗದೆ ಇನ್ಯಾವಾಗ ನೆರವಾಗುವುದು?" ಎಂದು ಸ್ವಾಮೀಜಿಯವರಿಗೆ ತಿಳಿಸಿದೆ.

ಅತಿವೃಷ್ಟಿ, ಪ್ರವಾಹ, ನೆರೆ ಇವುಗಳ ಪ್ರಳಯಾಂತಕ ರೌದ್ರತೆಯನ್ನು ನೋಡಿದರೆ ದೇವರಿಗೆ ಮಾನವರ ಮೇಲೆ ಕೋಪ ಬಂದಿದೆಯೇನೋ ಎನ್ನಿಸದಿರದು. ಮನುಷ್ಯ ಪಾಪ ಪ್ರಜ್ಞೆಯೇ ಇಲ್ಲದೆ ಅನ್ಯಾಯ, ಅತ್ಯಾಚಾರ, ಕೊಲೆ, ಸುಲಿಗೆಗಳಲ್ಲಿ ನಿರ್ಲಜ್ಜನಾಗಿ ನಿರತನಾಗಿದ್ದಾನೆ. ಹೀಗಾಗಿ ಸೃಷ್ಟಿಕರ್ತನು ನೊಂದು, ಕೋಪಗೊಂಡು ಮಾನವರ ಮೇಲೆ ಜಲಾಸ್ತ್ರವನ್ನು ಬೀಸಿರಬಹುದು ಎನಿಸುತ್ತದೆ. ಆದ್ದರಿಂದ ಸದ್ಭಕ್ತರು ಕೂಡಲ ಸಂಗಮದ ಸುಕ್ಷೇತ್ರದಲ್ಲಿ ಸೇರಿ ಶುದ್ಧ ಮನಸ್ಸಿನಿಂದ ಸೃಷ್ಟಿಕರ್ತ ಲಿಂಗದೇವನನ್ನು ಉತ್ತಮ ಭವಿಷ್ಯ ನೀಡಲು ಇಷ್ಟಲಿಂಗ ಪೂಜೆ, ಸಮುದಾಯ ಪ್ರಾರ್ಥನೆಗಳ ಮೂಲಕ ಬೇಡಿಕೊಳ್ಳುವುದು ಎಂದಿಗಿಂತಲೂ ಇಂದು ಹೆಚ್ಚು ಅವಶ್ಯಕವಾಗಿದೆ.

4. ವ್ಯವಸ್ಥೆಗೆ ಪ್ರಬಲವಾಗಿ ಅಂಟಿಕೊಂಡ ಸಮಾಜ

ಒಂದು ಮದುವೆ ನಮ್ಮ ಸನ್ನಿಧಿಯಲ್ಲಿ ನಡೆಯಿತು. ಹುಡುಗಿಗೆ ಎರಡನೆಯ ಮದುವೆ, ಹುಡುಗನಿಗೆ ಮೊದಲನೆಯದು. ಮದುವೆಗೆ ಬಂದ ಅನೇಕರು ಲೊಚಗಟ್ಟುತ್ತ, ಪಿಸಿಪಿಸಿ ಮಾತನಾಡುತ್ತ "ಎಂಥಾ ಚಂದ ಹುಡುಗ, ಎಂಥಾ ಕೆಲಸ ಮಾಡಿಬಿಟ್ಟ!" ಎಂದು ತಮ್ಮ ಮೇಲೆಯೇ ಗುಡ್ಡ ಕಳಚಿ ಬಿದ್ದಂತೆ ವಿಷಾದ ವ್ಯಕ್ತಪಡಿಸುತ್ತಿದ್ದರು. ಮದುವೆಯ ವಿಧಿವಿಧಾನ ಮುಗಿಸಿ ದರ್ಶನ ಕೊಡುತ್ತಿದ್ದ ನಾನು ಕಿವಿಗಳನ್ನು ಹರಿಯಬಿಟ್ಟು ಮನದಲ್ಲೇ ಆಲೋಚಿಸಿದೆ. ಒಂದು ಉತ್ತಮ ಕೆಲಸ ಮಾಡಿ ಆದರ್ಶ ಮೆರೆದ ತರುಣನನ್ನು ಅಭಿನಂದಿಸುವವರೇ ಇಲ್ಲವಲ್ಲ. ಆದರ್ಶದ ಹೆಜ್ಜೆಗಳನ್ನು

ತುಳಿಯಲು ಈ ಸಮಾಜದಲ್ಲಿ ಯಾರು ತಾನೆ ಧೈರ್ಯ ತಾಳುವರು? ಉಳಿದ ಜನ ಅಂದರೆ ಬಸವ ಪಥದ ಕಕ್ಷೆಯ ಹೊರಗಿನ ಜನ ಹೇಗೇ ಇರಲಿ ಬಸವ ಮಂಟಪಕ್ಕೆ ಹತ್ತಾರು ವರ್ಷಗಳಿಂದ ಬರುವ ಓರ್ವ ಮಹಿಳೆ ಸಹ, "ಹುಡುಗ ತಪ್ಪು ಮಾಡಿ ಬಿಟ್ಟ" ಎಂದರು ಎಂಬುದು ತಿಳಿದಾಗ ಬಹಳ ವಿಷಾದವೆನಿಸಿತು. ಆದರ್ಶಗಳನ್ನು ಬೆಳೆಸಿಕೊಳ್ಳುವುದು ಅರ್ಥಮಾಡಿಕೊಳ್ಳುವುದು ಎಷ್ಟು ಕಷ್ಟ ಎಂದುಕೊಳ್ಳುತ್ತಿರುವಾಗಲೇ ಆರತಕ್ಷತೆಗೆ ಕೂರಿಸಿದ್ದ ನವದಂಪತಿಗಳ ಬಳಿಗೆ ಬಂದ ಹಿರಿಯರೊಬ್ಬರು ಆ ಹುಡುಗನನ್ನು ಕುರಿತು "ಯೂ ಆರ್ ಗ್ರೇಟ್" ಎಂದು ಅಭಿನಂದಿಸಿದಾಗ ನನಗೆ ಸಂತೋಷ ವೆನಿಸಿತು; ಪರವಾಗಿಲ್ಲ ಕೆಲವರಾದರೂ ಅರ್ಥ ಮಾಡಿಕೊಂಡಿದ್ದಾರೆ. ಎಂದು. ಇಂಥ ಮದುವೆ ಪಾಶ್ಚಾತ್ಯ ದೇಶಗಳಲ್ಲಿ ಅಸಹಜವೇನಲ್ಲ; ಸಂಪ್ರದಾಯ ಬದ್ಧ ಭಾರತದಲ್ಲಿ ಅನೂಹ್ಯ.

ನಮ್ಮ ಕಣ್ಣೆದುರಿಗೆ ಬೆಳೆದ ಹುಡುಗಿ ಮದುವೆಯಾಗಿ, ಉತ್ತಮ ದಂಪತಿಗಳಾಗಿದ್ದರು. ಒಂದು ಮಗುವು ಆಯಿತು. ಇಬ್ಬರಿಗೂ ಕೆಲಸ ಸಿಕ್ಕಿತ್ತು. ಸರಳವಾಗಿ ಸುಖವಾಗಿ ಬಾಳುತ್ತಿರುವಾಗಲೇ ವಿಧಿಯ ಅಟ್ಟಹಾಸ ಗಂಡ ಹೃದಯಾಘಾತವಾಗಿ ತೀರಿಕೊಂಡ. ಮಗುವಿಗೆ ಒಂದು ವರ್ಷ. ಹುಡುಗಿಯೂ ಸಣ್ಣ ವಯಸ್ಸಿನವಳು. ಸುದೀರ್ಘ ಜೀವನವನ್ನು ಎದುರಿಸುವ ಬಗೆ ಎಂತು ಎಂಬ ಕಳವಳ ನಮ್ಮೆಲ್ಲರನ್ನು ಕಾಡಿತು. ತುಂಬಾ ಹಣ ಉಳ್ಳವರಾದರೆ ವರದಕ್ಷಿಣೆ, ಆಸ್ತಿ ಕೊಟ್ಟರೆ ಅದರ ಆಮಿಷಕ್ಕಾದರೂ ವಿವಾಹವಾಗಬಹುದು. ಇವರು ಬಡವರು, ದುಡಿದೇ ತಿನ್ನಬೇಕು. ಜೊತೆಗೆ ಒಂದು ಮಗು ಬೇರೆ. ಈಗಾಗಲೇ ನಾವು ಹಲವಾರು ಪುನರ್ ವಿವಾಹಗಳನ್ನು ಮಾಡಿಸಿದ್ದೇವೆ. ಸಾಮಾನ್ಯವಾಗಿ ಇಬ್ಬರೂ ಹಾಕುವ ಕರಾರು ಮಗು ಇರುವ ಮಹಿಳೆ ಬೇಡ, ಮಕ್ಕಳಿರುವ ಪುರುಷ ಬೇಡ. ನನಗೆ ಈ ಬಗ್ಗೆ ತುಂಬಾ ಖೇದವೆನಿಸುತ್ತದೆ. ಪುರುಷನಿಗೆ ಮಕ್ಕಳಿದ್ದರೆ, "ತಾಯಿಯನ್ನು ಕಳೆದುಕೊಂಡು ಅನಾಥವಾಗಿರುವ ಮಗುವನ್ನು (ಮಕ್ಕಳನ್ನು) ಸಾಕುವುದು ಪುಣ್ಯದ ಕೆಲಸ." ಎಂದು ಅಂಥ ವಿಧುರನನ್ನು ಮದುವೆಯಾಗಲು ಹೆಣ್ಣುಮಕ್ಕಳು ಮುಂದೆ ಬರಬೇಕು. ಅದೇ ರೀತಿ ಮಗುವಿರುವ ಮಹಿಳೆಯಾದರೆ, ತಂದೆಯ ಪ್ರೀತಿಯಿಂದ ವಂಚಿತವಾದ ಮಗುವನ್ನು ತಾಯಿಯೊಡನೆ ಸಾಕುವುದು ಪುಣ್ಯದ ಕೆಲಸ ಎಂದು ಪುರುಷರು ಭಾವಿಸಬೇಕು. ಬಹುಪಾಲು ಜನರಲ್ಲಿ ಯಾವ ಆದರ್ಶಗಳೂ ಮೊಳೆತಿರುವುದಿಲ್ಲ. ಪತಿ ಸತ್ತಾಗ, ನಂತರ ನಿಸ್ಸಹಾಯಕರಾದ ಹುಡುಗಿ, ಅವರ ತಾಯಿ ಮತ್ತು ತಂಗಿ ಇವರಿಗೆ ಎಲ್ಲ ರೀತಿಯಲ್ಲೂ ನೆರವಾಗುತ್ತಿದ್ದ ಪತಿಯ ಮಿತ್ರನೇ ಆ ಕುಟುಂಬದ ಪಾಲಿನ ಏಕೈಕ ಬಂಧು. ನಾವು ಮರುಗುತ್ತಿದ್ದೆವು. ಮನದಲ್ಲೇ ಅಂದುಕೊಳ್ಳುತ್ತಿದ್ದೆವು. ಏಕೆ ಈತ ತೀರಿಕೊಂಡ ಸ್ನೇಹಿತನ ಹೆಂಡತಿಯನ್ನು ಮದುವೆಯಾಗಬಾರದು? ಬಾಯಿಬಿಟ್ಟು ಹೇಳಲು ಹಿಂಜರಿಕೆ. ಎಂಥಾ ಅವ್ಯಾವಹಾರಿಕ ಸಲಹೆ ಕೊಡುತ್ತಿದ್ದಾರೆ. ವರದಕ್ಷಿಣೆ ತರಬಲ್ಲ ಓರ್ವ ತರುಣನಿಗೆ ವಿಧವೆಯೊಡನೆ ವಿವಾಹವಾಗಲು ಹೇಳಬಹುದೆ? ಇಂಥಾ ಆದರ್ಶಗಳನ್ನು ಇವರು ಕಲಿಸಬಹುದೇ ಎಂದುಕೊಂಡರೆ ಹೇಗೆ ? ಎಂಬ ಆಲೋಚನೆ ಈ ಹಿಂಜರಿಕೆಯ ಹಿಂದೆ.

ಒಂದು ದಿನ ಆತ ಬಂದು ಸುಮ್ಮನೆ ನಿಂತ. "ಏಕೆ ಏನಾದರೂ ಹೇಳಬೇಕೆ ?" ಎಂದೆ. "ನಾನು ....ಳನ್ನು ಮದುವೆಯಾಗಲು ಬಯಸಿದ್ದೇನೆ." ಎಂದಾಗ ನಮಗೆ ಅಚ್ಚರಿಯೊಡನೆ ಆನಂದವೂ ಆಯಿತು. "ನಮಗಂತೂ ಬಹಳ ಸಂತೋಷ. ಆದರೆ ನಿಮ್ಮ ಮನೆಯಲ್ಲಿ ಒಪ್ಪುವರೆ?"

"ಇನ್ನೂ ತಂದೆಯವರು ಒಪ್ಪಿಲ್ಲ. ನಮ್ಮ ಬಂಧುಗಳ ಮೂಲಕ ಒಪ್ಪಿಸಲು ಯತ್ನಿಸುತ್ತಿದ್ದೇನೆ. ಒಪ್ಪಿದರೆ ಸರಿ. ಇಲ್ಲದಿದ್ದರೂ ನಾನು ಮದುವೆ ಮಾಡಿಕೊಳ್ಳುವೆ. ನೀವು ಮಾಡಿಕೊಡಿರಿ."

"ಸಾಧ್ಯವಾದಷ್ಟೂ ಪ್ರಯತ್ನಿಸಿ ಒಪ್ಪಿಸು." ಎಂದು ಹೇಳಿದೆ. ನಂತರ ಒಂದು ದಿನ ಬಂದು, "ನಮ್ಮ ತಂದೆ ಒಪ್ಪಿದ್ದಾರೆ. ಮದುವೆ ಏರ್ಪಾಡು ಮಾಡುತ್ತಾರಂತೆ." ಎಂದು ಅಂದಾಗ ಅವರ ತಂದೆಯವರೂ ಅಭಿನಂದನಾರ್ಹರು ಎನ್ನಿಸಿತು. ಮದುವೆ ಸಾಂಗವಾಗಿ ನೆರವೇರಿತು. ಇಲ್ಲಿ ಮದುವೆಯಾದ ಮಗ, ಅದನ್ನು ಪ್ರೋತ್ಸಾಹಿಸಿದ ತಂದೆ ಇಬ್ಬರೂ ಅಭಿನಂದನಾರ್ಹರು. ಏಕೆಂದರೆ ನಮ್ಮ ಸಮಾಜ ಸಂಪ್ರದಾಯದ ಕಪಿಮುಷ್ಟಿಯಲ್ಲಿ ಸಿಕ್ಕಿ ಒದ್ದಾಡುತ್ತಿದೆ. ವ್ಯವಸ್ಥೆಯ ಸುಳಿಯು ಗುಂಟ ಗರಗರ ಸುತ್ತುತ್ತಿದೆ. ಅದರಿಂದ ಹೊರಹೋಗಿ ಆದರ್ಶದ ಹೆಜ್ಜೆ ತುಳಿಯುತ್ತೇನೆ ಎನ್ನುವವನನ್ನು ಕರಕರ ಕಾಡುತ್ತದೆ. ಇಂಥ ವಿಷಮ ವಾತಾವರಣದಲ್ಲೂ ಆದರ್ಶ ಪಥದಲ್ಲಿ ದಿಟ್ಟ ಹೆಜ್ಜೆ ಇಡುವವರು ಅಭಿನಂದನಾರ್ಹರು.

- ಮಾತಾಜಿ

ಬಸವ ವಚನಾಮೃತ

300. ಶರಣರ ಸಂಗ ಅತ್ಯವಶ್ಯಕ

ಏನನೋದಿ ಏನ ಕೇಳಿ, ಏನು ಮಾಡಿಯೂ ಫಲವೇನು,
ನಿಮ್ಮವರೊಲಿಯದನ್ನಕ್ಕ ?
ಶಿವ ಶಿವ, ಮಹಾದೇವಾ,
ಬಾಳಿಲ್ಲದವಳ ಓಲೆಯಂತಾಯಿತ್ತೆನಗೆ, ಲಿಂಗದೇವಾ. -ಬ.ವ.ದೀ.298

ಕೆಲವು ವ್ಯಕ್ತಿಗಳು ಶರಣರ ಸಂಗದ ಮಹತ್ವವನ್ನರಿಯದೆ ಪುಸ್ತಕಗಳನ್ನು ಓದಿ ತಾವು ಜ್ಞಾನವನ್ನು ಪಡೆಯುವುದಾಗಿ ಹೇಳಿಕೊಳ್ಳುತ್ತಾರೆ. ನಿರಂತರವಾಗಿ ವಿವಿಧ ಮಾರ್ಗಾನುಸರಣೆ ಮಾಡುವ ಜನರ ಪ್ರವಚನ, ಕೀರ್ತನೆಗಳನ್ನು ಕೇಳುತ್ತಾರೆ. ವಿವಿಧ ಅಧ್ಯಾತ್ಮಿಕ ಮಾರ್ಗಗಳನ್ನು ಅನುಸರಿಸುವ ಪ್ರಯೋಗ ಮಾಡುತ್ತಾರೆ. ಯಾವುದೊಂದನ್ನೂ ಸ್ಥಿರವಾಗಿ ಹಿಡಿಯದೆ ಎಲ್ಲವನ್ನೂ, ಎಲ್ಲರ ಬೋಧೆಯನ್ನು ಕೇಳುತ್ತಿರುತ್ತಾರೆ. ಎಲ್ಲರ ಮಾರ್ಗಗಳನ್ನೂ ಪ್ರಯೋಗ ಮಾಡುತ್ತಾರೆ. ಆಗ ಏಕದೇವೋಪಾಸಕರು, ತತ್ವನಿಷ್ಠರೂ ಆದ ಶರಣರು ಇವರನ್ನು ಇಷ್ಟಪಡುವುದಿಲ್ಲ. ಅದಕ್ಕಾಗಿ ಧರ್ಮಪಿತರು ತಮ್ಮ ಮೇಲೆ ಹಾಕಿಕೊಂಡು ಹೇಳುತ್ತಾರೆ, "ನಿಮ್ಮವರು ಅಂದರೆ ಸಹ ಧರ್ಮೀಯರಾದ ಶರಣರು ಒಲಿಯದಿದ್ದರೆ, ತಮ್ಮ ಗಣಕೂಟದೊಳಕ್ಕೆ ಸೇರಿಸಿಕೊಳ್ಳದಿದ್ದರೆ ಅಂಥ ಜೀವನದಿಂದ ಪ್ರಯೋಜನವೇನು? ಬಾಳಿಲ್ಲದವಳ ಓಲೆಯಂತೆ ಅಂತಹ ವ್ಯಕ್ತಿಯ ವೈಭವದ ಜೀವನ."

ಅತ್ಯಂತ ಪ್ರೀತಿಪಾತ್ರನಾದ ಗಂಡನು ತೀರಿಕೊಂಡಿರುವನೆಂದುಕೊಳ್ಳುವ. ಇವರ ಮನೆಯಲ್ಲಿ ವಿಪರೀತ ಆಭರಣಗಳಿರುತ್ತವೆ ಎಂದುಕೊಳ್ಳೋಣ. ಆಗ ಆಕೆ ಆ ದುಃಖದ ಸ್ಥಿತಿಯಲ್ಲಿ ಆಭರಣಗಳನ್ನು ಧರಿಸಿ ಸಂತೋಷದಿಂದ ಮೆರೆಯಬಲ್ಲಳೆ? (ಒಮ್ಮೆ ಒಬ್ಬ ಜನಪ್ರಿಯ, ಸಾಹಸಿ ಪತ್ರಿಕಾ ಸಂಪಾದಕರು ಅಪಘಾತದಲ್ಲಿ ಮಡಿದರು. ಎಲ್ಲರ ಜೀವ ಮಮ್ಮಲ ಮರುಗಿತು. ಪತ್ರ ಬರೆದು ತೀರಿಕೊಂಡವರ ಪತ್ನಿಗೆ ಧೈರ್ಯ ತುಂಬಿ ಪತ್ರಿಕೆಯನ್ನು ನಿಲ್ಲಿಸದೆ ನಡೆಸಿಕೊಂಡು ಹೋಗಿರಿ ಎಂದು ಪ್ರೋತ್ಸಾಹಿಸಿದ್ದಲ್ಲದೆ ಧನ ಸಹಾಯವನ್ನು ಮಾಡಲು ಸಿದ್ಧತೆ ಮಾಡಿಕೊಂಡು ಶರಣ ಮೇಳಕ್ಕೆ ಆಹ್ವಾನಿಸಿದ್ದೆವು. ಆ ತಾಯಿ ಮಾಡಿಕೊಂಡು ಬಂದ ಮೇಕಪ್, ಫ್ಯಾಷ್, ಧರಿಸಿದ ಕಿವಿಯೋಲೆ ಮತ್ತು ಇತರ ಆಭರಣಗಳ ವೈಭವ ನೋಡಿ ಮನಸ್ಸಿಗೆ ಕೆಟ್ಟೆನಿಸಿತು. ಕೊಡಬೇಕೆಂದು ತೆಗೆದಿಟ್ಟದ್ದ ಹಣದಲ್ಲಿ ಸ್ವಲ್ಪ ಮಾತ್ರ ಕೊಟ್ಟೆವು. ಪ್ರೀತಿಪಾತ್ರ ಪತಿಯನ್ನು ಕಳೆದುಕೊಂಡ ಸ್ವಲ್ಪವೇ ಸಮಯದಲ್ಲಿ ಸಮಯದಲ್ಲಿ ಈ ರೀತಿ ಅಲಂಕರಿಸಿಕೊಂಡುದು ತೀರಾ ಅನುಚಿತ ಎನ್ನಿಸಿತು).

ನಾವು ಹೇಳುತ್ತಿರುತ್ತೇವೆ, ನಿಮ್ಮ ಮನೆಯಲ್ಲಿ ಹತ್ತಾರು ದೇವತೆಗಳ, ಮಹಾತ್ಮರ ಫೋಟೋ ಇರಬಹುದು, ಧರ್ಮಗುರು ಬಸವಣ್ಣನವರ ಭಾವಚಿತ್ರವಿಲ್ಲದಿದ್ದರೆ ಮಾಂಗಲ್ಯ ಧರಿಸದೆ ಇನ್ನಿತರ ಒಡವೆ ಹಾಕಿಕೊಂಡ ಮುತ್ತೈದೆಯಂತೆ ಎಂದು. ಉಳಿದ ಒಡವೆಗಳು ಇಲ್ಲದಿದ್ದರಷ್ಟೆ ಮಾಂಗಲ್ಯವಷ್ಟೇ ಇದ್ದರೆ ಆಕೆ ಗೌರವಿಸಲ್ಪಡುತ್ತಾಳೆ. ಇದೇ ರೀತಿ ಶರಣ ಒಡನಾಟ. ಶ್ರೀಮಂತರಿಗೆ ಬಹಳಷ್ಟು ಶ್ರೀಮಂತರ ಸಾಂಗತ್ಯ, ಅವರೊಡನೆ ವ್ಯವಹಾರಿಕ ಸಂಬಂಧ ಇರುವುದರಿಂದ ಅಂಥವರು ಸಮಾಜದಲ್ಲಿ ಗಣ್ಯರೆನಿಸಿಕೊಳ್ಳುತ್ತಾರೆ. ಆದರೆ ಅವರು ಶರಣರ ಸಾಂಗತ್ಯವನ್ನು ಹೊಂದದಿದ್ದರೆ ಅಂದರೆ ದೇವಜನರೊಲಿಮೆ ಪಡೆಯದಿದ್ದರೆ ಅವರ ಜೀವನ ಪತಿಯಿಲ್ಲದ ವಿಧವೆ ಸಾಕಷ್ಟು ಆಭರಣ ಹೊಂದಿದ್ದಂತೆ.

ಸಾಧಕ ಜೀವಿಯಾಗಿ ಏಕಾಂಗಿಯಾಗಿದ್ದಾಗ ಸಮಾನ ಮನಸ್ಕರನ್ನು ಹೊಂದಿರದ ನಿರಾಶಾ ಮನೋಭಾವವನ್ನು ಗುರು ಬಸವಣ್ಣನವರ ಈ ವಚನದಲ್ಲಿ ಕಾಣುತ್ತೇವೆ.

301. ದೌರ್ಬಲ್ಯದ ಉಪಟಳ

ಮುನ್ನೂರರವತ್ತು ದಿನ ಶ್ರವವ ಮಾಡಿ,
ಕಳನೇರಿ ಕೈ ಮರೆದಂತಾಯಿತ್ತೆನ್ನ ಭಕ್ತಿ!

ಎನಿಸು ಕಾಲ ಲಿಂಗಾರ್ಚನೆಯ ಮಾಡಿ ಏವೆನಯ್ಯಾ
ಮನದಲ್ಲಿ ದೃಢವಿಲ್ಲದನ್ನಕ್ಕ ?
ಕೊಡನ ತುಂಬಿದ ಹಾಲ ಕೆಡಹಿ,
ಉಡುಗಲೆನ್ನಳವೆ, ಲಿಂಗದೇವಾ ? - ಬ.ವ.ದೀ.299

ಒಬ್ಬ ಯೋಧ ವರ್ಷವಿಡೀ, ಸುಮಾರು ಮುನ್ನೂರ ಅರವತ್ತು ದಿವಸ ಶಸ್ತ್ರಾಭ್ಯಾಸವನ್ನು ಮಾಡಿ ಪರಿಣಿತನಾಗುತ್ತಾನೆ. ಆದರೆ ಕಳ ಎಂದರೆ ಯುದ್ಧಭೂಮಿಗೆ ಹೋದಾಗ, ಶತ್ರುವನ್ನು ಎದುರಿಸುವ ಸನ್ನಿವೇಶ ಬಂದಾಗ ಶಸ್ತ್ರವನ್ನು ಮರೆತು ಬಂದುದರ ಅರಿವಾಗುತ್ತದೆ.

ದೃಢವಿಲ್ಲದ ಭಕ್ತಿಯ ಪರಿಯೂ ಹೀಗೆ ಇದೆ. ಎಷ್ಟು ಕಾಲ ಲಿಂಗಾರ್ಚನೆಯನ್ನು ಮಾಡಿದರೂ ಮನಸ್ಸು ಚಂಚಲಗೊಂಡು ದುಡುಕಿ ಕೆಟ್ಟ ಕೆಲಸವನ್ನು ಮಾಡಿದರೆ ಅಂತರಂಗದಲ್ಲಿ ಕೆಟ್ಟ ಆಲೋಚನೆ ಸುಳಿದರೆ ಮಾಡಿದ ಲಿಂಗಾರ್ಚನೆಯ ಫಲವೆಲ್ಲ ವ್ಯರ್ಥವಾಗುವುದು. ಕೊಡದ ತುಂಬ ಹಾಲು ತುಂಬಿ, ಆ ಕೊಡವು ಕೈಜಾರಿ ಉರುಳಿದರೆ ಹಾಲು ನೆಲದ ತುಂಬ ಹರಡಿಕೊಳ್ಳುವುದು. ಆ ಹಾಲನ್ನು ಪುನಃ ಬಳಿದು (ಉಡುಗಿ) ತೆಗೆದುಕೊಳ್ಳಲು ಸಾಧ್ಯವೆ? ಹಾಲು ಅತಿ ಸೂಕ್ಷ್ಮವಾದ ವಸ್ತು. ಬೇರೆ ಏನೂ ಅದರ ಜೊತೆ ಸೇರಬಾರದು. ಸೇರಿದರೆ ಮಲಿನವಾಗುವುದಷ್ಟೆ ಅಲ್ಲ ಕೆಟ್ಟು ಹೋಗುವುದು. ಹಾಗೆ, ಮಾನವ ಸಹಜ ದೌರ್ಬಲ್ಯ ಮೇಲುಗೈ ಸಾಧಿಸಿ ಬಿಟ್ಟರೆ ಕ್ಷಣಾರ್ಧದಲ್ಲಿ ಶೂರ ಹೇಗೆ ಶತ್ರುವಿನಿಂದ ಹತನಾಗುವನೋ, ನೆಲದ ಮೇಲೆ ಬಿದ್ದ ಹಾಲು ಹೇಗೆ ಕೆಡುವುದೋ ಹಾಗೆ ವ್ಯಕ್ತಿಯು ಪತಿತನಾಗುವನು, ಭಕ್ತಿಗೆ ಚ್ಯುತಿ ಬರುತ್ತದೆ. ನೈತಿಕ ಶುದ್ಧಿಯು ಅಧ್ಯಾತ್ಮಿಕ ಸಾಧನೆಗೆ, ದೇವರ ಒಲುಮೆಗೆ ಸೋಪಾನ.

302. ಉದ್ಧಟತನದ ವಾದ

ಶಬ್ದ ಸುಖಕ್ಕೆ ಮಚ್ಚಿ, ಮಾತಿಂಗೆ ಮಾತನೆ ಕೊಟ್ಟು ಕೆಟ್ಟೆನಯ್ಯಾ!
ಅನುಭಾವ ಅಕ್ಕವೆಯಾಗದೆ, ಬೆಬ್ಬನೆ ಬೆರೆತೆನಯ್ಯಾ
ಅಮೃತವ ಕೊಡನ ತುಂಬಿ ಒಡೆಯ ಹೊಯ್ದು ಅರಸಲುಂಟೇ?
ಸ್ವಾಮಿ -ಭೃತ್ಯ ಸಂಬಂಧವೆ ಎನ್ನ ಭಕ್ತಿ?
ಪ್ರತ್ಯುತ್ತರ ನಾಯಕನರಕ ಲಿಂಗದೇವಾ! - ಬ.ವ.ದೀ.300

ಕೆಲವರು ತಾರ್ಕಿಕವಾಗಿ ಮಾತನಾಡುವುದರಲ್ಲಿ ಬಹಳ ಜಾಣರಿರುತ್ತಾರೆ. ತಮ್ಮ ಮಾತಿನ ಬಗ್ಗೆ ತಾವೇ ಹೆಮ್ಮೆಯುಳ್ಳವರಾಗಿ ಹಿತೋಪದೇಶ ಮಾಡುವವರು ಯಾರು ಎಂಬುದನ್ನು ಲಕ್ಷಿಸದೆ ತಿರುತಿರುಗಿ ಎದುರಾಡುತ್ತಾರೆ. ನಾಸ್ತಿಕ ಪ್ರಶ್ನೆಗಳನ್ನು ಕೇಳುತ್ತಾರೆ. ಅನುಭಾವ, ಅಧ್ಯಾತ್ಮಿಕ ಸಾಧನೆ ಪರಿಪಕ್ವವಾಗದೆ ಶಬ್ದ ಜಾಲವನ್ನು ಹರಡುತ್ತ ಉಬ್ಬಿ ಉಬ್ಬಿ ಮಾತನಾಡುತ್ತಾರೆ. ಇದು ತಪ್ಪು. ಪ್ರಶ್ನೆಗಳನ್ನು ಕೇಳುವುದರಲ್ಲಿ ಎರಡು ಬಗೆಯವರಿರುತ್ತಾರೆ. ತಮ್ಮ ವಾಗ್‌ವೈಖರಿ ಮೆರೆಸಿ, ಗುರು ಹಿರಿಯರ ಮುಂದೆ ಉದ್ಧಟತನದಿಂದ ವರ್ತಿಸಿ ಅತಿ ಬುದ್ಧವಂತರೆಂದು ತೋರಿಸಿಕೊಳ್ಳುವವರು ಒಂದು ಬಗೆಯಾದರೆ, ಜ್ಞಾನಿಗಳ ಬಳಿ ಗುರುಗಳ ಬಳಿ ಪ್ರಶ್ನೆ ಕೇಳಿ ಹೆಚ್ಚಿನ ವಿಷಯ ತಿಳಿದುಕೊಳ್ಳ ಬೇಕೆನ್ನುವವರು ಇನ್ನೊಂದು ಬಗೆ. ಇವರು ಕೇಳುವುದರಲ್ಲಿ ಮುಮುಕ್ಷುಭಾವ, ವಿನಯ ಇದ್ದರೆ, ಮೊದಲಿನ ಬಗೆಯವರಲ್ಲಿ ಅಹಂಕಾರ ತುಂಬಿರುತ್ತದೆ. ಅಂಥವರನ್ನು ಕುರಿತು ಧರ್ಮಪಿತರು ಈ ವಚನದಲ್ಲಿ ಪ್ರಸ್ತಾಪಿಸಿದ್ದಾರೆ.

ಒಂದು ಕೊಡದಲ್ಲಿ ಅಮೃತ(ಹಾಲು)ವನ್ನು ತುಂಬಿ ಅದನ್ನು ಒಡೆದು ಹಾಕಿದ ನಂತರ ಆ ಅಮೃತವನ್ನು ತನ್ನ ಶುದ್ಧ ರೂಪದಲ್ಲಿ ಹುಡುಕಲು ಸಾಧ್ಯವೆ? ಹಾಗೆ, ಜ್ಞಾನಿಗಳಾದ ಗುರು ಜಂಗಮರೊಡನೆ ಉದ್ಧಟತನದಿಂದ ವರ್ತಿಸಿ ಅವರ ಮನಸ್ಸನ್ನು ನೋಯಿಸಿ ನಂತರ ಅವರ ಅನುಗ್ರಹ ಬಯಸಿದರೆ ಆಗುವುದೇ? ಸ್ವಾಮಿ -ಭೃತ್ಯ ಸಂಬಂಧದಲ್ಲಿ ಕೆಲವು ಶಿಷ್ಟಾಚಾರಗಳಿವೆ. ಮಾಲಿಕ -ಸೇವಕ, ಗುರು -ಶಿಷ್ಯ, ಪತಿ -ಪತ್ನಿ, ತಾಯಿ ತಂದೆ - ಮಕ್ಕಳು, ಹಿರಿಯರು -ಕಿರಿಯರು ಮುಂತಾದಲ್ಲಿ ಈ ಸ್ವಾಮಿ - ಭೃತ್ಯ ಸಂಬಂಧವಿರುತ್ತದೆ. ಅಲ್ಲಿ ವಿನಯ ಬಹುಮುಖ್ಯ. ಸೇವಕರು, ಶಿಷ್ಯರು, ಪತ್ನಿ ಮಕ್ಕಳು, ಕಿರಿಯರು ತಮ್ಮ ಒಡೆಯರಿಗೆ ಉದ್ಧಟತನದಿಂದ ಪ್ರತ್ಯುತ್ತರ ಕೊಡುವುದು ಮೋಜಿನ

ಆಟವಾಗಿ ಕಾಣುವುದಾದರೂ ಅದು ಸಂಬಂಧವನ್ನು ಕೆಡಿಸಿ ಜೀವನವನ್ನು ನರಕ ಸದೃಶವಾಗಿ ಮಾಡುವುದು.

303. ಜೀವನವು ಒಂದು ಯುದ್ಧಭೂಮಿ

ಅಂಕವೋಡಿದಡೆ ತೆತ್ತಿಗಂಗೆ ಭಂಗವಯ್ಯಾ;
ಕಾದಿ ಗೆಲಿಸಯ್ಯಾ ಎನ್ನನು.
ಕಾದಿ ಗೆಲಿಸಯ್ಯಾ ಲಿಂಗದೇವಯ್ಯಾ.
ಎನ್ನ ತನು ಮನ ಧನದಲ್ಲಿ ವಂಚನೆಯಿಲ್ಲದೆ - ಬ.ವ.ದೀ.301

ಒಬ್ಬ ಸೈನಿಕ ಯುದ್ಧಭೂಮಿಯಲ್ಲಿ ಶತ್ರುವಿಗೆ ಬೆನ್ನು ತೋರಿಸಿ ಓಡಿದರೆ ಅವನಿಗೆ ಆಶ್ರಯ ಕೊಟ್ಟ ರಾಜನಿಗೆ ಅಥವಾ ದೇಶಕ್ಕೆ ಅವಮಾನ, ಅಪಕೀರ್ತಿ. ಅದೇ ರೀತಿ ಒಬ್ಬ ಭಕ್ತ ಜೀವನವೆಂಬ ರಣಾಂಗಣದಲ್ಲಿ ಕಷ್ಟಕಾರ್ಪಣ್ಯಗಳೆಂಬ ಶತ್ರುವಿಗೆ ಹೆದರಿ ಬೆನ್ನು ತೋರಿಸಿದರೆ ಅರ್ಥಾತ್ ಆತ್ಮಹತ್ಯೆ ಮಾಡಿಕೊಂಡರೆ, ಮಾನಸಿಕವಾಗಿ ಅಂಜಿ ತತ್ವನಿಷ್ಠೆ ತೊರೆದರೆ ಆಗ ಲಿಂಗದೇವನಿಗೆ ಅಪಕೀರ್ತಿ. "ನೋಡಪ್ಪ ಇವನು ದೇವಭಕ್ತನಂತೆ ನಿಂದೆ, ಬಡತನ, ಕಷ್ಟಕಾರ್ಪಣ್ಯಕ್ಕೆ ಹೆದರಿ ತತ್ವವನ್ನು ಬಿಟ್ಟುಬಿಟ್ಟ ಎಂದು ಜನರು ಆಡಿಕೊಳ್ಳುವರು. ಇದರಿಂದ ನಿನಗೇ ದೂಷಣೆ. ಆದ್ದರಿಂದ ಈ ಜೀವನವೆಂಬ ಯುದ್ಧರಂಗದಲ್ಲಿ ನಾನು ಗೆಲ್ಲುವಂತೆ ಮಾಡು. ಲಿಂಗದೇವಾ, ತನು ಮನ ಧನದಲ್ಲಿ ವಂಚನೆ ಇಲ್ಲದಂತಹ ನಿಸ್ಪೃಹತೆ, ಪ್ರಾಮಾಣಿಕತೆ, ಆತ್ಮಸ್ಥೈರ್ಯ ಮುಂತಾದ ಅಸ್ತ್ರಗಳ ಬಲದಿಂದ ನಾನು ಈ ದಿವ್ಯ ಜೀವನದ ಸಮರದಲ್ಲಿ ಜಯಶಾಲಿಯಾಗುವಂತೆ ಮಾಡು." ಎಂದು ಗುರು ಬಸವಣ್ಣನವರು ಲಿಂಗದೇವನಲ್ಲಿ ಪ್ರಾರ್ಥಿಸಿದ್ದಾರೆ.

ತನುವಿನಿಂದ ವಂಚಿಸದೆ ಕಾಯಕವನ್ನು ಮಾಡಬೇಕು.
ಮನದಿಂದ ವಂಚಿಸದೆ ಲಿಂಗದೇವನಲ್ಲಿ ಶರಣಾಗತನಾಗಬೇಕು
ಧನದಿಂದ ವಂಚಿಸದೆ ಜಂಗಮಕ್ಕೆ ಸತ್ಪಾತ್ರಕ್ಕೆ ಸಲ್ಲಿಸಬೇಕು
ಇದರಿಂದ ಜೀವನವನ್ನು ಸಾರ್ಥಕಗೊಳಿಸಿಕೊಳ್ಳಲು ಸಾಧ್ಯ.

304. ಜಂಗಮ ಭಕ್ತಿ ಪರೀಕ್ಷಕ

ಹೇಡಿ ಬಿರಿದ ಕಟ್ಟಿದಂತೆ ಆಯಿತ್ತೆನ್ನ ವೇಷ:
ಕಾದಬೇಕು, ಕಾದುವಡೆ ಮನವಿಲ್ಲ-
ಆಗಳೆ ಹೋಯಿತ್ತು ಬಿರಿದು;
ಹಗರಣ ನಗೆಗೆಡೆಯಾಯಿತ್ತು!
ಮಾರಂಕ ಜಂಗಮ ಮನೆಗೆ ಬಂದಡೆ
ಕಾಣದಂತಡ್ಡ ಮುಸುಡಿಯಿಟ್ಟಡೆ
ಲಿಂಗದೇವ ಹಲುದೋರೆ ಮೂಗಕೊಯ್ವ. - ಬ.ವ.ದೀ.302

ಒಬ್ಬ ಹೇಡಿಯನ್ನು ಕರೆತಂದು ಅವನಿಗೆ ವೀರನ ವೇಷಭೂಷಣ ತೊಡಿಸಿ, ಪರಮವೀರ ಎಂಬ ಪ್ರಶಸ್ತಿ ನೀಡಿ ಹೋರಾಟದ ಕಣಕ್ಕೆ ಬಿಟ್ಟರೆ ಅವನು ಕಾದಬಲ್ಲನೆ ? ಕಾದುವುದು ಅತಿ ಅವಶ್ಯವಾಗಿದ್ದರೂ ಅವನಿಗೆ ಯುದ್ಧ ಮಾಡುವ ಮನಸ್ಸಿಲ್ಲ, ಮನದಲ್ಲಿ ಧೈರ್ಯವೂ ಇಲ್ಲ. ಆಗ ಎದುರಾಳಿ ಕತ್ತಿಯನ್ನು ಝಳಪಿಸುತ್ತಿದ್ದಂತೆಯೇ ಈ ವೇಷಧಾರಿ ಓಡಲು ಆರಂಭಿಸುವನು. ಆಗ ಅವನಿಗೆ ಕೊಡಲ್ಪಟ್ಟ ಪರಮ ವೀರನೆಂಬ ಬಿರುದು ಹಾರಿಹೋಗುವುದು. ಈ ವೇಷಧಾರಿ ವೀರನ ಓಟ ಒಂದು ಹಗರಣದಂತಾಗಿ ನಗೆಗೆ, ಅಪಹಾಸ್ಯಕ್ಕೆ ವಸ್ತುವಾಗುವುದು.

ಅದೇ ರೀತಿ ಭಕ್ತಿಮಾರ್ಗದಲ್ಲಿರುವ ಭಕ್ತನ ಸ್ಥಿತಿ. ನಿಜವಾದ ವೀರನಾದರೆ ಶತ್ರುವು ಕಾದಲು ಬಂದಾಗ ತನ್ನ ಶೌರ್ಯವನ್ನು ಪ್ರದರ್ಶಿಸಲು ಉತ್ತಮ ಅವಕಾಶ ಒದಗಿ ಬಂದಿತೆಂದು ಚಿಮ್ಮಿದ ಉತ್ಸಾಹದಿಂದ ಎದುರಾಳಿಯನ್ನು ಎದುರಿಸಲು ಜಿಗಿಯುವನು. ಹೇಡಿಯಾಗಿದ್ದರೆ ಶತ್ರುವನ್ನು ಕಂಡು ಓಡುವನು. ಹಾಗೆ, ನಿಜಭಕ್ತನಾದರೆ ಸಾಮಾಜಿಕ-ಧಾರ್ಮಿಕ ಕೆಲಸಗಳಿಗಾಗಿ ದಾನ ಕೇಳಲು ಬಂದ ಜಂಗಮ ಮೂರ್ತಿಯನ್ನು ಕಂಡು ಸಂಭ್ರಮಿಸಿ ತನಗೆ ಸತ್ಪಾತ್ರಕ್ಕೆ ಸಲ್ಲಿಸಲು ಸದವಕಾಶ

ಪ್ರಾಪ್ತಿಯಾಯಿತೆಂದು ಹಿಗ್ಗಿ ಧನ ದಾಸೋಹ ಮಾಡುವನು. ಅರೆ ಭಕ್ತ ಅಥವಾ ವೇಷಧಾರಿ ಭಕ್ತನಾದರೆ ಜಂಗಮ ಮೂರ್ತಿ ಎಂಬ (ಇವನ ಭಕ್ತಿಯನ್ನು ಪರೀಕ್ಷಿಸಲು ಬಂದ) ಎದುರಾಳಿಯನ್ನು ಕಂಡು ತನ್ನನ್ನು ತಾನು ಕಾಣಿಸಿಕೊಳ್ಳದಂತೆ ಅಡ್ಡಮುಖ ಮಾಡಿ ಒಳಗೆ ಹೋಗುವನು. ಯಜಮಾನರು ಮನೆಯಲ್ಲಿಲ್ಲ ಎಂದು ಹೇಳಲು ಹೆಂಡತಿಗೆ ಅಥವಾ ಸೇವಕರಿಗೆ ಸೂಚನೆ ನೀಡುವನು. ಇಂಥವರಿಗೆ ಲಿಂಗದೇವನ ಶಿಕ್ಷೆ ಕಾದಿರುತ್ತದೆ. ಏಕೆಂದರೆ ತನ್ನ, ತನ್ನ ಹೆಂಡತಿ ಮಕ್ಕಳ ಸುಖಭೋಗಗಳಿಗೆ ಸಾಕಷ್ಟು ಹಣವಿರುತ್ತದೆ. ಧರ್ಮಕಾರ್ಯಕ್ಕೆ ಮಾತ್ರ ಹಣವಿರುವುದಿಲ್ಲ ಎಂಬ ಸ್ವಾರ್ಥಿಗೆ ದೇವರ ಕೋಪ ಕಟ್ಟಿಟ್ಟ ಬುತ್ತಿ.

ಈ ಆಧುನಿಕ ಯುಗದಲ್ಲಿ ಮತ್ತೊಂದು ಬಗೆಯ (ವೇಷಧಾರಿ) ಭಕ್ತರುಂಟು. ಅವರು ಬಹು ಉದಾರವಾಗಿ ವಾಗ್ದಾನ ಮಾಡಿ ಶಾಲು ಹೊದ್ದಿಸಿಕೊಂಡು ಸನ್ಮಾನ ಮಾಡಿಸಿಕೊಳ್ಳುವುದುಂಟು. ಒಂದು ಕಾಸಿನಷ್ಟೂ ದಾನ ಮಾಡುವುದಿಲ್ಲ. ಇನ್ನೊಂದು ಬಗೆಯವರು ಮುಂದಿನ ತಾರೀಖಿನ ಚೆಕ್ ಬರೆದು ಕೊಟ್ಟುಬಿಡುವರು. ಆ ಚೆಕ್ ದುಡ್ಡಿಲ್ಲವೆಂದು ವಾಪಸ್ಸು ಬರುವುದು; ಸಂಸ್ಥೆಯವರಿಗೆ ಖಾತೆಯಲ್ಲಿ ದಂಡವೂ ವಿಧಿಸಲ್ಪಡುವುದು. ಇಂಥ ವಂಚನೆ ಮಾಡುವ ಬದಲು ಮುಖ ಮುರಿದಂತೆ ಕೊಡಲು ಆಗುವುದಿಲ್ಲ ಎಂದು ಹೇಳುವುದೇ ಹೆಚ್ಚು ಪುಣ್ಯಕರ (?) ವಲ್ಲವೆ?

305. ನಿಜ ಶರಣರ ನಡೆ

ಅಚ್ಚ ಶರಣರು ನಿಮ್ಮ ನಿಚ್ಚ ನಿಚ್ಚ ನೆನೆವರು;
ಬಚ್ಚ ಬರಿಯ ಮಾತನಾಡುವೆನು ನಾನು
ಒಪ್ಪಚ್ಚಿ ಅರೆಭಕ್ತಿ ನೆನೆಯಲೀಯದು ನಿಮ್ಮ
ಮೆಚ್ಚರು ನಿಮ್ಮವರು ಎನ್ನನು ಲಿಂಗದೇವಾ. - ಬ.ವ.ದೀ.303

ಅಪ್ಪಟ ಶರಣರು ಲಿಂಗದೇವನನ್ನು ನಿತ್ಯವೂ, ಸದಾಕಾಲದಲ್ಲೂ ಬಿಡದೆ ನೆನೆಯುತ್ತಾರೆ. ನಾನು ಬರಿಯ ಮಾತನಾಡುತ್ತ ದೇವನನ್ನು ನಿತ್ಯವೂ ನೆನಯಬೇಕು ಎಂದು ಹೇಳುತ್ತೇನೆ ಮಾತ್ರ. ನನ್ನಲ್ಲಿರುವ ಅರೆಭಕ್ತಿಯು ದೇವಾ ನಿನ್ನನ್ನು ನೆನಯಲು ಬಿಡುವುದಿಲ್ಲ. ಆದ್ದರಿಂದಲೇ ನಮ್ಮ ಶರಣರು ಅಂಥ ಹೊಯ್ದಾಡುವ ಮನಸ್ಸಿನ ನನ್ನನ್ನು ಮೆಚ್ಚಿಕೊಳ್ಳರು.

ಈ ಜಗತ್ತಿನಲ್ಲಿ ಯಾಂತ್ರಿಕ ಭಕ್ತಿ, ತೋರಿಕೆಯ ಭಕ್ತಿ, ಮತ್ತೊಬ್ಬರನ್ನು ಮೆಚ್ಚಿಸಲು ಮಾಡುವ ಭಕ್ತಿ - ಇಂಥ ಭಕ್ತಿವಂತರ ಸಂಖ್ಯೆಯೇ ಬಹಳ. ಆದರೆ ನಿಜವಾದ ಶರಣ ಸಾಧಕರು ಅಂಥ ತೋರಿಕೆಯ ಭಕ್ತಿವಂತರ ನಾಟಕೀಯ ಭಕ್ತಿಯನ್ನು ಮೆಚ್ಚಿಕೊಳ್ಳರು.

306. ಶರಣರ ನಿಭಾವಣೆ ಕಷ್ಟಸಾಧ್ಯ

ಆಡುವುದಳವಟ್ಟಿತ್ತು, ಹಾಡುವುದಳವಟ್ಟಿತ್ತು;
ಅರ್ಚನೆಯಳವಟ್ಟಿತ್ತು, ಪೂಜನೆಯಳವಟ್ಟಿತ್ತು;
ನಿತ್ಯ ಲಿಂಗಾರ್ಚನೆ ಮುನ್ನವೆಯಳವಟ್ಟಿತ್ತು;
ಲಿಂಗದೇವರ ಶರಣರು ಬಂದಡೆ,
'ಏಗುವುದು, ಏ ಬೆಸನೆ'ಂಬುದು ಒಪ್ಪಚ್ಚಿ ಅಳವಡದು! -ಬ.ವ.ದಿ. 304

ಶರಣ ಬಂಧುಗಳೊಡನೆ ಗಣ ಮೇಳಾಪದಲ್ಲಿ ಭಾಗಿಗಳಾಗಿ ಭಜನೆ ಮಾಡುತ್ತ ನವಿರಾಗಿ ನರ್ತಿಸುವುದು ಅಳವಡುವುದು ಸುಲಭ. ಸುಶ್ರಾವ್ಯವಾಗಿ ತಾಳ ತಂಬೂರಿಗಳೊಡನೆ ವಚನಗಳನ್ನು ಭಕ್ತಿಗೀತೆಗಳನ್ನು ಹಾಡುವುದೂ ಸಹ ಸುಲಭ. ಇಷ್ಟಲಿಂಗವನ್ನು ಪತ್ರೆ - ಪುಷ್ಪಾದಿಗಳಿಂದ ಅಲಂಕರಿಸಿ, ಅಷ್ಟವಿಧಾರ್ಚನೆ ಮಾಡಿ ಹರ್ಷಿಸುವುದೂ ಸುಲಭ. ತನಗೆ ಅವಶ್ಯವಿದ್ದಾಗ - ವಿವಾಹ, ನಾಮಕರಣ, ಗೃಹಪ್ರವೇಶ, ಲಿಂಗೈಕ್ಯ ಸಂಸ್ಮರಣೆ -ಇತ್ಯಾದಿ ಸಂದರ್ಭಗಳಲ್ಲಿ ಜಂಗಮರನ್ನು ಆಹ್ವಾನಿಸಿ, ಪೂಜಿಸುವುದು ಸುಲಭ. ಎಲ್ಲಕ್ಕಿಂತಲೂ ಸುಲಭ ನಿತ್ಯ ಲಿಂಗಾರ್ಚನೆ. ಏಕೆಂದರೆ ಇಷ್ಟಲಿಂಗದೇವನು ವೈಭವದ ಪೂಜೆ ಬೇಡುವವನಲ್ಲ; ನೀರು ವಿಭೂತಿ ಪತ್ರೆ -ಪುಷ್ಪ ಸಾಕೇ ಸಾಕು. ಹೀಗಾಗಿ ಖರ್ಚು-ಕಂದಾಯವಿಲ್ಲದ ಇಷ್ಟಲಿಂಗ ಪೂಜೆಯು ಸುಲಭ. ಕಠಿಣ ಯಾವುದು ಎಂದರೆ ತಾವಾಗಿಯೇ ಶರಣರು ಮನೆಗೆ ಬಂದಾಗ ಅವರನ್ನು ಪ್ರೀತಿಯಿಂದ ಬರಮಾಡಿಕೊಳ್ಳುವುದು, ಅವರ ಕಷ್ಟ ಸುಖಗಳನ್ನು ಬೆಸಸು(ಕೇಳು)ವುದು. "ಪಸಾರಕ್ಕನುವಿಲ್ಲ ಬಂದ ತತ್ಕಾಲಕುಂಟು." ಎಂಬ ಮಾತನ್ನಿಲ್ಲಿ

ಅರ್ಥಮಾಡಿಕೊಳ್ಳಬೇಕು. ಮನೆಯಲ್ಲಿ ವಿಶೇಷ ಸಂದರ್ಭ ಒದಗಿದಾಗ ಸಾಕಷ್ಟು ಖರ್ಚು ಮಾಡಿ ವೈಭವ ಪ್ರದರ್ಶಿಸಿ, ತಿನ್ನಲಿಕ್ಕಾಗದಷ್ಟು ಬಗೆಯ ಅಡಿಗೆಗಳನ್ನು ಮಾಡಿ ಉಣ್ಣಿಸುವುದು ದೊಡ್ಡದಲ್ಲ. ಅವರಿಗೆ ಅಗತ್ಯವಿದ್ದು ಬಂದಾಗ ನೆರವಾಗುವುದು ಮುಖ್ಯ. ಏಗುವುದು - ಅಂದರೆ ನಿಭಾಯಿಸುವುದು, "ಏ ಬೆಸನೆಂಬುದು", ತಮಗೆ ನಮ್ಮಿಂದ ಏನಾಗಬೇಕಾಗಿತ್ತು ? ಎಂದು ಕೇಳುವುದು ನಿಜ ಶರಣರ ಲಕ್ಷಣ. ಜನರ ಭಕ್ತಿ ಶ್ರದ್ಧೆ ಔದಾರ್ಯಗಳ ದುರುಪಯೋಗ ಮಾಡಿಕೊಳ್ಳುವ ವೇಷಧಾರಿ ಜಂಗಮರ ಸಂಖ್ಯೆ ಏನೂ ಕಡಿಮೆ ಇರುವುದಿಲ್ಲ. ಆದರೆ ಭಕ್ತನು ಸತ್ಪಾತ್ರರನ್ನು ಗುರುತಿಸಿ ಅವರ ಹಿತ ಚಿಂತನೆ ಮಾಡುವುದು ಅಷ್ಟೇ ಅವಶ್ಯಕ.

307. ಒಡೆಯರಿಗೆ ಒಡವೆಯ ಒಪ್ಪಿಸುವಿಕೆ

ಒಡೆಯರಿಗೆ ಒಡವೆಯನೊಪ್ಪಿಸಲಾರದೆ
ಮೊರೆಯಿಡುವ ಮನವ ನಾನೇನೆಂಬೆ ?
ನೆತ್ತಿಯಲ್ಲಿ ಅಲಗ ತಿರುಹುವಂತಪ್ಪ
ವೇದನೆಯಹುದೆನಗೆ !
ಕೊಯ್ದ ಮೂಗಿಂಗೆ ಕನ್ನಡಿಯ ತೋರುವಂತಪ್ಪ
ವೇದನೆಯಹುದೆನಗೆ !
ಬೆಂದ ಹುಣ್ಣ ಕಂಬಿಯಲ್ಲಿ ಕೀಸುವಂತಪ್ಪ
ವೇದನೆಯಹುದೆನಗೆ !
ಲಿಂಗದೇವ ಮಾಡಿ ನೋಡುವ ಹಗರಣವ !
ನಾ ಮಾಡಿಹೆನೆಂದಡೆ ಮನಕ್ಕೆ ಮನ ನಾಚದೆ ಅಯ್ಯಾ? - ಬ.ವ.ದೀ.305

ಜಂಗಮ - ಧರ್ಮಪಿತ ಬಸವಣ್ಣನವರ ಪರಿಕಲ್ಪನೆಯಲ್ಲಿ ಸಮಾಜ ಸೇವಕ ಮಾತ್ರವಲ್ಲ ಸಮಾಜದ ಹಿತಚಿಂತಕ. ಗೃಹಸ್ಥರು ತಮ್ಮ ಕುಟುಂಬದ ಶ್ರೇಯಸ್ಸಿಗಾಗಿ ದುಡಿದರೆ ಜಂಗಮನು ದುಡಿಯುವುದು ಇಡೀ ಸಮಾಜ, ಸಮಷ್ಟಿಯ ಹಿತಚಿಂತನೆಗೆ. ಅವನು ತ್ಯಾಗಿ, ವಿರಾಗಿ. ಗೃಹಸ್ಥರು ತಾವು ಕಾಯಕ ಮಾಡಿ ಗಳಿಸಿದ ಸಂಪತ್ತನ್ನು ಜಂಗಮನಿಗೆ ನೀಡಿದರೆ ತಾನೇ ಅವನು ಸಮಾಜಕ್ಕಾಗಿ ದುಡಿಯುವುದು. ಸಮಾಜದ ಒಡೆಯನಾದ ಜಂಗಮನಿಗೆ ಗೃಹಸ್ಥನಾದ ಶರಣನು ತನ್ನ ಆದಾಯದ ಒಂದು ಪಾಲನ್ನು ತೆಗೆದಿಟ್ಟು ಅವನ ಬರುವಿಗಾಗಿ ನಿರೀಕ್ಷಿಸಬೇಕು. ಜಂಗಮನು ಅದನ್ನು ಸ್ವೀಕರಿಸಿ, ಪುನಃ ಸಮಾಜದ ಏಳಿಗೆಗಾಗಿ ವಿನಿಯೋಗಿಸಬೇಕು. ಜಂಗಮ ಎಂದರೆ ಬಹುದೊಡ್ಡ ನೀರಿನ ಸಂಗ್ರಹಾಗಾರವಿದ್ದಂತೆ. ಅದು ಸಂಗ್ರಹಿಸುವುದು ತನಗಾಗಿ ಅಲ್ಲ, ಸಮಾಜಕ್ಕಾಗಿ.

(ಇಂಥ ಒಂದು ಆದರ್ಶ ವ್ಯವಸ್ಥೆ 12ನೆಯ ಶತಮಾನದಿಂದ ಈವರೆಗೂ ಸಾಗಿ ಬಂದಿತ್ತು. ಹೊಲದಲ್ಲಿ ಬೆಳದ ಫಸಲು, ಫಲ ಸಂಪಾದಿಸಿದ ಹಣ ಎಲ್ಲವನ್ನೂ ಭಕ್ತರು ತಂದು ಸ್ವಯಂ ಸ್ಫೂರ್ತಿಯಿಂದ ಗುರು, ಜಂಗಮ ಮಠಕ್ಕೆ ಕೊಡುತ್ತಿದ್ದರು. ಮಠಗಳು ನಿತ್ಯ ದಾಸೋಹ, ಧರ್ಮ ಭೋಧೆ, ಜ್ಞಾನ ದಾಸೋಹ, ವಿದ್ಯಾದಾನ ಮಾಡುತ್ತಿದ್ದವು. 20ನೆಯ ಶತಮಾನದ ಮಧ್ಯದಿಂದ ಈ ವ್ಯವಸ್ಥೆ ನಿಂತು ಹೋಯಿತು. ಮಠಗಳು ಧರ್ಮ ಪ್ರಚಾರದಿಂದ ವಿಮುಖವಾದವು. ಮಠಾಧೀಶರು ವ್ಯಾವಹಾರಿಕರಾದರು. ಗುರು-ಭಕ್ತ ಸಂಬಂಧ, ಪೂಜೆ-ದೀಕ್ಷೆ, ಧರ್ಮ ಬೋಧೆಯ ವಲಯದಾಟಿ ಎಂಜಿನಿಯರಿಂಗ್, ಮೆಡಿಕಲ್ ಸೀಟಿನ ವ್ಯಾವಹಾರಿಕ ಸಂಬಂಧಕ್ಕೆ ವಿಸ್ತರಿಸಿತು. ಆಧುನಿಕ ಹಿನ್ನೆಲೆಯಲ್ಲಿ ಧರ್ಮಪಿತರ ಮೇಲಿನ ವಚನದ ಅರ್ಥವನ್ನು ಪರಿಕಲ್ಪಿಸುವುದು ಕಷ್ಟ ಸಾಧ್ಯ)

ಶ್ರೀಮಂತರು ಅಪಾರ ಧನ-ಧಾನ್ಯ ಸಂಪತ್ತಿನಿಂದ ಮೆರೆಯುತ್ತಿದ್ದರೂ ದೇಣಿಗೆ ಸಂಗ್ರಹಕ್ಕೆ ಗುರು-ಜಂಗಮರು ಬಂದಾಗ ದೇಣಿಗೆ ಕೊಡಲಾರದೆ ಮನೆಯೊಳಗಿದ್ದೂ ಇಲ್ಲ ಎನ್ನಿಸಿಕೊಳ್ಳುವ ಸಂಚು, ಮೈಗೆ ಆರಾಮವಿಲ್ಲ ಭೇಟಿ ಸಾಧ್ಯವಿಲ್ಲ ಎಂಬ ಕಟು ಉತ್ತರ ತುಂಬಾ ನೋವನ್ನುಂಟು ಮಾಡುತ್ತದೆ. ಅನಿವಾರ್ಯವಾಗಿ ಕೊಡಬೇಕಾದಾಗ ಸಂಕಟದಿಂದ ಕೊಡುವುದು ಧರ್ಮಪಿತರಿಗೆ ಬೇಸರವನ್ನು ಉಂಟು ಮಾಡುತ್ತದೆ; ನೆತ್ತಿಯಲ್ಲಿ ಕತ್ತಿಯನ್ನಿಟ್ಟು ತಿರುವುವಂತೆ ನೋವು ಎನಿಸುತ್ತದೆ. ಅಪರಾಧವನ್ನು .ಮಾಡಿದ ವ್ಯಕ್ತಿಯ ಮೂಗನ್ನು ಕೊಯ್ಯಲಾಗುತ್ತದೆ. ಅಂಥ ಕೊಯ್ದ ಮೂಗಿಗೆ

ಕನ್ನಡಿಯನ್ನು ತೋರಿಸಿ ಅವಮಾನ ಮಾಡುವಂತಹ ವೇದನೆಯಾಗುತ್ತದೆ. ಬೆಂಕಿಯಿಂದ ಸುಡಿಸಿಕೊಂಡಾಗ ಚರ್ಮವು ನಂಜು ಹೊಂದಿ ಹುಣ್ಣಾಗಿರುತ್ತದೆ. ಅಂಥ ಹುಣ್ಣನ್ನು ಕಬ್ಬಿಣದ ಕಂಬಿಯಿಂದ ಮುಳ್ಳಾಡಿಸಿದರೆ ಎಂಥಾ ನೋವಾಗುವುದೋ ಅಂಥ ನೋವನ್ನು ಧರ್ಮಪಿತರು ಅನುಭವಿಸುತ್ತಿದ್ದಾರೆ. ಜಂಗಮರ ಮೂಲಕ ಲಿಂಗದೇವನು ಅದ್ಭುತವಾದ ಪರೀಕ್ಷೆಯನ್ನು (ಶ್ರೀಮಂತ) ಭಕ್ತನಿಗೆ ಒಡ್ಡುತ್ತಾನೆ. ಕೊಡಲಾರದೆ ನರಳುವ (ವಂಚಕ) ಭಕ್ತರನ್ನು ಕಂಡು ಮನಸ್ಸು ನಾಚಿ ನೀರಾಗುತ್ತದೆ. ಗೃಹಸ್ಥರು ತಮ್ಮ ಆದಾಯದ ಒಂದು ಪಾಲನ್ನು ಕಡ್ಡಾಯವಾಗಿ ಸಮಾಜದ ಹಿತಕ್ಕೆ, ಧರ್ಮದ ಬೆಳವಣಿಗೆಗೆ ವಿನಿಯೋಗಿಸಬೇಕು ಎಂಬುದೇ ಧರ್ಮಪಿತರ ಆಶಯ.

308. ದುರ್ಬಲ ಮನದ ಭಕ್ತ

ಹೊರಿಸಿಕೊಂಡು ಹೋದ ನಾಯಿ ಮೊಲನೇನ ಹಿಡಿವುದಯ್ಯಾ?
ಇರಿಯದ ವೀರ; ಇಲ್ಲದ ಸೊಬಗುವ ಹೇಳುವುದೆ ನಾಚಿಕೆ !
ಆನು ಭಕ್ತನೆಂತೆಂಬೆನಯ್ಯಾ, ಲಿಂಗದೇವಾ ? - ಬ.ವ.ದೀ.306

ಬೇಟೆಗಾರರು ಮೊಲ ಮುಂತಾದ ಪ್ರಾಣಿಗಳನ್ನು ಬೇಟೆಯಾಡಲು ಹೋಗುವಾಗ ನಾಯಿಗಳನ್ನು ಕರೆದೊಯ್ಯುತ್ತಾರೆ. ತೋಳದಂತಿರುವ ನಾಯಿಗಳು ಬೇಟೆಯ ಪ್ರಾಣಿಯನ್ನು ನೋಡುತ್ತಲೇ ವ್ಯಗ್ರಗೊಂಡು ಬೊಗಳುತ್ತ ಬೇಟೆಯೆಡೆಗೆ ಧಾವಿಸುತ್ತವೆ. ಮೊಲ, ಜಿಂಕೆ ಮುಂತಾದ ಮುಗ್ಧ ಅಹಿಂಸಾತ್ಮಕ ಪ್ರಾಣಿಗಳ ಮೇಲೆ ಎರಗುತ್ತವೆ.

ಒಂದು ವೇಳೆ ನಾಯಿ ಸೋತು ದುರ್ಬಲವಾದರೆ ಆಗ ಬೇಟೆಗಾರನೇ ಆ ನಾಯಿಯನ್ನು ಹೊತ್ತುಕೊಂಡು ಹೋಗಬೇಕಾಗುತ್ತದೆ. ಬೇಟೆಗಾರನ ಹೆಗಲ ಮೇಲೆ ಕುಳಿತ ನಾಯಿ ಮೊಲವನ್ನು ಹಿಡಿಯಬಹುದೆ? ಅದೇ ರೀತಿ ಇನ್ನೊಬ್ಬರ ಮೇಲೆ ಅವಲಂಬಿತರಾಗಿ ಬದುಕುವ ಅಸಮರ್ಥರು. ಪುರುಷನು ತಾನು ದುಡಿದು ಹೆಂಡತಿಯನ್ನು ಸಾಕುತ್ತೇನೆಂಬ ಆತ್ಮವಿಶ್ವಾಸ ಹೊಂದಬೇಕು. ಅದು ಬಿಟ್ಟು ಮಾವನ ಹಣದ ಮೇಲೆ ಬದುಕುತ್ತೇನೆಂಬುದು ಹೊರಿಸಿಕೊಂಡು ಹೋಗುವ ನಾಯಿಯ ಪರಿಯಂತೆ. ಶತ್ರುವು ಎರಗಿದಾಗ ಎದುರಿಸಿ ಇರಿಯದ ವೀರ ತನ್ನ ಪೌರುಷವನ್ನು ಇತರರ ಮುಂದೆ ಕೊಚ್ಚಿಕೊಳ್ಳುವುದು ಹಾಸ್ಯಾಸ್ಪದವೇ ಸರಿ. ಅದೇ ರೀತಿ ಒಬ್ಬ ತಾನು ಭಕ್ತ, ಶರಣ ಎಂದೆಲ್ಲ ಬೀಗುತ್ತ ಪರಾವಲಂಬಿಯಾಗಿ ಕಾಯಕವಿಲ್ಲದೆ ಬದುಕುವುದಾಗಲಿ, ತನು ಮನ ಧನಗಳನ್ನು ಅರ್ಪಿಸದೆ ದಾಸೋಹಿ ಎಂದು ಹೇಳಿಕೊಳ್ಳುವುದಾಗಲೀ ಹಾಸ್ಯಾಸ್ಪದವೇ ಸರಿ. ಭಕ್ತನ ಲಕ್ಷಣ ಕೇವಲ ಲಿಂಗಧಾರಣೆ, ನಿತ್ಯ ಲಿಂಗಾರ್ಚನೆ ಮಾತ್ರವಲ್ಲ ಕಾಯಕದಿಂದ ಧನಾರ್ಜನೆ, ದಾಸೋಹದ ಮೂಲಕ ಧನಾರ್ಪಣೆ ನಿರಂತರವಾಗಿರಬೇಕು.

309. ವಂಚಕತನ ಭಕ್ತನಿಗೆ ಸಲ್ಲದು

ಎನ್ನ ಭಕ್ತನೆಂದೆಂಬರು;
ಎನ್ನ ಹೊರಹಂಚೆ ಒಳಬೊಳ್ಳೆತನವರಿಯರಾಗಿ
ವಂಚನೆಯುಳ್ಳ ಡಂಭಕ ನಾನು,
ತಲೆಯೊಡೆಯಂಗೆ ಕಣ್ಣ ಬೈಚಿಡುವೆ ಲಿಂಗದೇವಾ. - ಬ.ವ.ದೀ.307

ಕೇವಲ ಹೊರವೇಷ ನೋಡಿ ಅವರು ನಿಜ ಭಕ್ತರು ಎಂದು ಅನೇಕರು ಭಾವಿಸುವರು. ಅವರ ಹೊರಗಿನ ವೇಷ ಬಲು ಸಾತ್ವಿಕ; ಒಳಗಿನ ಸ್ವರೂಪ ವಂಚಕತನದಿಂದ ಕೂಡಿರುತ್ತದೆ. ಹೊರಗೆ ಹಂಚೆ ಒಳಗೆ ಬೊಳ್ಳೆ.(ಈ ಪದಗಳಿಗೆ ಅರ್ಥವು ಸಿಕ್ಕಿಲ್ಲ. ಆದ್ದರಿಂದ ಊಹಾತ್ಮಕವಾಗಿ ಅರ್ಥಮಾಡಬೇಕಾಗುತ್ತದೆ.) ಹೊರಗಿನ ಸ್ವರೂಪ ಬಹಳ ಚಂದ, ಒಳಗಿನದು ನರಿಯಂತಹ ಕಪಟ ಬುದ್ಧಿ ಎಂದು ಅರ್ಥ ಮಾಡಬಹುದು. ತಲೆಯ ಒಡೆಯನಿಂದ ಕಣ್ಣನ್ನು ಬಚ್ಚಿಡಲು ಸಾಧ್ಯವೇ? ಹಾಗೆ ಸರ್ವಜ್ಞನು ಸರ್ವದ್ರಷ್ಟಾರನು ಆದ ಲಿಂಗದೇವನಿಂದ ಸತ್ಯವನ್ನು ಮರೆಮಾಚಲು ಆಗುವುದೆ ?

ಕೆಲವು ಶ್ರೀಮಂತರು ದಾನ ಕೇಳಲು ಬಂದವರ ಮುಂದೆ ತಮ್ಮ ಸಂಕಷ್ಟವನ್ನು ಹೇಳಿಕೊಳ್ಳುವುದುಂಟು. ಕೇಳಲು ಬಂದವರು ತಲೆ ಚಿಟ್ಟು ಹಿಡಿದಾಗಲೀ ಅಥವಾ ಇವರ ಬಗ್ಗೆ

ಮರುಕ ಪಟ್ಟಾಗಲಿ ಎದ್ದು ಹೋಗಲಿ ಎಂಬುದು ಅವರ ಉದ್ದೇಶ. "ನಾವು ತುಂಬಾ ಕಷ್ಟದಲ್ಲಿದ್ದೇವೆ. ಬೆಂಗಳೂರಿನಲ್ಲಿ ಹತ್ತು ಸೈಟ್ ಖರೀದಿಸಿ 5 ಮನೆ ಕಟ್ಟಿದ್ದೇವೆ. ಇನ್ನೂ 5 ಸೈಟ್ ಖಾಲಿ ಇವೆ." ಹೀಗೆಲ್ಲ ಗೋಳಾಡುವರು. ನಿಜ ಸಂಗತಿ ಏನೆಂಬುದು ದೇವರಿಗೆ ತಿಳಿಯದ ವಿಷಯವೇ? ಅವನನ್ನು ವಂಚಿಸಲು ಸಾಧ್ಯವೇ ?

310. ಶರಣರೇ ಸರ್ವಸ್ವ

ಎನ್ನ ಮಾನಾಪಮಾನವು ಶರಣರಲ್ಲಿ
ಜಾತಿ ವಿಜಾತಿಯು ಶರಣರಲ್ಲಿ
ತನು ಮನ ಧನವು ಶರಣರಲ್ಲಿ, ಲಿಂಗದೇವಾ. - ಬ.ವ.ದೀ.308

ಇಷ್ಟಲಿಂಗ ಮಾಡಿಕೊಂಡು ಒಬ್ಬ ವ್ಯಕ್ತಿ ಭಕ್ತನಾದ ಮೇಲೆ, ಶರಣನಾದ ಮೇಲೆ ಅವನ ಸಂಬಂಧ, ಆಗು ಹೋಗು ಎಲ್ಲ ಧರ್ಮಬಂಧುಗಳೊಡನೆ. ವ್ಯಕ್ತಿ ಮಾಡಿದ ಕೆಲಸವು ಮಾನ (ಕೀರ್ತಿ) ಕಾರಕವೋ. ಅವಮಾನ (ಅಪಕೀರ್ತಿ) ಕಾರಕವೋ ಎಂಬುದು ನಿಜ ಶರಣರು ನಿರ್ಧರಿಸ ಬೇಕಾದ ಸಂಗತಿ. ಏಕೆಂದರೆ ಲೌಕಿಕರು, ಸಾಮಾನ್ಯ ಜನರ ಆದರ್ಶಗಳೇ ಬೇರೆ ಶರಣರ ಆದರ್ಶಗಳೇ ಬೇರೆ. ಉದಾಹರಣೆಗೆ ಲಿಂಗದೇವನ ಪ್ರಸಂಗ ತಾತ್ವಿಕ ಸೈದ್ಧಾಂತಿಕ ಹಿನ್ನಲೆಯಲ್ಲಿ ಧರ್ಮಪಿತ ಬಸವಣ್ಣನವರ ಏಕದೇವೋಪಾಸನೆಗೆ ಮೆರಗು ಕೊಡುವುದು. ನಿರಾಕಾರ ದೇವನ ಸ್ವರೂಪವಿರುವ ವಚನಗಳಲ್ಲಿ ಕೂಡಲ ಸಂಗಮದೇವ ಮುದ್ರಿಕೆ ಬದಲು ಲಿಂಗದೇವ ಅಳವಡಿಸಿದಾಗ ಅನೇಕರು ಎಬ್ಬಿಸಿದ ಹುಯಿಲೆಷ್ಟು. ಆಡಿದ ಮಾತುಗಳೇನು? ಬೈದ ಬೈಗುಳ ಎಷ್ಟು. ಮಾಡಿದ ದೂಷಣೆ ಎಷ್ಟು. ಈಗಲೂ ಕೆಲವರು ನಡೆಸಿಯೇ ಇದ್ದಾರೆ. ಆದರೆ ಕೆಲವು ಪ್ರಾಮಾಣಿಕ ಚಿಂತಕರು, ಶರಣರು ಲಿಂಗದೇವ ಪದದ ಪ್ರತಿಷ್ಠಾಪನೆ ಸರಿ ಎಂಬುದನ್ನು ಮನಗಂಡು ಪ್ರೋತ್ಸಾಹಿಸಿದರು. ಅಂತಹ ಶರಣರ ಮಾತೇ ನಮಗೆ ಮುಖ್ಯ. ಏಕೆಂದರೆ ಲೌಕಿಕರು ಜನರ ದೂಷಣೆಗೆ, ಕಷ್ಟಕ್ಕೆ ಹೆದರಿ ತತ್ವಕ್ಕೆ ತಿಲಾಂಜಲಿ ಇಡುವರು. ಹರಳಯ್ಯ-ಮಧುವರಸರು ತಾವು ನಂಬಿದ ತತ್ವಕ್ಕೆ ಬದ್ಧರಾದರು. ಅವರು ಕ್ಷಮೆ ಕೇಳಿದರೆ ಶಿಕ್ಷೆಯಿಂದ ಪಾರಾಗುತ್ತಿದ್ದರು. ಶರಣರ ಮಧ್ಯೆ ವಿವಾಹವು ಧರ್ಮ ಸಮ್ಮತವಾದ್ದರಿಂದ ಕ್ಷಮೆ ಕೇಳುವ ಪ್ರಶ್ನೆಯೇ ಇಲ್ಲ ಎಂದರು. ಅದಕ್ಕಾಗಿಯೇ ಅಕ್ಕಮಹಾದೇವಿ ತಾಯಿ ಹೇಳಿರುವುದು, "ನಿಮ್ಮ ಶರಣರ ನುಡಿಯೇ ಗತಿ ಮತಿ ಸೋಪಾನ" ಎಂದು. ಶರಣರ ದೃಷ್ಟಿಯಲ್ಲಿ ಕಳ್ಳತನ, ವಂಚನೆ, ವ್ಯಭಿಚಾರ ಮುಂತಾದವು ಅಪಮಾನಕಾರಕ.

"ಜಾತಿ ವಿಜಾತಿಯು ಶರಣರಲ್ಲಿ" ಎನ್ನುತ್ತಾರೆ ಧರ್ಮಪಿತರು. ದೀಕ್ಷೆಯನ್ನು ಪಡೆದವನು ಸ್ವಜಾತಿಯವನು ಶರಣರ ದೃಷ್ಟಿಯಲ್ಲಿ; ಪಡೆಯದವನು ವಿಜಾತಿಯವನು. ಶರಣರೊಡನೆ ಶರಣರ ಸಂಬಂಧ ಧಾರ್ಮಿಕವಾಗಿ ಇತ್ತು, ಸಮಾನ ಮನಸ್ಕ ಚಿಂತನೆಯಲ್ಲಿ ಇತ್ತು. ತನು ಮನ ಧನಗಳು ಶರಣ ಸಂಬಂಧದಲ್ಲಿ ಸವೆಯಬೇಕು. ಶರೀರವು ಆಯುಷ್ಯವು ಸುಖಭೋಗಗಳಲ್ಲಿ ಸವೆಯದೆ ಗುರು ಲಿಂಗ ಜಂಗಮ ಸೇವೆಯಲ್ಲಿ ಸವೆಯಬೇಕು. ಮನಸ್ಸು ಲಿಂಗಪೂಜೆಯಲ್ಲಿ, ಸಚ್ಚಿಂತನೆಯಲ್ಲಿ ಸಾರ್ಥಕಗೊಳ್ಳಬೇಕು. ಧನವು ಸಮಷ್ಟಿಯ ಹಿತದಲ್ಲಿ ಸವೆಯಬೇಕು.

311. ನೋಡುವವರಿಗಾಗಿ ಭಕ್ತಿ

ನೋಡುವರುಳ್ಳಡೆ ಮಾಡುವೆ ದೇಹಾರವ
ಎನಗೊಂದು ನಿಜವಿಲ್ಲ; ಎನಗೊಂದು ನಿಷ್ಪತ್ತಿಯಿಲ್ಲ!
ಲಿಂಗವ ತೋರಿ ಉದರವ ಹೊರೆವ
ಭಂಗಗಾರ ನಾನು, ಲಿಂಗದೇವಾ ! - ಬ.ವ.ದೀ.309

ಕೆಲವು ಭಕ್ತರು ಇನ್ನೊಬ್ಬರು ನೋಡಲೆಂದು ಅಥವಾ ನೋಡಿಯಾರೆಂದು ಧಾರ್ಮಿಕ ಆಚರಣೆ -ದೇಹದಿಂದ ಮಾಡುವ ಆಚಾರವನ್ನು ಮಾಡುವುದುಂಟು. ಅವರಲ್ಲಿ ನಿಜವಾದ ಭಕ್ತಿ ಇರದು, ಮನಸ್ಸು ಪರಿಪಕ್ವವಾಗಿರದು. ಇಷ್ಟಲಿಂಗವನ್ನು ತೋರಿ ಹೊಟ್ಟೆ ಪಾಡನ್ನು ನಡೆಸುವವರು ಭಂಗಗಾರರು. ಕೆಲವು ಕಾವಿಧಾರಿಗಳು ಇಷ್ಟಲಿಂಗ ರಹಿತ ಆರೂಢ, ಅವಧೂತ ಮಾರ್ಗಿಗಳು. ಅವರಲ್ಲಿ ಲಿಂಗನಿಷ್ಠೆ ಇರದು. ಆದರೆ ಬಹು ಸಂಖ್ಯಾತರಾದ ಲಿಂಗಾಯತರ ಮನೆಗಳಲ್ಲಿ ಸಂಪ್ರದಾಯ ನಿಷ್ಠ ಶ್ರೀಮಂತರ ಮನೆಯಲ್ಲಿ ಬಿನ್ನಹ ಪಡೆಯಬೇಕಾದರೆ ಇಷ್ಟಲಿಂಗ ಅವಶ್ಯ ಎಂದು

ಧರಿಸಿಕೊಳ್ಳುವರು. ಕೆಲವು ಲಿಂಗಾಯತ ಹಾಸ್ಟಲ್‌ಗಳಲ್ಲಿ ಇಷ್ಟಲಿಂಗ ಧಾರಣೆ ಕಡ್ಡಾಯವಿರುವುದರಿಂದ ವಿದ್ಯಾರ್ಥಿಗಳು ತೋರಿಕೆಗಾಗಿ ಧರಿಸುತ್ತಾರೆ. ಇದೂ ಒಂದು ಬಗೆಯ ಆತ್ಮವಂಚನೆ. ಇಷ್ಟಲಿಂಗದ ಮಹತಿ ಅರಿತು, ತತ್ವ ತಿಳಿದು ಸ್ವಯಂ ಸ್ಫೂರ್ತಿಯಿಂದ ಧರಿಸಿ ಪೂಜಿಸಬೇಕು.

312. ಪೊಳ್ಳು ಮಾತು

ಭಕ್ತಿ ಎಳ್ಳನಿತಿಲ್ಲ; ಯುಕ್ತಿ ಶೂನ್ಯನಯ್ಯಾ ನಾನು;
ತನುವಂಚಕ, ಮನ ವಂಚಕ, ಧನ ವಂಚಕ ನಾನಯ್ಯ
ಲಿಂಗದೇವಾ ಒಳಲೊಟ್ಟೆ ಎನ್ನ ಮಾತು ! - ಬ.ವ.ದೀ.310

ಆಂತರಿಕವಾಗಿ ಭಕ್ತಿಯಿಲ್ಲ, ಇನ್ನು ವಿವೇಕವಂತೂ ಶೂನ್ಯ. ತನುವಿನಿಂದ ಅಂದರೆ ಹೊರಗಡೆ ವೇಷದಿಂದಲೂ ಇನ್ನೊಬ್ಬರನ್ನು ವಂಚಿಸುವನು, ಮನದಿಂದಲೂ ವಂಚಿಸುವನು, ಧನದಿಂದಲೂ ವಂಚಿಸುವನು. ಆದರ್ಶದ ಮಾತುಗಳನ್ನಾಡುವನು. ಅವೆಲ್ಲವೂ ಪೊಳ್ಳು ಮಾತುಗಳು. ನಂಬಿಕೆಗೆ ಅನರ್ಹವಾದ ವ್ಯಕ್ತಿ. ತನು ವಂಚನೆ ಎಂದರೆ ಕಾಯಕದಲ್ಲಿ ಮೈಗಳ್ಳತನ, ಸೇವೆಯಲ್ಲಿ ಉದಾಸೀನ, ಪೂಜಾದಿ ಕ್ರಿಯೆಗಳಲ್ಲಿ ಅಶ್ರದ್ಧೆ. ಮನ ವಂಚನೆ ಎಂದರೆ ಮನದೊಳಗೆ ಒಂದು ಬಗೆಯ ಆಲೋಚನೆ, ಮತ್ಸರ, ದ್ವೇಷ; ಹೊರಗಡೆ ವಿನಯ ಪೂರ್ಣವಾದ ಮಾತು. ಧನ ವಂಚನೆ - ದಾಸೋಹ ಮಾಡುವ ಶಕ್ತಿ ಇದ್ದೂ ಸಹ ಮಾಡಲಾರದೆ ತಪ್ಪಿಸಿಕೊಳ್ಳುವಿಕೆ ತನು ಮನ ಧನ ಯಾವುದನ್ನೂ ಸವೆಸದೆ ಸಮಾಜದ ಉದ್ಧಾರದ ಬಗ್ಗೆ ಉದ್ದುದ್ದ ಮಾತನಾಡುವುದು ಒಳಲೊಟ್ಟೆಯ ಬೂಟಾಟಿಕೆಯ ಪೊಳ್ಳು ಮಾತಾಗುವುದು.

313. ದೇವರ ಕೊಡುಗೆ ತ್ರಿವಿಧ ಸಂಪತ್ತು

ತನು ನಿಮ್ಮದೆಂಬೆ, ಮನ ನಿಮ್ಮದೆಂಬೆ, ಧನ ನಿಮ್ಮದೆಂಬೆ:
ಮತ್ತೆಯೂ ವಂಚನೆ ಮಾಣದಯ್ಯಾ.
ಲಿಂಗ ಜಂಗಮವೆಂಬೆ, ಜಂಗಮವೆ ಲಿಂಗವೆಂಬೆ :
ಮತ್ತೆಯೂ ವಂಚನೆ ಮಾಣದಯ್ಯಾ.
ಒಡಲೊಡವೆ ಹಡೆದರ್ಥ ನಿಮ್ಮದೆಂದರಿಯದೆ
ಕೆಮ್ಮನೆ ಕೆಟ್ಟೆ ಲಿಂಗದೇವ - ಬ.ವ.ದೀ.311

ಕೆಲವರು ಮಾತನಾಡುವಾಗ ದೇವನಲ್ಲಿ ಶರಣಾಗತ ಭಾವವನ್ನು ಹೊಂದಿದ್ದಾರೇನೋ ಎಂಬಂತೆ "ಎಲ್ಲವೂ ದೈವೇಚ್ಛೆ" ಎನ್ನುವರು. "ದೇವರ ಕೃಪೆಯಿಂದ ನಾವು ಬಹಳ ಚನ್ನಾಗಿದ್ದೀವಿ. ದೇವರು ನಮ್ಮನ್ನು ಚನ್ನಾಗಿ, ಯಾವುದಕ್ಕೂ ಕೊರತೆ ಇಲ್ಲದಂತೆ ಇಟ್ಟಿದ್ದಾನೆ" ಎಂದು ಹೇಳಿಕೊಳ್ಳುವುದುಂಟು. ಈ ಜಗತ್ತು, ಜೀವನ ಲಿಂಗದೇವನ ಕೊಡುಗೆ. ಮರ್ತ್ಯಲೋಕವೆಂಬ ದೇವರ ಮಾಲೀಕತ್ವದ ಮನೆಯಲ್ಲಿ ನಾವು ನೀವುಗಳೆಲ್ಲ ಬಾಡಿಗೆದಾರರು. ಹಾಗಿದ್ದ ಮೇಲೆ ಬಾಡಿಗೆ ಸಲ್ಲಿಸಬೇಕಲ್ಲವೇ? ಹೇಗೆ ಸಲ್ಲಿಸುವುದು? ಕೃತಜ್ಞತೆಯಿಂದ ಮಾಡುವ ಪೂಜೆಯ ಮೂಲಕ, ನಿರಾಕಾರ ದೇವನ ಸಾಕಾರ ಮುಖವಾದ ಸಮಾಜದ ಸೇವೆ ಮಾಡುವ ಮೂಲಕ. ಆ ಸೇವಾ ಕೈಂಕರ್ಯವನ್ನು ಹೊತ್ತ ಜಂಗಮಕ್ಕೆ ಕೊಡುಗೆ ಸಲ್ಲಿಸುವ ಮೂಲಕ.

ಆದರೆ ಬಹುಪಾಲು ಜನರು ದೇವನು ಕೊಟ್ಟ ಕೊಡುಗೆ ಸ್ವೀಕರಿಸಿ ಕೊಟ್ಟ ದೇವನನ್ನು ಮರೆಯುವುದೇ ಹೆಚ್ಚು. "God gives and forgives; Man gets and forgets" ಎಂದು ಕಾರ್ಲೈಲ್ ಹೇಳುವಂತೆ ಮನುಷ್ಯನ ನಡೆ. ಅದನ್ನೇ ಈ ವಚನದಲ್ಲಿ ಗುರು ಬಸವಣ್ಣನವರು ಹೇಳಿರುವುದು. ಆರೋಗ್ಯ ಯುಕ್ತವಾದ ಶರೀರ, ಸದೃಢವಾದ ಮನಸ್ಸು, ಅಪಾರ ಸಂಪತ್ತು ಎಲ್ಲವೂ ಆ ದೇವನದೇ ಎಂದು ನುಡಿಯುತ್ತಾರೆ; ಆದರೆ ಅಂತಹ ತನು ಮನ ಧನಗಳನ್ನು ಸರಿಯಾಗಿ ವಿನಿಯೋಗಿಸದೆ ವಂಚಿಸುತ್ತಾರೆ. ಎಂಥಾ ದೊಡ್ಡ ವ್ಯಕ್ತಿಗಳೇ ಆಗಲಿ ಮುಸಲೀಮರು, ಕ್ರೈಸ್ತರು ತಮ್ಮ ಧರ್ಮ ಮಂದಿರಗಳಿಗೆ ಹೋಗಿ ಸಾಮೂಹಿಕ ಪ್ರಾರ್ಥನೆಯಲ್ಲಿ ತಮ್ಮ ತನುವನ್ನು ತೊಡಗಿಸಿಕೊಳ್ಳುತ್ತಾರೆ. ಅದೇ ಉಳಿದಂತೆ ಲಿಂಗಾಯತರು, ಹಿಂದುಗಳಲ್ಲಿ ಆ ಶಿಸ್ತು ಇಲ್ಲ. ಸಭೆಗಳಿಗೆ ಬಂದಾಗ ಪ್ರಾರ್ಥನೆ ಮುಂತಾಗಿ ಮಾಡುವಾಗ ಕುಳಿತುಕೊಳ್ಳಲಾಗದೆ ಚಟಪಟಿಸುತ್ತಾರೆ. ಮಧ್ಯೆ ಮಧ್ಯೆ ಮೊಬೈಲ್‌ಗಳಲ್ಲಿ ಮಾತನಾಡುತ್ತಾರೆ. ಇಲ್ಲವೇ ಪಕ್ಕದಲ್ಲಿ ಕುಳಿತವರೊಡನೆ ಮಾತನಾಡಲು ತೊಡಗುತ್ತಾರೆ. ಅಂದರೆ ತನುವನ್ನು ಪ್ರಾರ್ಥನೆಯಲ್ಲಿ, ಪೂಜೆಯಲ್ಲಿ, ಸತ್ಸಂಗದಲ್ಲಿ ತೊಡಗಿಸಿಕೊಳ್ಳುವುದಿಲ್ಲ. ಇದು ತನು ವಂಚನೆ. ದೇವರಿಂದ ತನಗೆ ಭಾಗ್ಯವು ಕೊಡಲ್ಪಟ್ಟಿದೆ ಎಂದಾಗ ಮನಃ

ಪೂರ್ವಕವಾಗಿ ದೇವನನ್ನು ನೆನೆಯಬೇಕಲ್ಲವೆ? ನೆನೆಯದಿರುವುದು ಘನ ವಂಚನೆ. ತನಗೆ ಹೆಚ್ಚಿನ ಸಂಪತ್ತು ದೊರೆತಿರುವಾಗ ಕೃತಜ್ಞತೆಯಿಂದ ತನ್ನ ಗಳಿಕೆಯ ಒಂದು ಪಾಲನ್ನು ಧರ್ಮ -ಸಮಾಜಗಳ ಅಭ್ಯುದಯಕ್ಕೆ ವಿನಿಯೋಗಿಸಬೇಕಲ್ಲವೆ? ಮಾಡದಿದ್ದರೆ ಅದು ಧನ ವಂಚನೆ!

ಲಿಂಗದ ಸಾಕಾರವೇ ಜಂಗಮ; ಜಂಗಮವು ದೇವನ ಸಾಕಾರ ಪ್ರತಿನಿಧಿ. ಎಂಬ ತತ್ವವನ್ನು ಹೇಳುವನು. ಆದರೆ ನಡೆಯಲ್ಲಿ ಅದು ಅಳವಡದೆ ಧನ ದಾಸೋಹ ಮಾಡುವ ಅವಕಾಶ ಒದಗಿದಾಗ ತಪ್ಪಿಸಿಕೊಳ್ಳಬಯಸುವನು. ಒಡಲು, ಒಡವೆ, ಗಳಿಸಿದ ಸಂಪತ್ತು ಎಲ್ಲವೂ ಲಿಂಗದೇವನ ಸೊಮ್ಮು. ಅವನು ಯಾವುದೇ ಕ್ಷಣದಲ್ಲಿ ಅವುಗಳನ್ನು ವಾಪಸ್ಸು ಕಿತ್ತುಕೊಳ್ಳಬಹುದು ಎಂದರಿಯದೆ ಬಹಳ ಜನರು ತಪ್ಪುದಾರಿಯಲ್ಲಿ ಸಾಗುವರು.

314. ಸಂಸಾರಿಯ ವ್ಯಾಮೋಹ

ಊರ ಸೀರೆಗೆ ಅಗಸ ತಡಬಡಗೊಂಬಂತೆ;
ಹೊನ್ನೆನ್ನದು, ಹೆಣ್ಣೆನ್ನದು, ಮಣ್ಣೆನ್ನದು ಎಂದು ಮರುಳಾದೆ:
ನಿಮ್ಮನರಿಯದ ಕಾರಣ ಕೆಮ್ಮನೆ ಕೆಟ್ಟೆ, ಲಿಂಗದೇವಾ. - ಬ.ವ.ದೀ.312

ಮಡಿವಾಳರ ಕಾಯಕವೆಂದರೆ ಮನೆಮನೆಗಳಿಂದ ಬಟ್ಟೆ ಸಂಗ್ರಹಿಸಿ, ಒಯ್ದು ತೊಳೆದು, ಒಣಗಿಸಿ ತಂದು ವಾಪಸ್ಸು ಕೊಡುವುದು. ಅಗಸರ ಕುಲ ಕಸಬು ಇದ್ದಾದರಿಂದ ಬಟ್ಟೆ ತೊಳೆಯುವ ಮನೆಗಳನ್ನು ಹಿಡಿಯಲು ಪರಸ್ಪರ ಪೈಪೋಟಿ ಮಾಡುತ್ತಾರೆ. ಶ್ರೀಮಂತರ ಮನೆಯ ಬಟ್ಟೆಗಳನ್ನು ತಾವು ತೊಳೆಯುತ್ತಿದ್ದೇವೆ ಎಂದು ಹೆಮ್ಮೆಯಿಂದ ಬೀಗುತ್ತಾರೆ. ಇವರೇನು ಬಟ್ಟೆಗಳ ಮಾಲಿಕರಲ್ಲ. ಆದರೂ ಗೌಡರ, ದೇಶಮುಖರ, ಸಾಹುಕಾರರ ಮನೆಯ ಬಟ್ಟೆ ತೊಳೆಯುವ ಬಗ್ಗೆ ವ್ಯಾಮೋಹ. ಅದೇ ರೀತಿ ಈ ಜೀವಿಯು ಹೊನ್ನು, ಹೆಣ್ಣು, ಮಣ್ಣು ಎಂಬ ವಸ್ತುಗಳ ನಿರ್ವಹಣೆ ಬಗ್ಗೆ ಅತೀವ ಹೆಮ್ಮೆ ಪಡುತ್ತಾನೆ. ಇವು ನನ್ನವು ಎಂಬ ವ್ಯಾಮೋಹ ಹೊಂದುತ್ತಾನೆ. ಈ ಎಲ್ಲವುಗಳ ಒಡೆಯ ದೇವರು. ಅವನು ಕೊಟ್ಟ ಕೊಡುಗೆ ಸಂಪತ್ತು, ಹೆಂಡತಿ -ಮಕ್ಕಳು, ಭೂಮಿ -ಆಸ್ತಿ ಎಲ್ಲವೂ ಎಂಬ ಶರಣಾಗತ ಭಾವ ತೊರೆದು ಎಲ್ಲವೂ ತನ್ನ ಗಳಿಕೆ ಎಂಬ ಹಮ್ಮು ಹೊಂದುತ್ತಾನೆ.

315. ಶರಣರಲ್ಲಿ ಶರಣಾಗತಿ

ಅರ್ಥ ಪ್ರಾಣಾಭಿಮಾನ ನಿಮ್ಮದೆಂಬೆ;
ಮತ್ತೆಯೂ ಆಸೆ ಬಿಡದನ್ನಕ್ಕ ಭಕ್ತನೆಂತಪ್ಪೆನಯ್ಯಾ?
ಶರಣನೆಂತೆನಿಸುವೆನಯ್ಯಾ,
ಲಿಂಗದೇವನ ಶರಣರ ಸಕಲರತಿಗೆ ಸಲ್ಲದನ್ನಕ್ಕ - ಬ.ವ.ದೀ.313

ಧರ್ಮಪಿತ ಬಸವಣ್ಣನವರ ಕಲ್ಯಾಣ ರಾಜ್ಯದ ಪರಿಕಲ್ಪನೆ ಅಮೋಘವಾದುದು. ವ್ಯಕ್ತಿ ಜೀವನದ ಶುದ್ಧೀಕರಣ, ಕೌಟುಂಬಿಕ ಜೀವನದ ಸಾಮರಸ್ಯ, ಸಾಮಾಜಿಕ ಸರ್ವೋದಯ ಸಾಧಿಸಿ ತನ್ಮೂಲಕ ಕಟ್ಟುವ ಕಲ್ಯಾಣ ರಾಜ್ಯ ಭೂಮಿಯ ಮೇಲೆ ನಿರ್ಮಾಣವಾಗುವ ದೈವೀರಾಜ್ಯ. ಅದರ ರೂಪುರೇಷೆಯನ್ನು ಜಗನ್ಮಾತಾ ಅಕ್ಕಮಹಾದೇವಿ ತಮ್ಮೊಂದು ವಚನದಲ್ಲಿ ಹೀಗೆ ಹೇಳಿದ್ದಾರೆ.

ಕಲ್ಯಾಣವೆಂಬುದು ಇನ್ನಾರಿಗೂ ಹೋಗಬಾರದು.
ಅಸಾಧ್ಯವಯ್ಯಾ! ಆಸೆ ಆಮಿಷಗಳಳಿದವರಿಗಲ್ಲದೆ
ಕಲ್ಯಾಣದತ್ತಲಡಿಯಿಡಬಾರದು.
ಒಳ ಹೊರಗು ಶುದ್ಧವಾದವರಿಗಲ್ಲದೆ ಕಲ್ಯಾಣವ ಹೋಗಬಾರದು.
ನಾನೆಂಬುದ ಹರಿದವರಿಗಲ್ಲದೆ ಕಲ್ಯಾಣವ ಹೋಗಬಾರದು.
ಒಳಗೆ ತಿಳಿದು ಚನ್ನಮಲ್ಲಿಕಾರ್ಜುನಂಗೊಲಿದು
ಉಭಯ ಲಜ್ಜೆಯಳಿದೆನಾಗಿ
ನಾನು ಕಲ್ಯಾಣವ ಕಂಡು ನಮೋ ನಮೋ ಎನುತಿರ್ದೆನು.

ಕಾರ್ಲ್‌ಮಾರ್ಕ್ಸ್‌ನ ಕಲ್ಪನೆಯಂತೆ ಸಂಪತ್ತಿನ ಒಡೆತನ ಖಾಸಗಿಯಾಗದೆ ಸರಕಾರದ್ದು ಆಗಿರುತ್ತದೆ. ಜೀವನವು ಸಾಮೂಹಿಕ. ವೈಯಕ್ತಿಕ ಆಸೆ, ಆಮಿಷಗಳಿಗೆ ಅವಕಾಶವಿರದು. ನಾನು ಎಂಬ ಹಮ್ಮು ಇರಬಾರದು, ಒಳಗೆ ತಿಳಿದು ಶರಣಾಗತರಾದವರಷ್ಟೇ ಈ ದೈವೀ ರಾಜ್ಯದ ಪ್ರಜೆಗಳು. ಸ್ತ್ರೀ - ಪುರುಷರೆಂಬ ವಿಂಗಡಣೆ, ಅದರ ಆಧಾರದ ಮೇಲೆ ಪಕ್ಷಪಾತ ಇರುವುದಿಲ್ಲ.

ಇದನ್ನು ಸಿದ್ಧರಾಮೇಶ್ವರರು ಹೀಗೆ ಹೇಳುತ್ತಾರೆ :

ಕಪಿಲ ಸಿದ್ಧ ಮಲ್ಲಿಕಾರ್ಜುನಾ,
ನಿಮ್ಮ ಶರಣ ಬಸವಣ್ಣ ಬಂದು ಕಲ್ಯಾಣದಲ್ಲಿ ಮಹಾಮನೆಯ ಕಟ್ಟಿದಡೆ
ಮರ್ತ್ಯಲೋಕವೆಲ್ಲವೂ ಭಕ್ತಿ ಸಾಮ್ರಾಜ್ಯವಾಯಿತ್ತು,
ಅದಕ್ಕೆ ತಲೆಬಾಗಿ ಹೊಕ್ಕವರೆಲ್ಲರೂ
ನಿಜ ಲಿಂಗ ಪದವಂ ಪಡೆದರು.

ಇಂಥ ಮಹಾಮನೆ ಅರ್ಥಾತ್ ಕಲ್ಯಾಣ ರಾಜ್ಯದಲ್ಲಿ ಅರ್ಥ,ಪ್ರಾಣ, ಅಭಿಮಾನ ಎಲ್ಲವೂ ಶರಣರದು. ತನಗೆ ಅಗತ್ಯವಿರುವುದಕ್ಕಿಂತ ಹೆಚ್ಚು ಇಟ್ಟುಕೊಳ್ಳುವಂತಿಲ್ಲ. ತನಗೆ ಅವಶ್ಯವೆನಿಸಿದಾಗ ಮಹಾಮನೆಯಿಂದ ಪಡೆದುಕೊಳ್ಳಲು ಸ್ವಾತಂತ್ರ್ಯವಿರುವುದು. ಪ್ರಾಣವು ಶರಣರಿಗಾಗಿ ಮೀಸಲು, ಹಾಗೆಯೇ ಅಭಿಮಾನವೂ ಸಹ ಗುರು ಲಿಂಗ ಜಂಗಮಕ್ಕೆ ಮೀಸಲು. ಇದು ಶರಣರ ಸಾಮಾಜಿಕ ವ್ಯವಸ್ಥೆಯಾಗಿರಬೇಕಾದಾಗ ಮತ್ತೂ ಆಸೆಗೆ ಬಲಿಯಾದರೆ ಅವನು ಭಕ್ತನೆಂತಾಗುವನು? ನಾಮಕಾವಸ್ಥೆ ಶರಣ ಎನಿಸಿಕೊಳ್ಳಬಹುದಲ್ಲದೆ ನಿಜ ಶರಣನು ಎಂತಾಗುವನು. ನಿಜ ಶರಣನು ಸಹ -ಶರಣರ ಸುಖ -ದುಃಖ, ಏಳು ಬೀಳು ಮುಂತಾದ ಎಲ್ಲ ಚಟುವಟಿಕೆಗಳಲ್ಲೂ ಸಮಾಜದ ಅವಿಭಾಜ್ಯ ಅಂಗವಾಗಿ ಸಕ್ರಿಯವಾಗಿ ಪಾಲ್ಗೊಳ್ಳಬೇಕು. ಕೇವಲ ತನ್ನ ಸುಖವನ್ನು, ತನ್ನ ಹೆಂಡತಿ ಮಕ್ಕಳ ಸುಖವನ್ನಷ್ಟೆ ನೋಡಿಕೊಳ್ಳುವ ಸ್ವಾರ್ಥಿ, ಆಸೆಬುರುಕ ಭಕ್ತನಾಗಲಾರ, ಶರಣನಾಗಲಾರ.

(ಮುಂದುವರೆಯುವುದು..........)

ವಿಶ್ವಗುರು ಬಸವಣ್ಣನವರ 108 ಅಡಿ ಪುತ್ಥಳಿ ನಿರ್ಮಾಣ ದೇಣಿಗೆಗಾಗಿ ಬಿನ್ನಹ

ಶರಣ ಭೂಮಿ ಬಸವ ಕಲ್ಯಾಣದಲ್ಲಿ ವಿಶ್ವಗುರು ಬಸವಣ್ಣನವರ 108 ಅಡಿ ಮೂರ್ತಿಯ ಕೆಲಸವು ಭರದಿಂದ ಸಾಗಿರುತ್ತದೆ. ಅದಕ್ಕೆ ಪೂರಕವಾಗಿ ಇನ್ನೂ ಕೆಲವು ಕೆಲಸಗಳು ನಡೆಯುತ್ತಲಿವೆ. ಹೀಗಾಗಿ ಹಣದ ಅವಶ್ಯಕತೆ ಬಹಳವಾಗಿದೆ. ಈ ದಿಶೆಯಲ್ಲಿ ಶರಣ ಬಂಧುಗಳು ಸಹಕರಿಸಬೇಕು.

1. 108 ಅಡಿ ಪುತ್ಥಳಿಗೆ ವಾಗ್ದಾನ ಮಾಡಿರುವವರು ಬೇಗನೆ ಮೊತ್ತವನ್ನು ಕೊಡಬೇಕು.
2. ಇನ್ನೂ ಏನೂ ಕಾಣಿಕೆ ಕೊಟ್ಟಿರದವರು ಕೊಡಲು ಸಂಕಲ್ಪ ಮಾಡಬೇಕು.
3. ಈಗಾಗಲೇ ಸಂಕಲ್ಪ ಮಾಡಿ ಕೊಡುತ್ತಿರುವವರು ಇನ್ನಷ್ಟು ಜಾಸ್ತಿ ಕೊಡಲು ಮನಸ್ಸು ಮಾಡಬೇಕು.
4. ಬಂಗಾರದ ವಸ್ತುದಾನ: ಎಷ್ಟೋ ಜನರ ಮನೆಯಲ್ಲಿ, ತಾಯಂದಿರಲ್ಲಿ ನಿಷ್ಪ್ರಯೋಜಕವಾಗಿ ಬಂಗಾರ, ಬಂಗಾರದ ಆಭರಣಗಳು ಪೆಟ್ಟಿಗೆಯಲ್ಲಿ ನಿರುಪಯುಕ್ತವಾಗಿ ಕೂತಿರುತ್ತವೆ. ಬಂಗಾರದ ಆಭರಣ ಮುಂತಾದುವನ್ನು ಕೊಟ್ಟರೂ ಅವನ್ನು ಮಾರಿ ಆ ಹಣವನ್ನು ಬಳಸಿಕೊಳ್ಳಲಾಗುವುದು.
5. ತಮ್ಮ ಶಕ್ತ್ಯಾನುಸಾರ, ಭಕ್ತ್ಯಾನುಸಾರ ಕಾಣಿಕೆಗಳನ್ನು ಕಟ್ಟಡ ನಿಧಿಗೆ, ಪುತ್ಥಳಿ ನಿರ್ಮಾಣಕ್ಕೆ ಕೊಡಲು ಶರಣ ಬಂಧುಗಳು ಮುಂದಾಗಬೇಕು.

ಶರಣ ಮೇಳ ದೇಣಿಗೆ ಸಂಗ್ರಹಕ್ಕೆ ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿಯವರು ಬಂದಾಗ ಕೊಡಬಹುದು. ಇಲ್ಲವೇ ಶರಣ ಮೇಳಕ್ಕೆ ಬಂದಾಗ ತಂದು ಸಮರ್ಪಿಸಬಹುದು. ಕೆಲವು ಚಿಕ್ಕ ಮಕ್ಕಳು ತಮಗೆ ಪಾಕೆಟ್‌ಮನಿ ಎಂದು ತಂದೆ ತಾಯಿ ಕೊಟ್ಟ ಹಣವನ್ನೇ ಹುಂಡಿಯಲ್ಲಿ ಸಂಗ್ರಹಿಸಿ ತಂದು ಕೊಡುವುದುಂಟು. ಬಿಸ್ಕತ್ತು, ಚಾಕಲೇಟ್, ಕುರುಕುರೆ ತಿನ್ನಲೆಂದು ಕೊಟ್ಟ ಹಣವನ್ನೇ ಚಿಕ್ಕಮಕ್ಕಳು ಉಳಿಸಿಕೊಡುವರೆಂದ ಮೇಲೆ ದೊಡ್ಡವರು ಅನಗತ್ಯ ವೆಚ್ಚವನ್ನು ಮಾಡದೆ ಮಿತವ್ಯಯ, ಉಳಿತಾಯ ಮಾಡಿ ತಮ್ಮ ಧರ್ಮಗುರುವಿನ ಕಾರ್ಯಕ್ಕೆ ಸಲ್ಲಿಸುವುದು ಅಭಿನಂದನಾರ್ಹವೆನಿಸಿಕೊಳ್ಳುವುದು.

ಶರಣ ಬಂಧುಗಳು ತಮ್ಮ ಮನೆಯದೆ ಕೆಲಸ, ಮನೆಯ ಕೆಲಸಕ್ಕಿಂತಲೂ ಇದು ಮಿಗಿಲಾದುದು ಎಂಬ ಭಾವದಿಂದ ಬಸವ ಪುತ್ಥಳಿಯ ಕಾರ್ಯವು ಪೂರ್ಣಗೊಳ್ಳಲು ಸಹಕರಿಸಬೇಕೆಂದು ಕೋರುತ್ತೇವೆ.

- ಮಾತಾಜಿ

ಬಾಳೊಂದು ವರ ಬದುಕೊಂದು ಕಲೆ

- ಮಾತಾಜಿ

1. ಸುಪ್ತ ಶಕ್ತಿಯ ಸದುಪಯೋಗ

ಒಂದೂರಿನಲ್ಲಿ ಒಬ್ಬ ಶ್ರೀಮಂತನಿದ್ದ. ಅವನು ಬಹಳ ಜಿಪುಣ. ದಾನ ಧರ್ಮ ಮಾಡುವುದತ್ತಲಿರಲಿ ಸರಿಯಾಗಿ ಊಟಕ್ಕೂ ಖರ್ಚು ಮಾಡದೆ ಹಣವನ್ನು ಕೂಡಿ ಹಾಕುತ್ತಿದ್ದ. ತನ್ನ ಸಂಪತ್ತನ್ನೆಲ್ಲ ಬಂಗಾರದ ನಾಣ್ಯಗಳನ್ನಾಗಿ ಪರಿವರ್ತಿಸಿ ಅವನ್ನು ಒಂದು ಮಡಿಕೆಯಲ್ಲಿ ಹಾಕಿ ತನ್ನ ಹೊಲದಲ್ಲಿ ಒಂದು ಕಡೆ ಹೂಳಿದ. ಯಾರೂ ಕಾಣದಂತೆ ಗುಟ್ಟಾಗಿ ಹೋಗಿ ಅದನ್ನು ತೆಗೆದು ನೋಡಿ ಸಂತೋಷ ಪಟ್ಟು ವಾಪಸ್ಸು ಬರುತ್ತಿದ್ದ. ಒಂದು ಸಲ ಒಬ್ಬ ಕಳ್ಳ ಇದನ್ನು ನೋಡಿ ಆ ಶ್ರೀಮಂತ ಹೋದ ಮೇಲೆ ಆ ಮಡಿಕೆಯೊಳಗಣ ಬಂಗಾರದ ನಾಣ್ಯಗಳನ್ನು ಕದ್ದು ಆ ಮಡಿಕೆಯನ್ನು ಪುನಃ ಅದೇ ಸ್ಥಳದಲ್ಲಿಟ್ಟು ಮಣ್ಣು ಮುಚ್ಚಿ ಹೊರಟು ಹೋದ.

ಇನ್ನೊಮ್ಮೆ ಬಂದಾಗ ಆ ಶ್ರೀಮಂತನು ಮಡಿಕೆಯು ಬಹಳ ಹಗುರವಾಗಿರುವುದನ್ನು ನೋಡಿ ಗಾಬರಿಗೊಂಡು ಪರೀಕ್ಷಿಸಿದಾಗ ಒಳಗಿನ ನಾಣ್ಯಗಳೆಲ್ಲ ಬರಿದಾಗಿರುವುದನ್ನು ಕಂಡು ಚಿಂತಾಕ್ರಾಂತನಾದ. ತನ್ನ ಚಿಂತೆಯನ್ನು ಗುರು ಒಬ್ಬರ ಬಳಿ ಹೇಳಿಕೊಂಡ. ಆಗ ಅವರು ಹೇಳಿದರು, "ಅವನ್ನು ನೀನು ಬಳಸುತ್ತಿರಲಿಲ್ಲವಷ್ಟೆ. ಕಳೆದು ಹೋದರೂ ನಿನಗೇನು ನಷ್ಟವಿಲ್ಲ. ನೀನು ಮಡಿಕೆಯನ್ನು ಮುಟ್ಟಿ ಮುಟ್ಟಿ ಎತ್ತಿ ತೂಕ ನೋಡಿ ಸಂತೋಷಪಡುತ್ತಿದ್ದೆ. ಈಗ ಖಾಲಿ ಮಡಿಕೆ ಇದೆ. ಅದರಲ್ಲಿ ಮಣ್ಣು ಕಲ್ಲು ತುಂಬಿ ಮುಟ್ಟಿ ಮುಟ್ಟಿ ತೂಕ ನೋಡಿ ಸಂತೋಷ ಪಡು" ಎಂದ. ಧರ್ಮಗುರು ಬಸವಣ್ಣನವರು ಹೇಳುತ್ತಾರೆ.

ಆಯುಷ್ಯವುಂಟು ಪ್ರಳಯವಿಲ್ಲೆಂದು ಅರ್ಥವ ಮಡುಗುವಿರಿ
ಆಯುಷ್ಯ ತೀರಿ ಪ್ರಳಯವು ಬಂದರೆ ಅರ್ಥವನುಂಬವರಿಲ್ಲ
ನೆಲನನಗೆದು ಮಡುಗದಿರಾ ನೆಲನುಂಗಿದಡುಗುಳುವುದೆ ?
ಕಣ್ಣಿನಲ್ಲಿ ನೋಡಿ ಮಣ್ಣಿನಲ್ಲಿ ನೆರಹಿ ಉಣ್ಣದೇ ಹೋಗದಿರಾ.
ಹೆರರಿಗಿಕ್ಕಿ ಹೆಗ್ಗುರಿಯಾಗಿ ಕೆಡಬೇಡ
ಲಿಂಗದೇವನ ಶರಣರಿಗೆ ಒಡನೆ ಸವೆಸುವುದು. - ಬ.ವ.ದೀ 203

ನೀತಿ : ಶರೀರವು ಒಂದು ಮಣ್ಣಿನ ಮಡಿಕೆ. ಇದರಲ್ಲಿ ಚಿತ್ತ ಮನ ಬುದ್ಧಿ ವಿವೇಕ ಎಂಬೆಲ್ಲ ಸಂಪತ್ತಿದೆ. ಇವಾವನ್ನು ಬಳಸದೆ ಕೇವಲ ಉಂಡು, ತಿಂದು, ಉಟ್ಟು, ತೊಟ್ಟು ಯಾಂತ್ರಿಕವಾದ ಬದುಕನ್ನು ಬದುಕುವುದೆಂದರೆ ಚಿನ್ನದ ನಾಣ್ಯಗಳನ್ನು ಬಳಸದೆ ಬರೀ ಮಡಿಕೆಯನ್ನು ಕಣ್ಣಿನಲ್ಲಿ ನೋಡಿ, ಕೈಯಿಂದ ಮುಟ್ಟಿ ಮುಟ್ಟಿ ಸಂತೋಷ ಪಡುವಂತೆ. ಮುಪ್ಪು ಎಂಬ ಕಳ್ಳಬಂದು ಇಂದ್ರಿಯಗಳನ್ನು ದುರ್ಬಲಗೊಳಿಸಿ ಚಿಂತನ ಶಕ್ತಿ, ನೆನಪಿನ ಶಕ್ತಿಯನ್ನು ಲೂಟಿ ಮಾಡಿಕೊಂಡು ಹೋದಾಗ ಪಶ್ಚಾತ್ತಾಪ ಪಟ್ಟರೇನು ಪ್ರಯೋಜನ?

2. ದೇವಲೋಕ ಮೃತ್ಯುಲೋಕ ಎಂಬುವು ಬೇರಿಲ್ಲ ಕಾಣಿಭೋ!

ಸತ್ಯವ ನುಡಿವುದೆ ದೇವಲೋಕ ಮಿಥ್ಯವ ನುಡಿವುದೆ ಮೃತ್ಯುಲೋಕ
ಆಚಾರವೆ ಸ್ವರ್ಗ; ಅನಾಚಾರವೆ ನರಕ -
ಲಿಂಗದೇವಾ, ನೀವೇ ಪ್ರಮಾಣು.

ದೇವಲೋಕ ಎಂದರೆ ಸ್ವರ್ಗ, ಮೃತ್ಯುಲೋಕ ಎಂದರೆ ನರಕ. ಇವು ಸತ್ತ ನಂತರ ಮಾನವರಿಗೆ ಅವರವರು ಮಾಡಿದ ಕರ್ಮಾನುಸಾರವಾಗಿ ದೊರೆಯುವ ಲೋಕಗಳೆಂದು ಹಿಂದು ಪುರಾಣಗಳ ನಂಬಿಕೆ.

ಒಬ್ಬ ರಾಜನಿದ್ದ. ಅವನು ಜ್ಞಾನಿ. ಗುರುಗಳು, ಸಾಧು ಸತ್ಪುರುಷರನ್ನು ಕಂಡಾಗ ಗೌರವಿಸುವ ವಿನಯಭಾವ ಉಳ್ಳವನು. ಒಮ್ಮೆ ಅವನ ಅರಮನೆಗೆ ಜ್ಞಾನಿಗಳೋರ್ವರು ಬಂದಾಗ ಅವರನ್ನು ಗೌರವದಿಂದ ಬರಮಾಡಿಕೊಂಡು ಭಕ್ತಿಯಿಂದ ಉಪಚರಿಸಿ ಒಂದು ಪ್ರಶ್ನೆ ಕೇಳಿದ. "ಮಹಾತ್ಮರೇ, ಸ್ವರ್ಗಕ್ಕೂ ನರಕಕ್ಕೂ ಇರುವ ವ್ಯತ್ಯಾಸವೇನು?" ಆಗ ಜ್ಞಾನಿಗಳು "ಎಲವೋ ಮೂರ್ಖರಾಜ ನಿನ್ನಂತಹ ಅವಿವೇಕಿಗೆ ಏಕೆ ಬೇಕು ಸ್ವರ್ಗ -ನರಕದ ವಿಷಯ?" ಎಂದು ಕೇಳಿದರು. ರಾಜನಿಗೆ

ಬಹಳ ಕೋಪ ಬಂದಿತು. ಒರೆಯಿಂದ ಖಡ್ಗವನ್ನು ತೆಗೆದು ಝಳಪಿಸಿ, "ಎಂಥಾ ಉದ್ಧಟತನ ನಿಮ್ಮದು. ರಾಜನಾದ ನನ್ನನ್ನು ಅವಿವೇಕಿ, ಮೂರ್ಖ ಎನ್ನುವ ಧಾರ್ಷ್ಟ್ಯವೇ ನಿಮ್ಮದು. ನಿಮ್ಮನ್ನು ಕೊಂದು ಬಿಡುತ್ತೇನೆ."ಎಂದ. ಆಗ ಅವರು ಶಾಂತ ಚಿತ್ತರಾಗಿ ನುಡಿದರು."ನನ್ನನ್ನು ಕೊಲ್ಲು; ಬೇಡವೆನ್ನುವುದಿಲ್ಲ. ಆದರೆ ನೀನು ಬಹಳ ಕಾಲ ಬದುಕಿರುವುದಿಲ್ಲ." ರಾಜನ ಆವೇಶ ಇಳಿಯಿತು. "ಅಹುದೆ? ನನ್ನ ಆಯುಷ್ಯ ಮುಗಿದಿದೆಯೆ ? ದಯವಿಟ್ಟು ನನ್ನ ತಪ್ಪು ಕ್ಷಮಿಸಿ, ಮುಕ್ತಿ ಮಾರ್ಗವನ್ನು ಬೋಧಿಸಿ ನನ್ನ ಜನ್ಮವನ್ನು ಸಾರ್ಥಕಗೊಳಿಸಿರಿ." ಎಂದು ಪಾದಕ್ಕೆರಗಿದ. ಆಗ ಗುರುಗಳು ನಸುನಕ್ಕು ಹೇಳಿದರು: "ನರಕಕ್ಕೂ ಸ್ವರ್ಗಕ್ಕೂ ಇರುವ ಅಂತರ ಇಷ್ಟೇ ನೋಡು. ಮೊದಲು ಕೋಪಾವಿಷ್ಟನಾಗಿ ಗುರು ಹಿರಿಯರು ಎಂಬುದನ್ನು ಮರೆತು ವರ್ತಿಸಿ, ಸುತ್ತಲಿನ ವಾತಾವರಣವನ್ನು ಭಯಗ್ರಸ್ತವಾಗಿ ಮಾಡಿದೆಯಲ್ಲ ಅದೇ ನರಕ. ವಿನಯ, ಕಿಂಕರತೆ, ಪಶ್ಚಾತ್ತಾಪ ಮುಂತಾದ ಗುಣಗಳಿಂದ ಕ್ಷಮೆಯನ್ನು ಕೇಳಿದೆ; ಇದೇ ಸ್ವರ್ಗ."

ಅದನ್ನೇ ಧರ್ಮಪಿತ ಬಸವಣ್ಣನವರು ತಮ್ಮದೇ ಆದ ಶೈಲಿಯಲ್ಲಿ 'ಅಯ್ಯಾ ಎಂದರೆ ಸ್ವರ್ಗ ಎಲವೋ ಎಂದರೆ ನರಕ.' ಎಂಬುದಾಗಿ ಹೇಳಿರುವುದು. ಬಸ್ಸಿನಲ್ಲಿ ಹೋಗುತ್ತಿರುವಾಗ "ರೀ ಸರೀರಿ" ಎಂದು ಗಡಸು ಧ್ವನಿಯಲ್ಲಿ ಹೇಳಿದರೆ ಜಗಳವು ಶುರುವಾಗುತ್ತದೆ. ತಮ್ಮಾ (ಅಣ್ಣಾ) ಸ್ವಲ್ಪ ಸರೀತೀಯಾ? ಎಂದು ಮೃದು ಧ್ವನಿಯಲ್ಲಿ ಹೇಳಿದರೆ ಜಗಳವೂ ಆಗದು, ಜಾಗವೂ ಸಿಗುತ್ತದೆ.

3. ಕೊಟ್ಟ ಕುದುರೆಯ ಏರುವ ಜಾಣತನ

ಒಂದು ಬೃಹತ್ತಾಗಿ ಬೆಳೆದ ಮರವಿತ್ತು. ಅದರ ಪೊಟರೆಯಲ್ಲಿ ಒಂದು ಇಲಿ ಇತ್ತು. ಅದರ ಹಲ್ಲುಗಳು ಚೂಪಾಗಿ, ಬಲಿಷ್ಠವಾಗಿ ಇದ್ದುದರಿಂದ ಅದು ಮರದ ಕಾಂಡವನ್ನು ಕಟಕಟನೆ ಕಡಿಯುತ್ತಿತ್ತು. ಒಂದು ಸಲ ಬೆಕ್ಕೊಂದು ಇಲಿಯನ್ನು ಅಟ್ಟಿಸಿಕೊಂಡು ಬಂದಾಗ ಹೆದರಿ ಓಡಿದ ಇಲಿಯು, ನಾನು ಬೆಕ್ಕಾಗಿದ್ದರೆ ಎಷ್ಟು ಚನ್ನಾಗಿತ್ತು ಎಂದುಕೊಂಡಿತು. ಏನು ಆಶ್ಚರ್ಯ! ಅದು ಬೆಕ್ಕಾಗಿ, ತಿರುಗಾಡಿಕೊಂಡಿತ್ತು. ಒಂದು ದಿವಸ ನಾಯಿಯೊಂದು ಬೆಕ್ಕನ್ನು ಅಟ್ಟಿಸಿಕೊಂಡು ಬಂದಾಗ ಬೆದರಿದ ಬೆಕ್ಕು, ನಾನು ನಾಯಿಗೆ ಹೆದರಬೇಕಾಗಿದೆ. ನಾನೇ ನಾಯಿಯಾಗಿದ್ದರೆ ಎಷ್ಟು ಚೆನ್ನಾಗಿತ್ತು ಎಂದುಕೊಂಡಿತು. ಅದು ನಾಯಿಯಾಯಿತು. ಒಂದು ದಿನ ಹುಲಿಯೊಂದು ನಾಯಿಯನ್ನು ಅಟ್ಟಿಸಿಕೊಂಡು ಬಂದಿತು. ಹೆದರಿ ಓಡಿದ ನಾಯಿ ತಾನು ಹುಲಿಯಾಗಿದ್ದರೆ ಎಷ್ಟು ನಿಶ್ಚಿಂತವಾಗಿರಬಹುದಿತ್ತು. ಯಾರಿಗೂ ಹೆದರಬೇಕಾಗಿಲ್ಲ ಎಂದುಕೊಂಡಾಗ ಅದು ಹುಲಿಯಾಗಿ ಪರಿವರ್ತನೆಗೊಂಡಿತು. ಎಲ್ಲ ಪ್ರಾಣಿಗಳನ್ನೂ ಹೆದರಿಸಿಕೊಂಡು ಕಾಡಿನಲ್ಲಿ ಅಡ್ಡಾಡುತಿರುವಾಗ ಒಂದು ದಿನ ಒಬ್ಬ ಬೇಟೆಗಾರ ಬಿಲ್ಲು ಬಾಣಗಳೊಡನೆ ಹುಲಿಯ ಬೆನ್ನು ಹತ್ತಿದಾಗ ತಾನು ಬೇಟೆಗಾರನಾದರೆ ಚೆಂದ ಎಂದು ಆಸೆ ಪಟ್ಟಿತು. ಬೇಟೆಗಾರನಾಗಿ ರೂಪಾಂತರ ಹೊಂದಿತು. ಒಂದು ದಿನ ಬೇಟೆ ಹುಡುಕುತ್ತ ಅಲೆದಾಡಿ ದಣಿದ ಬೇಟೆಗಾರ ಗಿಡವೊಂದರ ಕೆಳಗೆ ವಿಶ್ರಮಿಸಿಕೊಂಡ. ಬೀಸುವ ತಂಗಾಳಿಗೆ ತೊನೆಯುತ್ತ ನಿಂತ ಮರವನ್ನು ನೋಡಿ ಬೇಟೆಗಾರ, ಈ ಮರ ಎಷ್ಟು ನಿಶ್ಚಿಂತವಾಗಿದೆ, ಬಲಿಷ್ಠವಾಗಿದೆ. ಇದಕ್ಕೆ ಯಾರ ಭಯವೂ ಇಲ್ಲ. ನಾನೂ ಒಂದು ಮರವಾದರೆ? ಎಂದುಕೊಂಡು ದೇವರನ್ನು ಪ್ರಾರ್ಥಿಸುತ್ತಲೇ ಒಂದು ದಿನ ಕಟಕಟ ಸದ್ದು ಕೇಳಿ ಮರಕ್ಕೆ ಭಯವಾಯಿತು. ಏನೆಂದು ನೋಡಿದರೆ ಮರದ ಕಾಂಡವನ್ನು ಇಲಿಯೊಂದು ಕಟಕಟನೆ ಕಡಿಯುತ್ತಿತ್ತು. ಇಲಿಯೇ ಆಗಿ ಬಿಟ್ಟರೆ ಗಿಡವನ್ನೂ ಕಡಿಯಬಹುದು ಎಂದುಕೊಳ್ಳುವಾಗಲೇ ಇಲಿಯಾಗಿ ಬದಲಾವಣೆ ಹೊಂದಿತು.

ಪ್ರತಿಯೊಬ್ಬರಿಗೂ ತಮ್ಮದೇ ಆದ ಸಮಸ್ಯೆಗಳು, ಸಂಕಷ್ಟಗಳು ಇರುತ್ತವೆ. ಒಬ್ಬರು ಇನ್ನೊಬ್ಬರಂತಾಗಲು ಪ್ರಯತ್ನಿಸಬೇಕಾಗಿಲ್ಲ; ತನಗೆ ಪ್ರಾಪ್ತಿಯಾದ ದೇಹ, ಮನಸ್ಸು, ಬುದ್ಧಿ, ಪರಿಸರ ಇವನ್ನು ಪೂರಕವಾಗಿ ಬಳಸಿಕೊಂಡು ಬೆಳೆಯಲು ಯತ್ನಿಸಬೇಕು. ಅವರಂತೆ ನನಗಿದ್ದರೆ ನಾನು ಹಾಗಾಗುತ್ತಿದ್ದೆ ಹೀಗಾಗುತ್ತಿದ್ದೆ. ಎಂದು ಆಲೋಚಿಸಬಾರದು. ಅದಕ್ಕಾಗಿಯೇ ಅಲ್ಲಮಪ್ರಭು ದೇವರು ತಮ್ಮೊಂದು ವಚನದಲ್ಲಿ ಹೇಳುವರು, "ಕೊಟ್ಟ ಕುದುರೆಯ ಏರಲರಿಯದೆ ಬೇರೊಂದು ಕುದುರೆಯ ಬಯಸುವವರು ವೀರರೂ ಅಲ್ಲ ಧೀರರೂ ಅಲ್ಲ." ಶರೀರವು ಒಂದು ಕುದುರೆ. ಇದನ್ನೇ ಪಳಗಿಸಿಕೊಂಡು ನಾವು ಮುಂದುವರಿಯಬೇಕು, ಗುರಿ ಮುಟ್ಟಬೇಕು.

☹ ಸಮಸ್ಯೆ ? - ಸಮಾಧಾನ ! ☺

☐ ಪೂಜ್ಯ ಕುಮಾರ ನಿಜಗುಣ ಸ್ವಾಮೀಜಿ, ಶಂಭು ಲಿಂಗನ ಬೆಟ್ಟ, ಚಿಲಕವಾಡಿ

? ಶರಣ ವಂದನೆ ಕಾರ್ಯಕ್ರಮಕ್ಕಾಗಿ ಕಲ್ಯಾಣ ಕಿರಣದ ಸೆಪ್ಟೆಂಬರ್ ಸಂಚಿಕೆಯಲ್ಲಿ ಶರಣರ ಹೆಸರುಗಳನ್ನು ಪ್ರಕಟಿಸಲಾಗಿದೆಯಷ್ಟೆ. ಅದರಲ್ಲಿ ಶರಣೆ ಗಂಗಾಂಬಿಕೆಯ ಹೆಸರೇ ಇಲ್ಲ. ಕಂಡು ನೋವಾಯಿತು. ಮರೆವಿನಿಂದ ಬಿಡಲಾಗಿದೆಯೋ ಅಥವಾ ಉದ್ದೇಶಪೂರ್ವಕವಾಗಿ ಬಿಡಲಾಗಿದೆಯೊ?

★ ಉದ್ದೇಶಪೂರ್ವಕವಾಗಿ ಬಿಡಲಾಗಿದೆ. ಏಕೆಂದರೆ ಧರ್ಮಗುರು ಬಸವಣ್ಣನವರಿಗೆ ಇದ್ದುದು ಒಬ್ಬಳೇ ಪತ್ನಿ, ನೀಲಗಂಗಾ(ಂಬಿಕೆ). ನೀಲಗಂಗಾ ಗುರು ಬಸವಣ್ಣನವರ ತಾಯಿಯ ಅಣ್ಣ ಬಲದೇವರಸರ ಏಕೈಕ ಪುತ್ರಿ. ಬಾಲ್ಯದಲ್ಲೇ ವಿವಾಹವಾಗಿದ್ದಿತು. ಪಾಲ್ಕುರಿಕೆ ಸೋಮನಾಥ, ಭೀಮಕವಿ ಮುಂತಾದವರೆಲ್ಲ ಒಬ್ಬ ಪತ್ನಿಯನ್ನು ಮಾತ್ರ ಪ್ರಸ್ತಾಪಿಸಿದ್ದಾರೆ. ನಂತರದ ಕಾಲಮಾನದಲ್ಲಿ ಬರೆದ ಕವಿಗಳು ಇಬ್ಬರನ್ನು ಊಹಿಸಿದ್ದಾರೆ. ಶ್ರೀ ಸಿದ್ಧರಾಮೇಶ್ವರರು ಬರೆದ ತ್ರಿವಿಧಿಗಳಲ್ಲಿ ಹಲವಾರು ಶರಣೆಯರ ಹೆಸರುಗಳು ಉಲ್ಲೇಖಿಸಲ್ಪಟ್ಟಿವೆ. ನೀಲಾಂಬಿಕೆಯ ಹೆಸರು 3 ಬಾರಿ ಬಂದಿದೆ. ಗಂಗಾಂಬಿಕೆಯ ಹೆಸರು ಇಲ್ಲವೇ ಇಲ್ಲ. ಅಲ್ಲಮ ಪ್ರಭುದೇವರ ಒಂದು ವಚನ ಹೀಗಿದೆ. "ಸತಿಯ ಕಂಡು ವ್ರತಿಯಾದ ಬಸವಣ್ಣ; ವ್ರತಿಯಾಗಿ ಬ್ರಹ್ಮಚಾರಿಯಾದ ಬಸವಣ್ಣ." ಒಂದು ವೇಳೆ ಇಬ್ಬರು ಪತ್ನಿಯರಿದ್ದಿದ್ದರೆ ಆಗ "ಸತಿಯರ ಕಂಡು" ಎಂದು ಹೇಳುತ್ತಿದ್ದರು. ಕೃಷ್ಣಾ ನದಿಯ ದಂಡೆಯ ಮೇಲೆ ತಂಗಡಗಿ ಬಳಿ ಇರುವ ಗದ್ದುಗೆ - ಲಿಂಗೈಕ್ಯ ಮಂಟಪ ನೀಲಗಂಗಮ್ಮನ ಗದ್ದುಗೆ ಎಂದೇ ಪ್ರಸಿದ್ಧವಾಗಿದೆ. ಧರ್ಮಪಿತ ಬಸವಣ್ಣನವರ ವಚನಗಳಲ್ಲಿ ನೀಲಲೋಚನೆಯ ಹೆಸರು ಮಾತ್ರ ಪ್ರಸ್ತಾಪವಾಗಿದೆ. ಇದೆಲ್ಲದರಿಂದ ತಿಳಿದು ಬರುವುದೇನೆಂದರೆ ಗುರು ಬಸವಣ್ಣನವರು ಮದುವೆಯಾಗಿದ್ದು ಸೋದರ ಸೊಸೆ ನೀಲಗಂಗಾಂಬಿಕೆಯನ್ನು ಮಾತ್ರ. ಇನ್ನು ಒಂದು ಸಂದೇಹ ಉಳಿಯುತ್ತದೆ; ಕರ್ನಾಟಕ ವಿಶ್ವವಿದ್ಯಾಲಯ ಮತ್ತು ಸರ್ಕಾರ ಪ್ರಕಟಿಸಿರುವ ವಚನ ಸಂಪುಟಗಳಲ್ಲಿ ಇಬ್ಬರ ವಚನಗಳೂ ಇವೆಯಲ್ಲ ಎಂಬುದು. ನನ್ನ ಖಚಿತ ಅಭಿಪ್ರಾಯವೆಂದರೆ ಒಬ್ಬಳೇ ಎರಡು ಮುದ್ರಿಕೆಗಳನ್ನಿಟ್ಟುಕೊಂಡು ವಚನ ಬರೆದಿರುವುದು. ಗಂಗಾಂಬಿಕೆಯ ಹೆಸರಿನಲ್ಲಿ ಪ್ರಕಟವಾದವು ಅಷ್ಟೊಂದು ಪ್ರೌಢವೂ, ತಾತ್ವಿಕವೂ ಆಗಿಲ್ಲ. ಆದ್ದರಿಂದ ಅವು ಆರಂಭದ ದಿನಗಳಲ್ಲಿ ನೀಲಗಂಗಮ್ಮ ಬರೆದವು ಎನ್ನಬಹುದು.

☐ ಮಲ್ಲಿಕಾರ್ಜುನ ರಾಚಯ್ಯ ಸ್ವಾಮಿ ಸಂಗಮ, ಹುಮನಾಬಾದ್

? ಪೂಜ್ಯರೇ, ಪೂಜ್ಯ ಲಿಂಗಾನಂದ ಸ್ವಾಮಿಗಳು ಮತ್ತು ತಾವು ಮಾಡಿರುವ, ಮಾಡುತ್ತಿರುವ ಕಾರ್ಯ ಅಪ್ರತಿಮ. ಎಷ್ಟು ಕೊಂಡಾಡಿದರೂ ಕಡಿಮೆ. ನನ್ನ ಕೆಲವು ಪ್ರಶ್ನೆಗಳು.

1. ಕಲ್ಯಾಣ ಪರ್ವದ 2ನೇ ದಿನ ಶರಣ ವಂದನೆ ತುಂಬಾ ದೀರ್ಘವಾಯಿತು. ಇದರ ಬದಲು ಸಂಕ್ಷಿಪ್ತ ಪ್ರಾರ್ಥನೆ ಮಾಡಿ, ಅತಿಥಿಗಳಿಂದ ಉಪನ್ಯಾಸಕರಿಂದ ಭಾಷಣ ಮಾಡಿಸುವುದು ಒಳ್ಳೆಯದು.

2. ಲಿಂಗದೇವ ವಚನಾಂಕಿತ ಬಳಕೆಯಿಂದ ಅನೇಕರು ದೂರವಾಗಿದ್ದಾರೆ. ನೀವು ವಾಪಸ್ಸು ಪಡೆದರೆ ಎಲ್ಲರೂ ಒಟ್ಟಾಗಬಹುದು ಎಂದು ನಮ್ಮ ಎಣಿಕೆ.

3. ತಾವು ಎಲ್ಲಾ ಮಠಾಧೀಶರನ್ನು ಒಟ್ಟುಗೂಡಿಸಿ ಲಿಂಗಾಯತರೆಲ್ಲರಿಗೆ ಒಂದೇ ತರಹದ ಪ್ರಾರ್ಥನೆಯನ್ನು ಹೇಳಿಕೊಟ್ಟರೆ ಒಳ್ಳೆಯದು. ಅದರಿಂದ ಸಂಘಟನೆಯು ಮತ್ತಷ್ಟು ಗಟ್ಟಿಯಾಗುತ್ತದೆ. ಬಹುಪಾಲು ಮಠಾಧೀಶರು ಮತ್ತು ಪ್ರಚಾರಕರು ಅವರವರ ಪ್ರತಿಷ್ಠೆಗಾಗಿ ಹೋರಾಡುತ್ತಿದ್ದಾರೆಂದು ನನ್ನ ಅನಿಸಿಕೆ.

★ 1. ಕಲ್ಯಾಣ ಪರ್ವ ಮತ್ತು ಶರಣ ಮೇಳ - ಇವು ಧಾರ್ಮಿಕ ವಿಧಿಗಳು. ಮುಸಲೀಮರು ಹಜ್ ಯಾತ್ರೆ ಹೋದಂತೆ ಇವಕ್ಕೆ ಬರುವ ಪರಿಪಾಠ ರೂಢಿಸಿಕೊಳ್ಳಬೇಕು. ನಮ್ಮ ಸಮಾಜದಲ್ಲಿ ಎಡಬಿಡದೆ ಭಾಷಣಗಳು, ಉಪನ್ಯಾಸಗಳು ನಡೆಯುತ್ತಿರುತ್ತವೆ. ಬರೀ ಮಾತಿನ ಮಂಟಪ ಕಟ್ಟುವವರು ಕೆಲವರು; ಪರಸ್ಪರ ವಿರೋಧಾಭಾಸವಾಗಿ ಭಾಷಣ ಮಾಡುವವರು ಮತ್ತೆ ಕೆಲವರು. ಬಸವಾದಿ ಪ್ರಮಥರನ್ನು ಏಕ ವಚನದಲ್ಲಿ ಅವ, ಇವ ಎಂದು ಸಂಬೋಧಿಸುವವರು ಇನ್ನು ಕೆಲವರು. ನಮ್ಮ ಗುರಿ ಬೇರೆ ಇದೆ. ಪೂಜೆ - ಪ್ರಾರ್ಥನೆ, ವಚನ ಪಠಣ - ಶರಣ ವಂದನೆ ಮುಖ್ಯ ಧಾರ್ಮಿಕ

ವಿಧಿಗಳು. ಶರಣ ಮೇಳದ ಐದೂ ದಿನ ಬರಲಾರದವರು ಕನಿಷ್ಠ ಪಕ್ಷ ಲಿಂಗಾಯತ ಧರ್ಮ ಸಂಸ್ಥಾಪನಾ ದಿನ (ಜನವರಿ 14) ಬಂದು ಸಮುದಾಯ ಪ್ರಾರ್ಥನೆ ಮತ್ತು ವಚನ ಪಠಣದಲ್ಲಿ ಭಾಗಿಗಳಾಗಬೇಕು. ಕಲ್ಯಾಣ ಪರ್ವದ ಮುಖ್ಯ ವಿಧಿ ಶರಣ ವಂದನೆ. ಆದಿ ಶರಣರನ್ನು ಸ್ಮರಿಸಿ, ಗೌರವ ಸಲ್ಲಿಸುವುದು ನಮ್ಮ ಆದ್ಯ ಕರ್ತವ್ಯ. ಹೆಸರುಗಳನ್ನು ಹೇಳಿವಾಗ ಎಷ್ಟೋ ಜನರಿಗೆ ತಮ್ಮ ಊರಿನಲ್ಲಿ ಅಥವಾ ಸಮೀಪದಲ್ಲೇ ಆ ಶರಣರ ಸ್ಥಾನಗಳಿರುವುದು ಗಮನಕ್ಕೆ ಬರುತ್ತದೆ. ಉಪನ್ಯಾಸಗಳಿಗಿಂತಲೂ ಶರಣ ವಂದನೆ ಮುಖ್ಯ ವಿಧಿ.

2. ನಮ್ಮಿಂದ ದೂರವಾಗಲು (ಅಥವಾ ನಮ್ಮನ್ನು ದೂರವಿಡಲು) ಲಿಂಗದೇವ ವಚನಾಂಕಿತ ಬಳಕೆ ಒಂದು ನೆಪ ಮಾತ್ರ. 1996ರಲ್ಲಿ ನಾನು ಬದಲಾವಣೆ ಮಾಡಿದ್ದು. ವಿರೋಧಿಸುವವರು ಅದಕ್ಕೂ ಮೊದಲು ಎಷ್ಟು ಪುರಸ್ಕರಿಸಿದ್ದಾರೆ, ಪ್ರೋತ್ಸಾಹಿಸಿದ್ದಾರೆ, ಗುರುತಿಸಿದ್ದಾರೆ, ಗೌರವಿಸಿದ್ದಾರೆ ಎಂಬುದನ್ನು ಅವರಿಂದಲೇ ಕೇಳಿರಿ.

ಲಿಂಗದೇವ ವಚನಾಂಕಿತ ಒಂದು ಸೈದ್ಧಾಂತಿಕ, ತಾತ್ವಿಕ ಬದಲಾವಣೆ. ಒಂದು ಮಹತ್ವದ ಸತ್ಯವನ್ನು ಸಾರಲು ನಾವು ವೈಯಕ್ತಿಕವಾಗಿ ಕಷ್ಟನಷ್ಟ ಅನುಭವಿಸಿದರೇನಂತೆ ಅದು ನಗಣ್ಯ. ತತ್ವ ಸಿದ್ಧಾಂತಗಳು ಇತಿಹಾಸದಲ್ಲಿ ಅಮರವಾಗುವವು.

3. ಎಲ್ಲ ಮಠಾಧೀಶರನ್ನು ಒಟ್ಟುಗೂಡಿಸಬೇಕೆಂಬ, ಒಂದೇ ರೀತಿಯ ಪ್ರಾರ್ಥನೆ ಜಾರಿಗೆ ಬರಬೇಕೆಂಬ ನಿಮ್ಮ ಮತ್ತು ಅನೇಕರು ಹೊಂದಿರುವ ಕನಸು ನಮ್ಮ ಸಮಾಜದಲ್ಲಿ ಎಂದೂ ನನಸಾಗದು. ಇಷ್ಟಲಿಂಗ ಪೂಜಾ ವಿಧಾನ, ವಿವಾಹ ವಿಧಿ, ಸಾಮೂಹಿಕ ಪ್ರಾರ್ಥನೆ ಮುಂತಾದ ಎಲ್ಲವುಗಳಲ್ಲಿ ಏಕರೂಪ ಬರಬೇಕೆಂದು ಪ್ರಯತ್ನ ಆರಂಭಿಸಿದವರು ಪೂಜ್ಯ ಅಪ್ಪಾಜಿ ಮತ್ತು ನಾವು. ಸಾಮೂಹಿಕ ಪ್ರಾರ್ಥನೆಯ ಪರಿಕಲ್ಪನೆ ಇಲ್ಲದಿದ್ದಾಗ ಕ್ರೈಸ್ತರ, ಇಸ್ಲಾಮೀಯರ ಪ್ರಾರ್ಥನಾ ಶಿಸ್ತು ನೋಡಿ ಅದರಂತೆ ನಮ್ಮಲ್ಲೂ ತರಲು ಪ್ರಯತ್ನ ಮಾಡಿದೆವು. ಪ್ರತಿಯೊಂದು ಮಠದವರೂ ಈಗ ಒಂದೊಂದು ಲಿಂಗಪೂಜಾ ವಿಧಾನ ವಿವಾಹ ವಿಧಿ ಶುರು ಮಾಡಿದ್ದಾರೆ, ಮಾಡುತ್ತಿದ್ದಾರೆ. ನೀವೇ ತಿಳಿಸಿರುವಂತೆ ಬಹುಪಾಲು ಮಠಾಧೀಶರು ಮತ್ತು ಪ್ರಚಾರಕರಿಗೆ ಅವರವರ ಪ್ರತಿಷ್ಠೆ, ಅವರ ಸಂಸ್ಥೆಗಳ ಹಿತಾಸಕ್ತಿ ಮುಖ್ಯವಾಗಿದೆಯೇ ಹೊರತು ಸಮಗ್ರ ಸಮಾಜದ ಸಂಘಟನೆ, ಸಂಸ್ಕಾರ, ಶಿಸ್ತು, ಬೆಳವಣಿಗೆ ಅಲ್ಲ. ಉಳಿದ ಮಠಾಧೀಶರಿರಲಿ ನಮ್ಮಿಂದ ಬಿಟ್ಟು ಹೋದ ಪ್ರಭೃತಿಗಳೇ ಪ್ರತ್ಯೇಕ ಪ್ರಾರ್ಥನಾ ವಿಧಿ, ಲಿಂಗಪೂಜಾ ವಿಧಾನ ಮುಂತಾಗಿ ಬರೆದುಕೊಳ್ಳುತ್ತಾರೆ. ಒಂದು ಧರ್ಮಕ್ಕೆ, ಅದನ್ನು ಅವಲಂಬಿಸಿದ ಲಿಂಗಾಯತ ಸಮಾಜಕ್ಕೆ ಹೊಸ ಚೈತನ್ಯ ತರಲು ಏನೇನು ರೂಪುರೇಷೆ ನಾವು ಹಾಕುತ್ತೇವೋ ಅದನ್ನೆಲ್ಲ ನಕಲು ಮಾಡಿ, ಅದರ ವಿರುದ್ಧ ಶಕ್ತಿಯನ್ನು ತಯಾರು ಮಾಡುವುದರಲ್ಲೇ ಆಸಕ್ತರು. ಆದ್ದರಿಂದ ಈ ಸಮಾಜದ ಮಠಾಧೀಶರು ಒಗ್ಗಟ್ಟಾಗುವರು ಎಂಬ ಹಗಲು ಕನಸನ್ನು ಕಾಣುವುದನ್ನು ನಾವೂ ಬಿಡುತ್ತೇವೆ, ನೀವೂ ಬಿಡಿ. ಅವರು ಶಾಲೆ - ಕಾಲೇಜು ಕಟ್ಟಡ ಕಟ್ಟುತ್ತಾರಲ್ಲ ಆ ಸ್ಮಾರಕಗಳನ್ನು (?) ನೋಡಿ ಸಂತೋಷ ಪಟ್ಟುಕೊಳ್ಳಿರಿ.

☐ ಬಸವನ ಗೌಡ ಪಾಟೀಲ್, ಬಿಜಾಪುರ

? ಕಾಯಕ - ದಾಸೋಹ - ಪ್ರಸಾದ ಇವು ಮೂರು ಅರ್ಪಣಾ ತತ್ವದಲ್ಲಿ ಬರುತ್ತವೆಂದು ನೀವು ಆಗಾಗ ಹೇಳುತ್ತೀರಿ. ಇವುಗಳ ವಿಶೇಷವೇನು? ಸಂಕ್ಷಿಪ್ತವಾಗಿ ಹೇಳಿರಿ.

★ 1. ಕೇವಲ ತಿನ್ನಲಿಕ್ಕಾಗಿ ದುಡಿದರೆ ಅದು ದುಡಿತ (Labour) ಬದುಕಲಿಕ್ಕಾಗಿ, ಉಪಜೀವನ ಮಾಡಲು ದುಡಿದರೆ ಅದು ಉದ್ಯೋಗ (Work) ದೇವನ ಅನುಗ್ರಹ ಪಡೆದುಕೊಳ್ಳಲಿಕ್ಕಾಗಿ ಕರ್ತವ್ಯ ನಿಷ್ಠೆಯಿಂದ ದುಡಿದರೆ ಅದು ಕಾಯಕ.(Work divine)

2. ಯಾರದೋ ಒತ್ತಡಕ್ಕೆ ಮಣಿದು ದಾನ ಕೊಟ್ಟರೆ ಅದು ದಂಡ. ಇಲ್ಲದವರೆಂಬ ಮರುಕದಿಂದ ಕೊಟ್ಟರೆ ಅದು ದಾನ. ಕರ್ತವ್ಯ ಪ್ರಜ್ಞೆಯಿಂದ ಆದಾಯದ ಒಂದು ಪಾಲನ್ನು ಕೊಟ್ಟರೆ ದಾಸೋಹ.

3. ಕೇವಲ ತಿನ್ನಲಿಕ್ಕಾಗಿ ಬದುಕಿದರೆ ತಿಂದ ಆಹಾರ ಕೂಳು. ಬದುಕಲಿಕ್ಕಾಗಿ ತಿಂದರೆ ತಿಂದ ಆಹಾರ ಊಟ; ದೇವನಿಗೆ ಸಮರ್ಪಿತ ಶರಣರಾಗಿ ಅವನ ಒಲುಮೆಗಾಗಿ ಉಂಡರೆ ಅದು ಪ್ರಸಾದ.

ವಿಶ್ವಧರ್ಮ ಪ್ರವಚನ ಭಾಗ -2

ಶರಣ ಬಂಧುಗಳೇ, ವಿಶ್ವಧರ್ಮ ಪ್ರವಚನವನ್ನು ಧಾರಾವಾಹಿಯಾಗಿ ಕಲ್ಯಾಣ ಕಿರಣದಲ್ಲಿ ಬರೆಯುತ್ತಿದ್ದು 1987ರಲ್ಲಿ ಪುಸ್ತಕ ರೂಪದಲ್ಲಿ ಮೊದಲನೆಯ ಮುದ್ರಣವನ್ನು ಕಂಡಿತು. ಕಲ್ಯಾಣ ಕಿರಣದಲ್ಲಿ ಮುಂದುವರಿಸಲಾಯಿತು. ನಂತರ 1997ರಲ್ಲಿ ಮುಂದುವರಿದ ಭಾಗವನ್ನು ಸೇರಿಸಿ 1997ರಲ್ಲಿ ಪ್ರಕಟಿಸಲಾಯಿತು. ಭಾಗ 2ನ್ನು ಬರೆಯಿರಿ ಎಂದು ಬಹಳ ಜನರಿಂದ ಬೇಡಿಕೆ ಮತ್ತು ಒತ್ತಡವಿದ್ದಿತು. ಆದರೂ ಬರೆಯಲು ಆಗಿರಲಿಲ್ಲ. ಈಗ ಆರಂಭಿಸಬೇಕೆಂದು ಸಂಕಲ್ಪಿಸಿದ್ದೇನೆ.
ಈವರೆಗೆ, ಮೊದಲ ಭಾಗದಲ್ಲಿ ವಿಶ್ವಗುರು ಬಸವಣ್ಣನವರ ಜೀವನ ಚರಿತ್ರೆ ಹೇಳುತ್ತ ಜೊತೆಯಲ್ಲಿ ತತ್ವವನ್ನು ಹೇಳುತ್ತಾ ಬಂದಿದ್ದೇನೆ. ಗುರು ಬಸವಣ್ಣನವರ ಜನನ, ಬಾಲ್ಯ, ಶಿಕ್ಷಣ, ಮನೆಯಿಂದ ನಿರ್ಗಮನ, ಕೂಡಲ ಸಂಗಮಕ್ಕೆ ಆಗಮನ, ವಿದ್ಯಾಭ್ಯಾಸ, ಮದುವೆ ಪ್ರಸ್ತಾಪ, ಕನಸು, ಇಷ್ಟಲಿಂಗದ ಆವಿಷ್ಕಾರ, ಕೂಡಲ ಸಂಗಮದಿಂದ ನಿರ್ಗಮನ, ವಿವಾಹ, ಕರಣಿಕ ಕಾಯಕ ಸ್ವೀಕಾರ, ಸ್ವರ್ಣ ಪತ್ರ ಓದುವಿಕೆ, ಭಂಡಾರಿಯ ಪದವಿ ಸ್ವೀಕಾರ, ಅನುಭವ ಮಂಟಪ ಸ್ಥಾಪನೆಯವರೆಗೆ ಕಥೆಯು ಸಾಗಿ ಬಂದಿದೆ. ಇನ್ನು ತತ್ವದೃಷ್ಟಿಯಿಂದ ವೈಜ್ಞಾನಿಕ ಯುಗದಲ್ಲಿ ಧರ್ಮದ ಆವಶ್ಯಕತೆ, ಧರ್ಮ ಎಂದರೇನು, ಅವತಾರ ಸಿದ್ಧಾಂತ, ಆದರ್ಶ ಶಿಕ್ಷಣ, ಮಾನಸಾಂತರ, ದೇವನಿಗಾಗಿ ಹಂಬಲ, ಭಕ್ತಿ ಯೋಗ, ಶೂನ್ಯ ಸಿದ್ಧಾಂತ, ಆತ್ಮನ ಅಸ್ತಿತ್ವ ಮತ್ತು ಸ್ವರೂಪ, ಮದುವೆಯ ಪರಿಕಲ್ಪನೆ, ಇಷ್ಟಲಿಂಗದ ಆವಿಷ್ಕಾರ, ಕಾಯಕ ಸಿದ್ಧಾಂತ, ಅನುಭವ ಮಂಟಪದ ಪರಿಕಲ್ಪನೆ, ಪ್ರಗತಿಪರ ಧರ್ಮ - ಇಷ್ಟು ವಿಷಯ ಪ್ರಸ್ತಾಪವಾಗಿವೆ. ಪ್ರಗತಿಪರ ಧರ್ಮ ಕುರಿತು ಇನ್ನೂ ವಿಷಯ ಬಾಕಿ ಇರುವ ಕಾರಣ ಅದನ್ನು ಮುಂದುವರಿಸುತ್ತಿದ್ದೇನೆ.

ಪ್ರಗತಿ ಪರ ಧರ್ಮ

ಗುರು ಬಸವಣ್ಣನವರು ಸಂಸ್ಥಾಪಿಸಿ ಕೊಟ್ಟ ಲಿಂಗಾಯತ ಧರ್ಮವು ವೈಚಾರಿಕ (rational) ಮತ್ತು ಪ್ರಗತಿಪರ (progressive religion) ಧರ್ಮವಾಗಿದೆ. ಸ್ವಭಾವತಃ ವೈಚಾರಿಕವಾಗಿರುವುದು ಬೇರೆ ಕಷ್ಟಪಟ್ಟು ಸಮರ್ಥಿಸಿ ಕೊಳ್ಳುವುದು. ಮೂಢನಂಬಿಕೆಗಳನ್ನು ಕೆಲವರು ಬಹಳ ಕಷ್ಟಪಟ್ಟು ಸಮರ್ಥಿಸಿಕೊಳ್ಳುವರು. ಎಂಥಾ ಕೆಟ್ಟು ನಿಂತ ಗಡಿಯಾರವು ಸಹ ದಿನಕ್ಕೆರಡು ಬಾರಿ ವೇಳೆಯನ್ನು ಸರಿಯಾಗಿ ತೋರಿಸುವುದಂತೆ ! ತಾತನ ಕಾಲದ ಒಂದು ಗಡಿಯಾರ ಕೆಟ್ಟು ನಿಂತು ಹತ್ತು ವರ್ಷವಾಗಿರುತ್ತದೆ ಎಂದುಕೊಳ್ಳುವ. ಅದರ ಮುಳ್ಳುಗಳು ಆರು ಗಂಟೆಗೆ ನಿಂತಿವೆ. ಅಜ್ಜನ ನೆನಪಿಗಾಗಿ ಅದನ್ನು ಗೋಡೆಯ ಮೇಲೆ ತೂಗು ಹಾಕಿ ಕೊಂಡಿದ್ದಾರೆ. ಅದರ ಮುಂದೆ ಬೆಳಿಗ್ಗೆ 6ಕ್ಕೆ ಸಂಜೆ 6ಕ್ಕೆ ನಿಂತು ನೋಡಿದಾಗ ಅದು ಸರಿ ಇದೆ ಎನ್ನಿಸುವುದಲ್ಲವೆ? ಆದರದು ಚಲಾವಣೆಯಲ್ಲಿಲ್ಲದ ಗಡಿಯಾರ. ಹಾಗೆಯೇ ಕೆಲವು ಆಚರಣೆಗಳು ಒಂದು ಕಾಲದಲ್ಲಿ ಅಗತ್ಯವೆನಿಸಿ ರೂಢಿಗೆ ಬಂದಿರುತ್ತವೆ. ಆದರೆ ಕಾಲಾನಂತರದಲ್ಲಿ ಅವು ನಿರುಪಯುಕ್ತವಾಗುತ್ತವೆ. ಕೆಲವು ಉದಾಹರಣೆಗಳನ್ನು ನೋಡೋಣ.

1. "ರಾತ್ರಿ ವೇಳೆಯಲ್ಲಿ ಕಸಗುಡಿಸಿ, ಹೊರಗೆ ಚೆಲ್ಲಬಾರದು. ಲಕ್ಷ್ಮಿಯು ಮನೆಬಿಟ್ಟು ಹೋಗುತ್ತಾಳೆ." ಹಿಂದಿನ ಕಾಲದಲ್ಲಿ ವಿದ್ಯುತ್ ದೀಪಗಳಿರಲಿಲ್ಲ. ಮನೆಯಲ್ಲಿ ಹಚ್ಚುವ ಎಣ್ಣೆ ದೀಪ (ಚಿಮಣಿ ಎಣ್ಣೆ ದೀಪ) ಸಾಕಷ್ಟು ಬೆಳಕು ಚೆಲ್ಲುತ್ತಿರಲಿಲ್ಲ. ಮಕ್ಕಳಿಗೆ ಹಾಕಿದ ಒಡವೆ, ಕೈಯುಂಗುರ, ಸಡಿಲಗೊಂಡ ಓಲೆ, ತುಂಡಾದ ಸರ ಮುಂತಾದವು ಕಳಚಿ ಬಿದ್ದರೆ ಕಸದ ಜೊತೆಗೆ ಹೊರಕ್ಕೆ ಎಸೆಯುವ ಸಂಭವವಿರುತ್ತದೆ ಎಂದು ಈ ನಂಬಿಕೆ ಬಂದಿರಲು ಸಾಧ್ಯ. ಕಸವನ್ನು ಲಕ್ಷ್ಮಿ ಎನ್ನುವುದಾದರೆ ಹಾಗಾದರೆ ಅದನ್ನೇಕೆ ಗುಡಿಸಿ, ಹೊರಗೆ ಹಾಕಬೇಕು. ಮನೆಯಲ್ಲೇ ಕೂಡಿ ಹಾಕಿ ಕೊಳ್ಳಬಹುದಲ್ಲವೆ?

2. ಅಷ್ಟಪುತ್ರ ಸೌಭಾಗ್ಯವತಿಯಾಗು ಎಂದು ಹಿಂದಿನವರು ಮದುವೆಯಾಗಿ ಬಂದ ದಂಪತಿಗಳಿಗೆ ಹರಸುತ್ತಿದ್ದರು. ಆ ಕಾಲದಲ್ಲಿ ಸಾವಿನ ಪ್ರಮಾಣ ಜಾಸ್ತಿ ಇತ್ತು. ಹೆಚ್ಚು ಮಕ್ಕಳನ್ನು ಹೆತ್ತರೆ ಕೆಲವಾದರೂ ಉಳಿಯಬಹುದೆಂಬ ನಿರೀಕ್ಷೆ ಹಿರಿಯರದು. ಭೂಮಿ ವಿಸ್ತಾರವಾಗಿತ್ತು, ನಿಸರ್ಗ ಸಂಪತ್ತು ಸಾಕಷ್ಟಿತ್ತು. ಇವತ್ತು ಆ ಹರಕೆ ಅಪ್ರಸ್ತುತ. ನಾವಿಬ್ಬರು ನಮಗಿಬ್ಬರು ಎಂಬ ಸೂತ್ರವು ಹೋಗಿ, ನಾವಿಬ್ಬರು ನಮಗೆ ಒಬ್ಬನೇ/ಒಬ್ಬಳೇ ಎಂಬುದು ಚಲಾವಣೆಗೆ ಬರುತ್ತಿದೆ. ಇನ್ನೂ ಮುಂದುವರಿದಾಗ ನಾವಿಬ್ಬರು, ನಾವೇ ಮಕ್ಕಳು ಎಂಬುದೂ ಬರಬಹುದು.

3. ವೈದಿಕ ಶಾಸ್ತ್ರದ ಪ್ರಕಾರ ಮದುವೆಯಾದಾಗ ಹಗಲಿನಲ್ಲಿ ಆಕಾಶದತ್ತ ಕೈ ತೋರಿಸಿ ನಕ್ಷತ್ರ ದರ್ಶನವನ್ನು ಪುರೋಹಿತರು ಮಾಡಿಸುವರು. ಆಗ ನಕ್ಷತ್ರ ಕಾಣಬೇಕಲ್ಲಿ ? ಮನೆಯ ಮುಂದೆ ತುಳಸಿಗಿಡ, ಬೃಂದಾವನ ಇರಬೇಕೆನ್ನುವರು. ಹಿಂದಿನ ಕಾಲದಲ್ಲಿ ಮನೆಯ ಮುಂದೆ ಸೊಂಪಾಗಿ ತುಳಸಿ ಹಾಕಿದಾಗ ಅದರ ಗಾಳಿ ಬೀಸಿ ಬರಲಿ ಎಂಬ ಆಶಯವಿತ್ತು. ಇವತ್ತು ಮನೆಗಳ ಮುಂದೆ ಹಾಕಲು ಜಾಗವೂ ಇರದು. ಯಾವುದಾದರೂ ಮೂಲೆಯಲ್ಲಿ ಎರಡು ಕಡ್ಡಿ ನಾಲು ಎಲೆ ಇರುವಂತೆ ಕೆಲವರು ಇಟ್ಟುಕೊಂಡು ದಿನವೂ ಅರಿಷಿಣ ಕುಂಕುಮ ಹಚ್ಚಿ ಊದಿನ ಕಡ್ಡಿ ಬೆಳಗುವರು. ಒಂದು ಗಿಡವನ್ನು ಪೂಜಿಸಿದರೆ ಲಾಭವೇನು ಎಂಬ ತಿಳುವಳಿಕೆಯೂ ಇರದು. ತುಳಸಿ ಗಿಡದ ಎಲೆಗಳ ಉಪಯೋಗವನ್ನು ಮಾಡಿಕೊಳ್ಳರು. ಅದರ ಕಷಾಯದಿಂದ ಕೆಮ್ಮಿನ ನಿವಾರಣೆಯಾಗುತ್ತದೆ ಎಂಬ ಅರಿವು ಇರದು.

ಕ್ರಾಂತಿ ಪುರುಷ ಬಸವಣ್ಣನವರು ಸ್ವತಂತ್ರ ವಿಚಾರವಾದಿಗಳು. ಸಮಾಜದಲ್ಲಿ ಶಿಥಿಲಗೊಂಡ ನಂಬಿಕೆಗಳ ಅರಿವು ಇತ್ತು. ಸಮಾಜವನ್ನು ಮೂಢನಂಬಿಕೆಯ ಕೂಪದಿಂದ ಮೇಲಕ್ಕೆತ್ತಬೇಕೆಂಬ ಹಂಬಲವೂ ಇತ್ತು. ಜೊತೆಗೆ ಸಾಧಿಸಬಲ್ಲ ಕರ್ತೃತ್ವ ಶಕ್ತಿಯೂ ಇತ್ತು. ಸಾಮಾನ್ಯವಾಗಿ ಸಮಾಜದಲ್ಲಿ ಬಹುಪಾಲು ಜನರು ಚಿಂತನೆ ಮಾಡುವ ಸಾಮರ್ಥ್ಯ ಹೊಂದಿರುವುದಿಲ್ಲ. ರೂಢಿಗೊಂಡು ಬಂದಿರುವ ವ್ಯವಸ್ಥೆಗೆ ಒಗ್ಗಿಕೊಂಡು ಬಿಟ್ಟಿರುತ್ತಾರೆ; ಹೀಗಾಗಿ ಅವರಿಗೆ ಲೋಪ ದೋಷಗಳು ಕಾಣಬರುವುದೇ ಇಲ್ಲ. ಇನ್ನು ಕೆಲವರಿಗೆ ವ್ಯವಸ್ಥೆಯೊಳಗಣ ಲೋಪ ದೋಷಗಳು ಕಂಡು ಬಂದರೂ ಅವರು ಏನೂ ಪ್ರತಿಕ್ರಿಯೆ ತೋರದೆ ನಿಶ್ಚಿಂತರಾಗಿರುವರು. ಮತ್ತೆ ಕೆಲವರು ಲೋಪದೋಷ ಕುರಿತು ಪ್ರತಿಭಟಿಸುವರಾದರೂ ಯಾವ ಪರಿಹಾರವನ್ನೂ ಸೂಚಿಸರು. ಸಮಾಜದ ಸಮಗ್ರ ಸಮಸ್ಯೆಗಳಿಗೆ ಪರಿಹಾರ ಸೂಚಿಸಬಲ್ಲವರೇ ಕಾರಣಿಕರು, ಪ್ರವಾದಿಗಳು ಎಂದು ಹೇಳಬಹುದು. ಈ ಮಾತನ್ನು ಸಾಹಿತಿಗಳ ವಿಷಯದಲ್ಲೂ ಹೇಳಬಹುದು. ಕೆಲವು ವಿಚಾರವಾದಿಗಳು ಬಂಡಾಯ ಸಾಹಿತಿಗಳು ವ್ಯವಸ್ಥೆಯಲ್ಲಿ, ಸಮಾಜದಲ್ಲಿ ಆಳವಾಗಿ ಬೇರು ಬಿಟ್ಟಿರುವ ಮೂಢನಂಬಿಕೆ ಬಗ್ಗೆ ವಿಡಂಬನೆ ಮಾಡಿ ಬರೆಯುವರೇ ವಿನಾ ಅದಕ್ಕೊಂದು ಪರಿಹಾರವನ್ನಾಗಲಿ ಪರ್ಯಾಯ ವ್ಯವಸ್ಥೆಯನ್ನಾಗಲಿ ರೂಪಿಸರು. ಸಮಾಜ ಸುಧಾರಕರು ಅದಕ್ಕಿಂತ ಮಿಗಿಲಾಗಿ ದಾರ್ಶನಿಕರು ಪರ್ಯಾಯ ವ್ಯವಸ್ಥೆಯನ್ನು ಸೂಚಿಸುವರು.

ಹಿಂದುಗಳಲ್ಲಿ ನೆಲೆಗೊಂಡ ಹಲವು ಮೂಢನಂಬಿಕೆಗಳಲ್ಲಿ ತೀರ್ಥಸ್ನಾನವೂ ಒಂದು. ಕೆಲವು ವಿಶೇಷ ದಿನಗಳಂದು, ವಿಶೇಷ ಮುಹೂರ್ತದಲ್ಲಿ ವಿಶಿಷ್ಟ ನದಿ, ಸರೋವರದಲ್ಲಿ ಸ್ನಾನ ಮಾಡಿದರೆ ಪಾಪವು ನಿವೃತ್ತಿಯಾಗಿ ಪುಣ್ಯ ಪ್ರಾಪ್ತಿಯಾಗುವುದೆಂಬ ನಂಬಿಕೆ ಬಲವಾಗಿದೆ. ನದಿಯ ದಂಡೆಯ ಸ್ವಲ್ಪವೇ ನೀರಿನಲ್ಲಿ ಮುಳುಗು ಹಾಕುವ ದೃಶ್ಯ. ಜಿಗುಪ್ಸೆ ತರಿಸುತ್ತದೆ. ಸಿಕ್ಕಾಪಟ್ಟೆ ಜನರು ಕದಡಿದ ನೀರಿನಲ್ಲೇ ಸ್ನಾನ ಮಾಡುವುದರಿಂದ ಅದು ಮತ್ತಷ್ಟು ರಾಡಿಯಾಗುತ್ತದೆ. ಹಿಂದಿನ ಕಾಲದಲ್ಲಿ ಕ್ಷೇತ್ರ ದರ್ಶನಕ್ಕೆ ಹೋದವರು ನದಿ, ಜಲಾಶಯಗಳಲ್ಲೇ ಸ್ನಾನ ಮಾಡುವುದು ಅನಿವಾರ್ಯವಾಗಿತ್ತು. ಮಲಿನ ನೀರಿನಲ್ಲಿ ಸ್ನಾನ ಮಾಡುವುದರಿಂದ ದೇಹವು ಸ್ವಚ್ಛವಾಗುವುದೇ ವಿನಾ ಶುದ್ಧವಾಗುವುದಿಲ್ಲ. ಮಲಿನಗೊಂಡ ನೀರಿನಲ್ಲಿ ಸ್ನಾನ ಮಾಡಿದರೆ ಇನ್ನೂ ಹೆಚ್ಚಿನ ರೋಗಗಳು ಬರುವ ಸಂಭವವಿರುತ್ತದೆ. ಈಗೀಗ ಸರ್ಕಾರಗಳು ಎಚ್ಚೆತ್ತುಕೊಂಡು ವಿಶೇಷ ದಿನಗಳಂದು (ಮೂಢ) ಜನರು ಸ್ನಾನಕ್ಕೆ ಬರುವ ಕಾರಣ ಹೆಚ್ಚುವರಿ ನೀರನ್ನು ಆಣೆಕಟ್ಟುಗಳಿಂದ ಬಿಡಿಸುತ್ತವೆ. ಕೊಳಗಳಿದ್ದರೆ ನೀರು ನಿರಂತರವಾಗಿ ಹರಿದು ಹೋಗುವಂತೆ ಮಾಡಲಾಗುವುದು. ಒಮ್ಮೆ ಲಕ್ಷಾಂತರ ರೂಗಳನ್ನು ವ್ಯಯಿಸಿ ಸರ್ಕಾರವು ಗೋಕರ್ಣದ ಕೊಳದಿಂದ ತೆಗೆಸಿದಾಗ ನೂರಾರು ಟನ್ ಮಣ್ಣು ಬಂದಿತು. ಆ ನೀರಿನಲ್ಲಿ ಸ್ನಾನ ಮಾಡಿದವರಿಗೆ ಆನೆ ಕಾಲು ರೋಗ ಬರುತ್ತಿತ್ತಂತೆ. ಕಾಶಿಯಲ್ಲಿ ಗಂಗಾ ನದಿಯ ದಂಡೆಯ ಮೇಲೆ ಶವಗಳನ್ನು ಸುಡಲು ಇಟ್ಟು ಅರ್ಧ ಸುಟ್ಟ ಶವವನ್ನೇ ನದಿಗೆ ಎಸೆದು ಕಟ್ಟಿಗೆಯನ್ನು ಉಳಿಸಿಕೊಳ್ಳುವರಂತೆ. ನದಿಯಲ್ಲಿ ಶವಗಳು ತೇಲುತ್ತಿರುತ್ತವೆ. ಅಂಥಲ್ಲಿ ಪುಣ್ಯ ಸ್ನಾನಕ್ಕೆ ಹಾತೊರೆಯುವ ಜನರಿಗೆ ಸ್ವಚ್ಛತೆಯೂ ಬಯಲು ಮರೀಚಿಕೆ.

ಶುದ್ಧಾಶುದ್ಧತೆಯ ಬಗ್ಗೆ ಹಿಂದುಗಳಲ್ಲಿ ತಪ್ಪು ಕಲ್ಪನೆ ಇದೆ. ಸ್ವಚ್ಛತೆ (cleanliness) ಬೇರೆ ಶುದ್ಧಿ (puriy) ಬೇರೆ. ಒಬ್ಬ ವ್ಯಕ್ತಿ ಕೆಸರು ಮುಟ್ಟಿದಾಗ ಕೈಯು ಕೊಳಕಾಗುತ್ತದೆ ಅಶುದ್ಧ (Impure) ವಾಗುವುದಿಲ್ಲ. ಎಂಜಲ ಪಡೆದಾಗ, ಪರಸ್ತ್ರೀಯನು ಮುಟ್ಟಿದಾಗ ಕೊಳಕಾಗುವುದಿಲ್ಲ. ಅಶುದ್ಧ

(ಅಪವಿತ್ರ) ವಾಗುತ್ತದೆ. ನೀರಲ್ಲಿ ಮುಳುಗುವುದರಿಂದ ಶರೀರ ಸ್ವಚ್ಛವಾಗುತ್ತದೆ ಶುದ್ಧವಾಗುವುದಿಲ್ಲ. ಅದಕ್ಕಾಗಿಯೇ ಧರ್ಮ ಗುರು ಬಸವಣ್ಣನವರು ಹೇಳುತ್ತಾರೆ :

ತೊರೆಯ ಮೀವ ಅಣ್ಣಗಳಿರಾ, ತೊರೆಯ ಮೀವ ಸ್ವಾಮಿಗಳಿರಾ,
ತೊರೆಯಿಂ ಬೋ ತೊರೆಯಿಂ ಬೋ;
ಪರನಾರಿಯರ ಸಂಗವ ತೊರೆಯಿಂ ಬೋ!
ಪರಧನದಾಮಿಷವ ತೊರೆಯಿಂ ಬೋ!
ಇವ ತೊರೆಯದೆ ಹೋಗಿ ತೊರೆಯ ಮಿಂದಡೆ
ಬರುದೊರೆ ಹೋಹುದು, ಲಿಂಗದೇವಾ.

ನೀರಿನಿಂದ ದೇಹ ಶುಚಿಯಾದರೆ ಮಾಡಿದ ಪಾಪಕ್ಕೆ ಪಶ್ಚಾತ್ತಾಪ ಪಡುವುದರಿಂದ ಆತ್ಮಶುದ್ಧಿಯಾಗುತ್ತದೆ. ತೀರ್ಥ ಕ್ಷೇತ್ರದ ನೀರಲ್ಲಿ ಮಿಂದು ಶುದ್ಧರಾಗುತ್ತೇವೆ ಎನ್ನುವವರು ಕಾರು ಚಾಲಕನ ಮೈ ಕೊಳೆಯಾದಾಗ ಅವನಿಗೆ ಸ್ನಾನ ಮಾಡಿಸುವುದು ಬಿಟ್ಟು ಕಾರನ್ನು ತೊಳೆದಂತೆ.

ಶುಚಿತ್ವ - ಶುದ್ಧತೆ -ದಿವ್ಯತೆ

ಈ ಮೂರನ್ನು ಸಾಧಿಸುವುದೇ ಅಧ್ಯಾತ್ಮ ಜೀವನದ ಗುರಿಯಾಗಬೇಕು. ತ್ರಿಕರಣಗಳಾದ ಶರೀರ, ವಾಕ್ ಮತ್ತು ಮನಸ್ಸನ್ನು ದೈವೀಕರಿಸುವುದು ಹೇಗೆ ?

ಸ್ನಾನದಿಂದ ಶರೀರವು ಸ್ವಚ್ಛವಾಗುವುದು, ಕಾಯಕ ಮತ್ತು ಸೇವೆಯಿಂದ ಶುದ್ಧವಾಗುವುದು, ಉಪಾಸನೆ (ಪೂಜೆ -ಪ್ರಾರ್ಥನೆ -ಧ್ಯಾನ)ಯಿಂದ ದಿವ್ಯವಾಗುವುದು. ವಾಕ್ ಇಂದ್ರಿಯವಾದ ನಾಳಿಗೆಯು ತೊಳೆಯುವಿಕೆಯಿಂದ ಸ್ವಚ್ಛವಾಗುವುದು, ಒಳ್ಳೆಯ ಮಾತುಗಳಿಂದ ಶುದ್ಧವಾಗುವುದು, ಪ್ರಾರ್ಥನೆ ಮತ್ತು ಮಂತ್ರಜಪದಿಂದ ದಿವ್ಯವಾಗುವುದು. ಮನಸ್ಸು ನಿರಾಕಾರ ವಸ್ತು. ಭೌತಿಕ ವಸ್ತುವಲ್ಲ. ಹೀಗಾಗಿ ಅದು ಕೊಳೆಯಾಗದು. ಅದು ಶುದ್ಧವಾಗುವುದು ಉತ್ತಮ ಆಲೋಚನೆಗಳಿಂದ, ದಿವ್ಯವಾಗುವುದು ಮಂತ್ರ ಧ್ಯಾನದಿಂದ.

ಸಾಮಾನ್ಯವಾಗಿ ಮೂಢನಂಬಿಕೆಯ ಜನರಿಗೆ ದೇವರ ಸ್ವರೂಪ ತಿಳಿಯುವುದು ಕಷ್ಟಸಾಧ್ಯ. ಅದಕ್ಕೇ ಗುರು ಬಸವಣ್ಣನವರು ಹೇಳುತ್ತಾರೆ.

ನೀರ ಕಂಡಲ್ಲಿ ಮುಳುಗುವರಯ್ಯ
ಮರನ ಕಂಡಲ್ಲಿ ಸುತ್ತುವರಯ್ಯಾ!
ಬತ್ತುವ ಜಲವ ಒಣಗುವ ಮರನ
ನೆಚ್ಚಿದವರು ನಿಮ್ಮನೆತ್ತ ಬಲ್ಲರು, ಲಿಂಗದೇವಾ?

ಬೇಸಿಗೆಯಲ್ಲಿ ಬತ್ತುವ ಜಲವನ್ನು, ಕಡಿದಾಗ ಒಣಗುವ ಮರವನ್ನು ನಂಬಿದವರು ನಿರಾಕಾರನು, ನಿರ್ಗುಣನು, ಸಚ್ಚಿದಾನಂದ ನಿತ್ಯ ಪರಿಪೂರ್ಣನಾದ ದೇವನ ಸ್ವರೂಪವನ್ನು ಅರಿಯಲು ಸಾಧ್ಯವೆ ?

ಕೆಲವರು ಹೇಳುವುದುಂಟು, ಹಿಂದುಗಳಲ್ಲಿ ಭೂಮಿ, ನೀರು, ಅಗ್ನಿ, ಗಿಡ-ಮರ ಎಲ್ಲದರಲ್ಲೂ ದೇವರನ್ನು ಕಾಣಲಾಗುವುದು ಎಂದು. ಇವೆಲ್ಲವು ದೇವರು ಸೃಷ್ಟಿ ಮಾಡಿದ ವಸ್ತುಗಳು. ದೇವರು ಸರ್ವಾಂತರ್ಯಾಮಿ, ಸರ್ವವ್ಯಾಪಿಯಾಗಿರುವುದರಿಂದ ಎಲ್ಲದರಲ್ಲೂ ದೇವನು ಇರುವುದು ಸತ್ಯವಾದರೂ ಈ ಜಡವಸ್ತುಗಳನ್ನು ಆರಾಧಿಸುವವರು ಜ್ಞಾನಿಗಳಾಗಿರದೆ ಮೂಢಾತ್ಮರಾಗಿರುವರೆಂಬುದು ಸೂರ್ಯ ಪ್ರಕಾಶದಷ್ಟು ಸತ್ಯ. ಹೀಗಾಗಿ ಮೂಢಾಚರಣೆಯು ಭಕ್ತಿಯ ಪ್ರಾಕಾರವಾಗಿರದೆ ಒಂದು ಬಗೆಯ ಭ್ರಾಂತಿಯನ್ನು ಹುಟ್ಟಿಸುವ ಮಾಯೆಯೇ ಆಗಿರುತ್ತದೆ. ಧಾರ್ಮಿಕ ಆಚರಣೆಯು ಒಂದು ಸಾಧನವೇ ವಿನಾ ಅದೇ ಗುರಿಯಲ್ಲ, ಸಿದ್ಧಿಯಲ್ಲ; ಊದಿನ ಕಡ್ಡಿಯು ಸುಡಬೇಕೇ ವಿನಾ ಕೊಳೆಯಬಾರದು. ಬೆಂಕಿಯ ಸಂಪರ್ಕದಿಂದ ಊದಿನ ಕಡ್ಡಿ ನಿಧಾನವಾಗಿ ಸುಡುತ್ತಾ ಹೋದಾಗ ಸುವಾಸನೆ ಬೀರುವಂತೆ ಧಾರ್ಮಿಕ ಆಚರಣೆಯು ಜ್ಞಾನದ ಸಂಪರ್ಕದಲ್ಲೇ ಸಾಗಿದಾಗ ಅದು ಹೆಚ್ಚು ಸಂತೋಷವನ್ನು ತನಗೂ ಮತ್ತು ಇತರರಿಗೂ ನೀಡುತ್ತದೆ. ಊದಿನ ಕಡ್ಡಿ ನೀರಿನ ಸಂಪರ್ಕದಿಂದ ಕೊಳೆತರೆ ಸುವಾಸನೆ ಬೀರದೆಂತೋ ಹಾಗೆ ಧಾರ್ಮಿಕ ಆಚರಣೆಯು ಮೂಢನಂಬಿಕೆಯ ಸಂಪರ್ಕದಿಂದ ಕೊಳೆತಾಗ ಪ್ರಜ್ಞಾವಂತರನ್ನು ಆಕರ್ಷಿಸಲು ಅಸಮರ್ಥವಾಗುತ್ತದೆ.

ಒಮ್ಮೆ ಒಬ್ಬರು ಸ್ವಾಮಿಗಳು 150 ಕಿ.ಮೀಟರ್ ದೂರದಲ್ಲಿರುವ ಒಂದು ಊರಿಗೆ ಭಕ್ತರ ಮನೆಗೆ ಪೂಜೆಗಾಗಿ ಆಹ್ವಾನಿಸಲ್ಪಟ್ಟರು. ಅವರ ಪೂಜಾಮರಿ ಅಂದು ಸ್ವಾಮಿಗಳು ಉಪಯೋಗಿಸುತ್ತಿದ್ದ 8 ಏಣಿನ ವಿಭೂತಿಗಟ್ಟಿಯನ್ನು ತರಲು ಮರೆತಿದ್ದ. ಭಕ್ತರ ಮನೆಯಲ್ಲಿ ವಿಭೂತಿ ಗಟ್ಟಿಗಳು ಇದ್ದವು. ಆದರೆ ಅವರಿಗೆ ಅವರದೇ ಗಟ್ಟಿ -8 ಏಣಿನದು ಮತ್ತು ಅವರ ಗುರುಗಳ ಗದ್ದುಗೆಗೆ ಮುಟ್ಟಿಸಿ ಶುದ್ಧೀಕರಿಸಿದ್ದೇ ಬೇಕಾಗಿತ್ತು. ಮತ್ತೆ ಮಠಕ್ಕೆ ಕಾರನ್ನು ಕಳಿಸಿ ಆ ಗಟ್ಟಿಯನ್ನು ಶಿಷ್ಯರು ತರುವವರೆಗೂ ಸ್ವಾಮಿಗಳು ಪೂಜೆ -ಪ್ರಸಾದ ಮಾಡಲಿಲ್ಲ. ನೋಡಿ, ಇದು ಎಷ್ಟು ಅರ್ಥರಹಿತ, ಹಾಸ್ಯಾಸ್ಪದ ನೇಮ. ವಿಭೂತಿ ಮುಖ್ಯವೇ ವಿನಾ ಅದರ ಆಕಾರವಲ್ಲ. ಲೋಟ ಅಥವಾ ಪಾತ್ರೆಯ ಆಕಾರ ಯಾವುದಿದ್ದರೇನು ಬಾಯಾರಿಕೆ ತಣಿಸಲು ನೀರು ಕುಡಿಯುವುದು ಮುಖ್ಯ. ಇಂಥ ಒಣನಿಯಮಗಳು ಆತ್ಮಜ್ಞಾನವನ್ನು ನೀಡವು; ಅಂತಃಕರಣವನ್ನು ವಿಕಾಸಗೊಳಿಸವು. ಅಕ್ಕಮಹಾದೇವಿ ಹೇಳುತ್ತಾರೆ :

ಅಕ್ಕಿಯಿಲ್ಲದ ತುಷಕ್ಕೆ ಅಗ್ಗವಣಿಯನೆರೆದಡೆ
ಅದೆಂದಿಂಗೆ ಬೆಳೆದು ಫಲವಪ್ಪುದಯ್ಯಾ?
ಅರಿವಿಲ್ಲದವರಿಗೆ ಆಚಾರವಿದ್ದಡೆ
ಅರಕೆಗೆಟ್ಟು ಸುಖವೆಂದಪ್ಪುದಯ್ಯಾ?
ಹೊರೆದ ಪರಿಮಳ ಸ್ಥಿರವಾಗಬಲ್ಲುದೆ?
ಎನ್ನ ದೇವ ಚನ್ನಮಲ್ಲಿಕಾರ್ಜುನನರಿಯದವರಿಗೆ
ಆಚಾರವಿಲ್ಲ ಕಾಣಿರಣ್ಣಾ!

ಭತ್ತದ ಕಾಳಿನಲ್ಲಿ ಎರಡು ಭಾಗಗಳುಂಟು. ಹೊರಗಡೆಯ ಸಿಪ್ಪೆ ಮತ್ತು ಒಳಗಡೆಯ ಕಾಳು. ಇವೆರಡೂ ಒಂದಕ್ಕೊಂದು ಪೂರಕ ಮತ್ತು ಪೋಷಕ. ಸಿಪ್ಪೆಯಿಂದ ಕಾಳಿಗೆ ರಕ್ಷಣೆ. ಕಾಳಿನಿಂದ ಸಿಪ್ಪೆಗೆ ಸತ್ವ. ಕೇವಲ ಸಿಪ್ಪೆಯನ್ನು ಬಿತ್ತಿ ನೀರೆರೆದರೂ ಮೊಳೆಯದು, ಕೇವಲ ಕಾಳನ್ನು ಬಿತ್ತಿ ನೀರೆರೆದರೂ ಮೊಳೆಯದು. ಅದೇ ರೀತಿ ಧರ್ಮದಲ್ಲಿ 2 ಭಾಗ. 1. ವಿಚಾರ ಸಂಹಿತೆ ಇನ್ನೊಂದು 2. ಆಚಾರ ಸಂಹಿತೆ; ಅರಿವು ಮತ್ತು ಆಚಾರ. ಅರಿವಿಲ್ಲದವರಿಗೆ ಕೇವಲ ಆಚಾರವಿದ್ದರೆ ಅದು ಫಲ ಕೊಡದು; ಅದೇ ರೀತಿ ಆಚಾರವಿಲ್ಲದೆ ಕೇವಲ ಅರಿವು ಹೊಂದಿದವರಿಗೆ ಅದು ಶಬ್ದಜ್ಞಾನವಾಗಿ ಉಳಿದೀತೆ ವಿನಾ ಅನುಭಾವ ಅಳವಡವದು. ಒಳಗಡೆ ಅರಿವು ಪಕ್ವವಾಗಿ ಆಚಾರದಲ್ಲಿ ಪ್ರಕಟಗೊಂಡರೆ ಅದು ನೈಸರ್ಗಿಕವಾಗಿ ಅರಳಿದ ಹೂವಿನ ಪರಿಮಳದಂತೆ. ಆಚಾರವಿಲ್ಲದ ಅರಿವು ಅದು ಹೊರಗಿನಿಂದ ಲೇಪಿಸಿದ ಸುವಾಸನೆಯಂತೆ. ನುಡಿಯಿಂದ ಜನರು ಪ್ರಭಾವಿತರಾದರೂ ಅದಕ್ಕೆ ತಕ್ಕ ನಡೆ ಅಥವಾ ಆಚಾರವಿಲ್ಲದಿದ್ದರೆ ನುಡಿಯ ಪ್ರಭಾವ ಚಿರಕಾಲ ಉಳಿಯದು. ಆದ್ದರಿಂದ ಜ್ಞಾನ ಮತ್ತು ಆಚಾರಗಳೆರಡೂ ಜೊತೆಗೂಡಿಯೇ ಸಾಗಬೇಕು.

ಕೆಲವರು ಸಹಸ್ರ ಬಿಲ್ವಾರ್ಚನೆ, ಕೋಟಿ ಬಿಲ್ವಾರ್ಚನೆ ಎಂದು ದೊಡ್ಡ ಹಗರಣವನ್ನೇ ಮಾಡುವರು. ಇದರಲ್ಲಿ ಶಾರೀರಿಕ ಶ್ರಮ -ವ್ಯಾಯಾಮ ಇರುವುದೇ ವಿನಾ ಆಧ್ಯಾತ್ಮಿಕ ಸಾಧನೆ ಇರದು. ಅದಕ್ಕೇ ಒಂದು ವಚನದಲ್ಲಿ ಸಕಲೇಶ ಮಾದರಸರು ಹೀಗೆ ವಿಡಂಬಿಸುವರು :

ಕಾಡ ಪತ್ರಿಯನಾ ಕೀಡೆ ತಿಂದಿರವೆ?
ಉಡು ಏಕಾಂತವಾಸಿಯೆ ?
ತೋಳ ದಿಗಂಬರಿಯೆ? ಎತ್ತು ಬ್ರಹ್ಮಚಾರಿಯೆ ?
ಬಾವುಲು ತಲೆಕೆಳಗಾಗಿರ್ದಡೆ ತಪಸಿಯೆ ?
ಸಕಲೇಶ್ವರ ದೇವಾ, ನಿಮ್ಮ ನಿಜವನರಿಯದವರು
ಹೊರಹಂಚು, ಒಳಬೊಳ್ಳೆ, ಒಲ್ಲರು ಲಿಂಗೈಕ್ಯರು

ಮಾನವ ಶರೀರ ಹೇಗೆ ಬೊಜ್ಜು ಬೆಳೆದಂತೆ ಕಳಾಹೀನವೂ ಅಶಕ್ತವೂ ಆಗುವುದೋ ಹಾಗೆ ಆಂತರಿಕ ವಿಕಾಸವಾಗದೆ ಮಾಡುವ ಯಾಂತ್ರಿಕ ಮೂಢಾಚರಣೆಗಳ ಸಂಖ್ಯೆ ಬೆಳೆದಂತೆ ನಿಜವಾದ ಧಾರ್ಮಿಕ ಜ್ಞಾನ ಕಡಿಮೆಯಾಗುವುದು. ಕೆಲವರು ಕಾಡಿನ ಸೊಪ್ಪುಸದೆಗಳನ್ನು ತಿಂದುಕೊಂಡು ತಾವು ತಪಸ್ವಿಗಳೆಂದು ಬೀಗುವರು. ಕೀಡೆಗಳು ಸೊಪ್ಪು ಎಲೆಗಳನ್ನು ತಿಂದುಕೊಂಡು ತಾವು ಬಾಳ್ವೆ

ಮಾಡುವುದಿಲ್ಲವೆ ಎಂದು ಮಾದರಸ ಶರಣರು ಕೇಳುವರು. ಕೆಲವರು ಸದಾ ಏಕಾಂತವಾಸಿಗಳಾಗಿ ಗುಡ್ಡ, ಗವಿಗಳಲ್ಲಿ ವಾಸಿಸುವರು. ಅದು ದೊಡ್ಡ ಸಾಧನೆ ಎಂದು ಬಾಕಿ ಸಂಘ -ಸಂಸ್ಥೆ ಕಟ್ಟಿ ಧರ್ಮಪ್ರಚಾರ ಮಾಡುವವರನ್ನು ಉಪಾಧಿ ಹೊಂದಿದವರೆಂದು ವಿಡಂಬಿಸುವರು. ಉಡು ಎಂಬ ಪ್ರಾಣಿಯು ಮರಿಗಳನ್ನು ಹಾಕುತ್ತಲೇ ಅವೆಲ್ಲವೂ ತಂತಮ್ಮ ಆಹಾರ, ಆಸರೆ ಹುಡುಕಿಕೊಂಡು ಚದುರುತ್ತವೆ. ಉಡುವು ತನ್ನ ಮಕ್ಕಳನ್ನು ಸಹ ತಾನು ಸಾಕುವುದಿಲ್ಲ. ಅಂಥ ಉಡುವು ಏಕಾಂಗಿಯಾಗಿ ವಾಸಿಸುವ ತಾಪಸಿಗಿಂತ ಕಿರಿದೇನು? ಮತ್ತೆ ಕೆಲವರು ದಿಗಂಬರಿಗಳಾಗಿ ಸಂಚರಿಸುವರು. ತಾವು ಎಲ್ಲ ವ್ಯಾಮೋಹಗಳನ್ನು ಕಡೆಗೆ ಬಟ್ಟೆಯ ವ್ಯಾಮೋಹ ಸಹ ಬಿಟ್ಟಿರುವುದಾಗಿ ಸಂಭ್ರಮಿಸುವರು. ತೋಳ, ಹುಲಿ ಇತ್ಯಾದಿ ಎಲ್ಲ ಪ್ರಾಣಿಗಳೂ ದಿಗಂಬರಿಗಳಾಗಿಯೇ ಸಂಚರಿಸುತ್ತವಲ್ಲವೆ? ಹೋರಿಯನ್ನು ಕಸಿ ಮಾಡಿ ಎತ್ತನ್ನಾಗಿ ಮಾಡಿ ಅದರ ಇಂದ್ರಿಯ ವಿಕಾರವನ್ನು ತಡೆಗಟ್ಟುವರು. ಬಲವಂತವಾಗಿ ವಿರಕ್ತನನ್ನಾಗಿ ಎತ್ತನ್ನು ಮಾಡಿದ ಮಾತ್ರಕ್ಕೆ ಅದನ್ನು ಬ್ರಹ್ಮಚಾರಿ ಎನ್ನಲಾದೀತೆ? ಬ್ರಹ್ಮಚರ್ಯವು ಸ್ವಯಂ ಪ್ರೇರಣೆಯಿಂದ ಅರಿವಿನಿಂದ ಕೂಡಿದಾಗ ಅದಕ್ಕೆ ಅರ್ಥವಿರುತ್ತದಲ್ಲವೆ? ಬಾವುಲಿಯು ತಲೆ ಕೆಳಗಾಗಿ ತೂಗುತ್ತಲಿರುತ್ತದೆ. ಕೆಲವರು ಸಾಧಕರು ಒಂಟಿ ಕಾಲಿನ ಮೇಲೆ ನಿಂತು ತಪಸ್ಸು ಮಾಡಿದರೆ ಮತ್ತೆ ಕೆಲವರು ತಲೆ ಕೆಳಗೆ- ಕಾಲು ಮೇಲೆ ಮಾಡಿಕೊಂಡು ಶೀರ್ಷಾಸನದಲ್ಲಿ ನಿಂತು ತಪಸ್ಸು ಮಾಡುವರು. ಹಾಗಾದರೆ ಬಾವುಲಿ ಕಡಿಮೆ ತಪಸ್ವಿಯೆ? ನಿಜವಾದ ಸಾಧನೆ ಇರುವುದು ಪರಮಾತ್ಮನ ಜ್ಞಾನವನ್ನು ಹೊಂದುವುದರಲ್ಲಿ. ಆ ಜ್ಞಾನವಿಲ್ಲದ ಯಾಂತ್ರಿಕ ಸಾಧಕ ಹೊರಗೆ ನೋಡಲು ಚಂದ ಒಳಗೆ ನೋಡಿದರೆ ಯಾವ ಅರ್ಥವೂ ಇಲ್ಲ, ಪೊಳ್ಳು. ಇಂಥವರನ್ನು ನಿಜ ಶರಣರು ಮೆಚ್ಚಿಕೊಳ್ಳರು.

ಒಂದು ಟ್ರಾನ್ಸಿಸ್ಟರ್ ಇದೆ ಎಂದುಕೊಳ್ಳುವ. ಅದು ಹಾಡಬೇಕಾದರೆ ಸ್ವಿಚ್ ಹಾಕಬೇಕು. ಅಷ್ಟೇ ಸಾಲದು ಒಳಗೆ ಶೆಲ್ ಇರಬೇಕು. ಚಲಿಸುವ ಕಡ್ಡಿಯನ್ನು ನಮಗೆ ಬೇಕಾದ ಸ್ಟೇಷನ್ ಮೇಲೆ ನಿಲ್ಲಿಸಬೇಕು, ವಾಲ್ಯೂಂ ಕೊಡಬೇಕು. ಹಾಗೆ ಭಕ್ತನ ಹೃದಯವೇ ಒಂದು ಟ್ರಾನ್ಸಿಸ್ಟರ್, ಪೂಜೆ -ಪ್ರಾರ್ಥನೆ - ಧ್ಯಾನ ಎಂಬ ಸ್ವಿಚ್ ಹಾಕಬೇಕು. ಒಳಗಡೆ ಜ್ಞಾನದ ಶೆಲ್ ಇರಬೇಕು; ಏಕಾಗ್ರತೆ ಎಂಬ ಕಡ್ಡಿಯನ್ನು ನಿಲ್ಲಿಸಿ ಮಂತ್ರಧ್ಯಾನ ಎಂಬ ವಾಲ್ಯೂಂ ಕೊಡಬೇಕು.

ಒಂದು ದೇವಾಲಯವಿದೆ ಎಂದುಕೊಳ್ಳಿ. ಅಲ್ಲಿ ಒಳಗೆ ವಿಗ್ರಹವೂ ಇದೆ. ಆದರೆ ಬೆಳಕು ಇಲ್ಲದೆ ಕತ್ತಲೆ ತುಂಬಿದ್ದರೆ ಬಾವಲಿಗಳು ಬಂದು ಸೇರುವುವು. ಗುಡಿಯು ತುಂಬಾ ಹೊಲಸು ವಾಸನೆಯಿಂದ ಕೂಡಿ ಜನರು ಹೋಗಲಾರದಂತೆ ಆಗುವುದು. ಅಲ್ಲಿಗೆ ಬೆಳಕು ತುಂಬಾ ಅವಶ್ಯ. ಅದೇ ರೀತಿ ದೇಹ ದೇವಾಲಯದೊಳಗೆ ಆತ್ಮರೂಪದಲ್ಲಿ ಪರಮಾತ್ಮನಿದ್ದಾನೆ. ಜ್ಞಾನದ ಬೆಳಕಿರದ ಅಜ್ಞಾನದ ಕತ್ತಲೆಯ ಸ್ಥಿತಿ ಇದ್ದಾಗ ಅಲ್ಲಿ ದುಶ್ಚಟ, ದುರ್ಗುಣಗಳೆಂಬ ತೊಗಲು ಬಾವಲಿಗಳು ಆಶ್ರಯ ಹೊಂದಿ ದುರ್ವೃತ್ತಿಗಳು, ದುರಾಚಾರ ಎಂಬ ವಾಸನೆ ಬೀರ ತೊಡಗುತ್ತದೆ. ಅಲ್ಲಿ ಈಗ ಅಗತ್ಯವಾಗಿ ಬೇಕಾಗಿರುವುದು ಜ್ಞಾನದ ಬೆಳಕು ಮತ್ತು ಸದಾಚಾರದ ನಡೆ.

ಮಾಡುವ ಭಕ್ತಿ ಆಚಾರಗಳು ಸಹಿತ ಮಾಯೆಯಾಗಬಲ್ಲವು, ಮನೋ ವಿಕಾಸಕ್ಕೆ ಅಡ್ಡಿಯಾಗಬಲ್ಲವು ಎಂಬುದನ್ನು ಗುರು ಬಸವಣ್ಣನವರು ಬಹು ಮಾರ್ಮಿಕವಾಗಿ ಹೇಳುತಾರೆ :

ಮರನ ಹೂವ ಕೊಯಿದು ಮರಕ್ಕೇರಿಸಿ; ನದಿಯುದಕವ ನದಿಗರ್ಪಿತವ ಮಾಡಿ,
ಕರುವನಗಲಿಸಿ ತಾಯ ಮರುಗಿಸಿ ಮೊಲೆವಾಲ ಕರೆದುಣಬೇಡವೋ!
ಲಿಂಗದೇವ ಮಾಡಿದ ಮಾಯೆ, ಹಲಬರ ಬಾಯ ಟೊಣೆದೇ ಹೋಯಿತ್ತು!

ಗಿಡ ಮರ ನೀರನ್ನು ಪೂಜಿಸುವ ಮೂಢರನ್ನು ಕಂಡು ಮರುಕಪಟ್ಟು ಗುರು ಬಸವಣ್ಣನವರು ಹೇಳುತ್ತಾರೆ, ಎಕ್ಕದ ಗಿಡ, ಬಿಲ್ವ ಇತ್ಯಾದಿ ಪೂಜೆ ಮಾಡುವ ಜನರು ಅದರ ಹೂವನ್ನೇ ಕಿತ್ತು ಆ ಗಿಡಕ್ಕೆ ಏರಿಸುವರು. ಗಂಗಾಪೂಜೆ ಮಾಡುವ ಜನರು ನೀರನ್ನು ತುಂಬಿ ತಂಬಿಗೆ ಅಥವಾ ಬಿಂದಿಗೆಯಲ್ಲಿಟ್ಟು ಅದೇ ನೀರನ್ನು ಸಿಂಪಡಿಸಿ ಪೂಜಿಸುವರು. ಕೆಲವರು ಭಕ್ತರು ಎನಿಸಿಕೊಂಡವರು ಮಾನವೀಯತೆಯೇ ಇಲ್ಲದೆ ಕರುವನ್ನು ಹಸುವು ಹಾಲು ಇಳಿಸಲು (ತೊರೆ ಬಿಡಲು) ಮಾತ್ರ ಬಳಿಕೊಂಡು ಅದು ತಾಯಿಯ ಹಾಲು ಕುಡಿಯಲು ಬಿಡದಂತೆ ಬಲವಂತವಾಗಿ ಎಳೆದೊಯ್ದು ಕಟ್ಟಿ ಹಾಲು ಹಿಂಡಿಕೊಳ್ಳುವರು. ಇಂಥ ಭಕ್ತಿಯೂ ಒಂದು ಮಾಯೆ (ಅಡ್ಡಿ) ಯೇ! ಇದು ಹಲವರನ್ನು ದಿಕ್ಕುಗೆಡಿಸುತ್ತದೆ.

(ಮುಂದುವರಿಯುವುದು.....)

|| ಓಂ ಶ್ರೀ ಗುರು ಬಸವ ಲಿಂಗಾಯ ನಮಃ ||

866666

ಶರಣ ಭೂಮಿ ಬಸವ ಕಲ್ಯಾಣದ ಶರಣ ಶೈಲದ ಮೇಲೆ

108 ಅಡಿ ಗುರು ಬಸವಣ್ಣನವರ ಪುತ್ಥಳಿ

ಧನ ಸಹಾಯಕ್ಕಾಗಿ ಬಿನ್ನಹ



ಬಸವ ಧರ್ಮ ಪೀಠದ ಶರಣ ಲೋಕದಲ್ಲಿ ತ್ವರಿತಗತಿಯಿಂದ ಕಟ್ಟಡ ನಿರ್ಮಾಣ ಕಾರ್ಯ ಸಾಗಿರುವುದು ಸರ್ವ ವೇದ್ಯವಷ್ಟೆ. ಗುರು ಬಸವಣ್ಣನವರ 108 ಅಡಿ ಪುತ್ಥಳಿಯ ಕೆಲಸವು ಅರ್ಧಕ್ಕಿಂತ ಹೆಚ್ಚು ಪ್ರಮಾಣದಲ್ಲಿ ಪೂರೈಸಿದ್ದು, ಇನ್ನು ಒಂದು ವರ್ಷದಲ್ಲಿ ಅದು ಪೂರ್ಣಗೊಳ್ಳುವ ನಿರೀಕ್ಷೆ ಇದೆ.

1. ಒಂದು ಲಕ್ಷ ರೂ ಮತ್ತು ಮೇಲೆ ಕೊಟ್ಟವರ ಹೆಸರನ್ನು ಗ್ರಾನೈಟ್ ಕಲ್ಲಿನ ಮೇಲೆ ಕೆತ್ತಿಸಲಾಗುವುದು. ಅಲ್ಲದೆ ದಾನಿಗಳ ಅಥವಾ ಅವರು ಸೂಚಿಸಿದವರ ಭಾವಚಿತ್ರವನ್ನು ಪ್ರದರ್ಶಿಸಲಾಗುವುದು.
2. 50,000 (ಐವತ್ತು ಸಾವಿರ) ಮತ್ತು ಮೇಲೆ ಕೊಟ್ಟವರ ಹೆಸರನ್ನು ಗ್ರಾನೈಟ್ ಕಲ್ಲಿನ ಮೇಲೆ ಕೆತ್ತಿಸಲಾಗುವುದು.
3. 25,000 (ಇಪ್ಪತ್ತೈದು ಸಾವಿರ) ಮತ್ತು ಮೇಲೆ ಕೊಟ್ಟವರ ಹೆಸರನ್ನು ಸಾಮೂಹಿಕವಾಗಿ ಗ್ರಾನೈಟ್ ಕಲ್ಲಿನ ಮೇಲೆ ಕೆತ್ತಿಸಲಾಗುವುದು.
4. 11,000 (ಹನ್ನೊಂದು ಸಾವಿರ) ಮತ್ತು ಮೇಲೆ ಕೊಟ್ಟವರ ಹೆಸರನ್ನು ಬೋರ್ಡಿನ ಮೇಲೆ ಬರೆಸಲಾಗುವುದು.

ಈಗಾಗಲೇ ಅನೇಕರು ತಮ್ಮ ಶಕ್ತ್ಯಾನುಸಾರ ದೇಣಿಗೆ ಕೊಟ್ಟಿರಬಹುದು. ಕೆಲಸವು ಹಾಕಿಕೊಂಡ ಅಂದಾಜು ವೆಚ್ಚಕ್ಕಿಂತ ಹೆಚ್ಚಾಗಿ ಸಾಗುತ್ತಿರುವುದರಿಂದ ಈಗ ಕೊಟ್ಟವರು ಇನ್ನೂ ಹೆಚ್ಚಿನ ಮೊತ್ತವನ್ನು ಕೊಡಬಹುದು. ಮೂರ್ತಿಗೆ ಆಕಾರ ಕೊಡುವ ಕೆಲಸ ನಡೆದಿರುವುದರಿಂದ ಹಣವು ತ್ವರಿತಗತಿಯಲ್ಲಿ ಬೇಕಾಗಿದೆ.

ಗುರು ಬಸವಣ್ಣನವರ ಜೀವನ ಚರಿತ್ರೆ ಚಿತ್ರಣ

1. ಗುರು ಬಸವಣ್ಣನವರ 108 ಅಡಿ ಪುತ್ಥಳಿಗೆ 24 ಅಡಿ ಎತ್ತರದ ಅಡಿಪಾಯವಿದೆ. ಇಲ್ಲಿ ಧರ್ಮಪಿತರ ಜೀವನದ ಪ್ರಮುಖ ಘಟ್ಟಗಳನ್ನು ಮೂರ್ತಿಗಳ ಮೂಲಕ ಚಿತ್ರಿಸುವ ಯೋಜನೆ ಇದೆ. ಒಂದು ಅಂಕಣದಲ್ಲಿ ಒಂದು ಘಟನೆ ಅಥವಾ ಪ್ರಸಂಗವಿರುತ್ತದೆ. ಒಂದೊಂದು ಘಟನೆಯ ಚಿತ್ರಣಕ್ಕೆ ಒಂದೂವರೆ ಲಕ್ಷ ಖರ್ಚು ಬರಲಿದೆ. (ಮುರ್ಡೇಶ್ವರದಲ್ಲಿ ರಾವಣನ ಜೀವನದ ಪ್ರಸಂಗಗಳು, ಶಿವನ ಲೀಲೆಗಳನ್ನು ಚಿತ್ರಿಸಿರುವುದು ನಮ್ಮ ಯೋಜನೆಗೆ ಪ್ರೇರಣೆ) ಇದನ್ನು ಒಬ್ಬರೇ ದಾನಿಗಳು ವಹಿಸಿಕೊಳ್ಳಬಹುದು. ಅಥವಾ ಇಬ್ಬರು - ಮೂವರು ಸೇರಿ ವಹಿಸಿಕೊಳ್ಳಬಹುದು. ಅಥವಾ ಒಂದೊಂದು ರಾಷ್ಟ್ರೀಯ ಬಸವ ದಳದಿಂದ ಅಥವಾ ಒಂದೊಂದು ಊರಿನಿಂದ ಸಂಗ್ರಹಿಸಿ ದೇಣಿಗೆ ನೀಡಬಹುದು.

2. ಶರಣ ಗ್ರಾಮ: ವಿವಿಧ ಕಾಯಕದ ಶರಣರನ್ನು ಅವರ ಪರಿಸರದ ಜೊತೆಗೆ ಚಿತ್ರಿಸುವ ಕೆಲಸ ಆರಂಭವಾಗಿದೆ. ಒಬ್ಬ ಶರಣರ ಅಂಥ ಚಿತ್ರಣಕ್ಕೆ ಅಂದಾಜು 50,000 (ಐವತ್ತು ಸಾವಿರ) ರೂ ವೆಚ್ಚವಾಗುವುದು. ಕೊಟ್ಟವರ ಹೆಸರಿನ ನಾಮಫಲಕವನ್ನು ಹಾಕಲಾಗುವುದು.

3. ಅಕ್ಕಮಹಾದೇವಿ ಗವಿ : ಜಗನ್ಮಾತಾ ಅಕ್ಕಮಹಾದೇವಿ ಹೆಸರಿನಲ್ಲಿ ಒಂದು ಬೃಹತ್ ಗವಿಯನ್ನು ಕೆತ್ತಿಸಲಾಗಿದ್ದು, ಇದರಲ್ಲಿ 30 ಜನ ವಚನಕಾರ್ತಿಯರಾದ ಶರಣೆಯರ ಮೂರ್ತಿಗಳನ್ನು ಕೂರಿಸುವ ಉದ್ದೇಶವಿದೆ. ಒಬ್ಬೊಬ್ಬ ಶರಣೆಯ ಮೂರ್ತಿ ಆಕೆಯ ಪರಿಸರದೊಡನೆ ಚಿತ್ರಿಸಲು 25,000 (ಇಪ್ಪತ್ತೈದು ಸಾವಿರ) ರೂಗಳ ವೆಚ್ಚ ತಗುಲಲಿದೆ. ದಾನಿಗಳು ದೇಣಿಗೆ ಕೊಟ್ಟರೆ ಅಲ್ಲಿ ಅವರ ನಾಮಫಲಕವನ್ನು ಹಾಕಲಾಗುವುದು.

4. ಸರೋವರ: ಗುರು ಬಸವಣ್ಣನವರ ಪುತ್ಥಳಿಯ ಮುಂಭಾಗದಲ್ಲಿ ಒಂದು ಕೊಳವನ್ನು (ಅಂದಾಜು ವೆಚ್ಚ 5 ಲಕ್ಷ) ಮಾಡಿ, ಐಕ್ಯ ಮಂಟಪವನ್ನು (ಅಂದಾಜು ವೆಚ್ಚ 3 ಲಕ್ಷ) ನಿರ್ಮಿಸಲಾಗುತ್ತಿದೆ. ಇಡೀ ವೆಚ್ಚವನ್ನು ಒಬ್ಬರೇ ವಹಿಸಿಕೊಳ್ಳಬಹುದು. ಅಥವಾ ಇಬ್ಬರು ಪ್ರತ್ಯೇಕವಾಗಿ ವಹಿಸಿಕೊಳ್ಳಬಹುದು.

ಸ್ವಯಂ ಪ್ರೇರಣೆಯಿಂದ ಕಟ್ಟಡ ನಿಧಿಗೆ ಶಕ್ತ್ಯಾನುಸಾರ ಮತ್ತು ಭಕ್ತ್ಯಾನುಸಾರ ಎಷ್ಟು ಬೇಕಾದರೂ ಕೊಡಬಹುದು.

ಸಾಲದ ರೂಪದಲ್ಲಿ ಧನ ಸಹಾಯ

ಬೃಹತ್ ಪುತ್ಥಳಿಯ ಕೆಲಸವು ಬಹು ತೀವ್ರಗತಿಯಲ್ಲಿ ನಡೆದಿರುವ ಕಾರಣ ಹಣದ ವ್ಯವಸ್ಥೆಯನ್ನು ಮಾಡುವುದು ಅಗತ್ಯವಿದೆ. ಈ ಹಿಂದೆ 2006ರಲ್ಲಿ ನವ ದೆಹಲಿಯಲ್ಲಿ (ಬಸವ ಮಂಟಪ) ಕಟ್ಟಡ ಖರೀದಿ ಮಾಡುವಾಗ ಶರಣ ಬಂಧುಗಳು ಸಾಲ ರೂಪದಲ್ಲಿ ಹಣವನ್ನು ಒದಗಿಸಿದರು. ಒಂದೂವರೆ ತಿಂಗಳಲ್ಲೇ ಸಾಲ ರೂಪದಲ್ಲಿ ಹಣವನ್ನು ಸಂಗ್ರಹಿಸಿ ಕಟ್ಟಡವನ್ನು ಖರೀದಿಸಲಾಯಿತು. ಆ ಸಾಲದಲ್ಲಿ ಶೇಕಡಾ 80ರಷ್ಟು ತೀರಿಸಲಾಗಿದೆ. ಶರಣ ಬಂಧುಗಳ ಇಚ್ಛೆಯಂತೆ ಉಳಿದುದನ್ನು ಅವರು ಕೇಳಿದಾಗ ಕೊಡಲಾಗುವುದು. ಅದೇ ರೀತಿ ಈಗಲೂ ಶರಣ ಬಂಧುಗಳು ಸಾಲದ ರೂಪದಲ್ಲಿ ಬಸವ ಧರ್ಮ ಪೀಠ ಟ್ರಸ್ಟಿಗೆ ಹಣವನ್ನು ಕೊಡಬಹುದು. ಅದಕ್ಕೆ 12% ಬಡ್ಡಿಯನ್ನು ಸಹ ಕೊಡಲಾಗುವುದು. ತಮಗೆ ಹಣ ಅಗತ್ಯವೆನಿಸಿದಾಗ ಒಂದು ತಿಂಗಳು ಮೊದಲೇ ಬೇಡಿಕೆ ಸಲ್ಲಿಸಿದರೆ ಅವರಿಗೆ ಹಣವನ್ನು ವಾಪಸ್ಸು ನೀಡಲಾಗುವುದು. ಸಾಲ ನೀಡುವುದೂ ಸಹ ಉಪಕಾರದ ಕೆಲಸ ಎಂದು ಭಾವಿಸಿ, ಆರ್ಥಿಕ ಶಕ್ತಿ ಇರುವವರು ಸಾಲ ಕೊಡಲು ಮುಂದೆ ಬರಬೇಕೆಂದು ವಿನಂತಿಸುತ್ತೇವೆ.

ವಿ.ಸೂ: ಸಾಲದ ಹಣಕ್ಕೆ ರಸೀತಿ ಕೊಡಲಾಗುವುದು.

ಸಂಪರ್ಕಿಸುವ ವಿಳಾಸಗಳು

ಬೆಂಗಳೂರು ವಿಳಾಸ :
ಬಸವ ಮಹಾಮನೆ ಚಾರಿಟಬಲ್ ಟ್ರಸ್ಟ್ (ರಿ.)
ಬಸವ ಮಂಟಪ, 2035, 2ನೇ ಬ್ಲಾಕ್
ರಾಜಾಜಿನಗರ, ಬೆಂಗಳೂರು-560010
☎ : 080-22923736/23131476

ಪೂಜ್ಯ ಶ್ರೀ ಮಹಾಜಗದ್ಗುರು ಮಾತೆ ಮಹಾದೇವಿ
ಕಾರ್ಯಾಧ್ಯಕ್ಷೆ, ಬಸವ ಧರ್ಮ ಪೀಠ (ರಿ) ಟ್ರಸ್ಟ್
ಬಸವ ಮಹಾಮನೆ, ಬಸವಕಲ್ಯಾಣ- 585 327
ತಾ-ಬಸವ ಕಲ್ಯಾಣ, ಜಿಲ್ಲೆ-ಬೀದರ್
☎ : 08481-251921/252856

ಧರ್ಮಕ್ಷೇತ್ರ ಕೂಡಲಸಂಗಮದಲ್ಲಿ 2010 ರ ಜನವರಿ 11, 12, 13, 14, 15ರಂದು ನಡೆಯಲಿರುವ ಇಪ್ಪತ್ಮೂರನೆಯ ಶರಣಮೇಳದ ಅಂಗವಾಗಿ ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿ ಅವರ


ಪ್ರಚಾರ ಪ್ರವಾಸ ಕಾರ್ಯಕ್ರಮ

10.	10-11-2009	ಬಸವ (ಮಂಗಳ) ವಾರ	ಚಿಕ್ಕಮಗಳೂರು
11.	11-11-2009	ಚನ್ನ (ಬುಧ) ವಾರ	,,
12.	12-11-2009	ಪ್ರಭು (ಗುರು) ವಾರ	ಭದ್ರಾವತಿ
13.	13-11-2009	ಮಾತೃ (ಶುಕ್ರ) ವಾರ	,,
14.	14-11-2009	ಶರಣ (ಶನಿ) ವಾರ	ಶಿವಮೊಗ್ಗ
15.	15-11-2009	ದೇವ (ಭಾನು) ವಾರ	ಕೊಮ್ಮನಾಳ
16.	16-11-2009	ಶಿವ (ಸೋಮ) ವಾರ	ದಾವಣಗೆರೆ
17.	17-11-2009	ಬಸವ (ಮಂಗಳ) ವಾರ	ಚಿತ್ರದುರ್ಗ
18.	18-11-2009	ಚನ್ನ (ಬುಧ) ವಾರ	ಹಿರಿಯೂರು
19.	19-11-2009	ಪ್ರಭು (ಗುರು) ವಾರ	ಚಳ್ಳಕೆರೆ
20.	20-11-2009	ಮಾತೃ (ಶುಕ್ರ) ವಾರ	ದೊಡ್ಡಉಳ್ಳಾರ್ತಿ
21.	21-11-2009	ಶರಣ (ಶನಿ) ವಾರ	ಚಿತ್ರನಾಯಕನ ಹಳ್ಳಿ
22 .	22-11-2009	ದೇವ (ಭಾನು) ವಾರ	ಬಳ್ಳಾರಿ
23.	23-11-2009	ಶಿವ (ಸೋಮ) ವಾರ	ಶಿರಗುಪ್ಪ
24.	24-11-2009	ಬಸವ (ಮಂಗಳ) ವಾರ	ರಾಯಚೂರು
25.	25-11-2009	ಚನ್ನ (ಬುಧ) ವಾರ	ಗಂಗಾವತಿ
26.	26-11-2009	ಪ್ರಭು (ಗುರು) ವಾರ	ಕೊಪ್ಪಳ
27.	27-11-2009	ಮಾತೃ (ಶುಕ್ರ) ವಾರ	,,
28.	28-11-2009	ಶರಣ (ಶನಿ) ವಾರ	,,
29.	29-11-2009	ದೇವ (ರವಿ) ವಾರ	ಹುಬ್ಬಳ್ಳಿ
30.	30-11-2009	ಶಿವ (ಸೋಮ) ವಾರ	ಧಾರವಾಡ
31.	01-12-2009	ಬಸವ (ಮಂಗಳ) ವಾರ	ಅವರಾದಿ
32.	02-12-2009	ಚನ್ನ (ಬುಧ) ವಾರ	ಸವದತ್ತಿ
33.	03-12-2009	ಪ್ರಭು (ಗುರು) ವಾರ	,,
34.	04-12-2009	ಮಾತೃ (ಶುಕ್ರ) ವಾರ	ಬೈಲಹೊಂಗಲ
35.	05-12-2009	ಶರಣ (ಶನಿ) ವಾರ	,,
36.	06-12-2009	ದೇವ (ರವಿ) ವಾರ	ಬೆಳಗಾವಿ


37.	07-12-2009	ಶಿವ(ಸೋಮ)ವಾರ	ಬೆಳಗಾವಿ
38.	08-12-2009	ಬಸವ(ಮಂಗಳ)ವಾರ	ಸಂಕೇಶ್ವರ
39.	09-12-2009	ಚನ್ನ(ಬುಧ)ವಾರ	ಗಡಹಿಂಗ್ಲಾಜ್
40.	10-12-2009	ಪ್ರಭು(ಗುರು)ವಾರ	ಗೋಕಾಕ್
41.	11-12-2009	ಮಾತೃ(ಶುಕ್ರ)ವಾರ	,,
42.	12-12-2009	ಶರಣ(ಶನಿ)ವಾರ	,,
43.	13-12-2009	ದೇವ(ರವಿ)ವಾರ	,,
44.	14-12-2009	ಶಿವ(ಸೋಮ)ವಾರ	ಶೇಗುಣಸಿ
45.	15-12-2009	ಬಸವ(ಮಂಗಳ)ವಾರ	ಖವಟಕೊಪ್ಪ
46.	16-12-2009	ಚನ್ನ(ಬುಧ)ವಾರ	ತಾಂವಶಿ
47.	17-12-2009	ಪ್ರಭು(ಗುರು)ವಾರ	ಅಥಣಿ
48.	18-12-2009	ಮಾತೃ(ಶುಕ್ರ)ವಾರ	ಆಡಹಳಹಟ್ಟಿ
49.	19-12-2009	ಶರಣ(ಶನಿ)ವಾರ	ಕನಮಡಿ
50.	20-12-2009	ದೇವ(ರವಿ)ವಾರ	ಗುಡ್ಡಾಪುರ
51.	21-12-2009	ಶಿವ(ಸೋಮ)ವಾರ	ಬಿಜಾಪುರ
52.	22-12-2009	ಬಸವ(ಮಂಗಳ)ವಾರ	ಕಗ್ಗೋಡ
53.	23-12-2009	ಚನ್ನ(ಬುಧ)ವಾರ	ಗುಲಬರ್ಗಾ
54.	24-12-2009	ಪ್ರಭು(ಗುರು)ವಾರ	,,
55.	25-12-2009	ಮಾತೃ(ಶುಕ್ರ)ವಾರ	ಯಲಮಾಮಿಡಿ
56.	26-12-2009	ಶರಣ(ಶನಿ)ವಾರ	ಉದಗೀರ್
57.	27-12-2009	ದೇವ(ರವಿ)ವಾರ	ಸಂಗಮ
58.	28-12-2009	ಶಿವ(ಸೋಮ)ವಾರ	ಬೀದರ್
59.	29-12-2009	ಬಸವ(ಮಂಗಳ)ವಾರ	ಕೋಳಾರ
60.	30-12-2009	ಚನ್ನ(ಬುಧ)ವಾರ	,,
61.	31-12-2009	ಪ್ರಭು(ಗುರು)ವಾರ	ಜಹಿರಾಬಾದ್
62.	01-01-2010	ಮಾತೃ(ಶುಕ್ರ)ವಾರ	ಹೈದ್ರಾಬಾದ್
63.	02-01-2010	ಶರಣ(ಶನಿ)ವಾರ	,,
64.	03-01-2010	ದೇವ(ರವಿ)ವಾರ	,,
65.	04-01-2010	ಶಿವ(ಸೋಮ)ವಾರ	,,
66.	05-01-2010	ಬಸವ(ಮಂಗಳ)ವಾರ	,,
67.	06-01-2010	ಚನ್ನ(ಬುಧ)ವಾರ	,,
70.	07-01-2010	ಪ್ರಭು(ಗುರು)ವಾರ	,,
71.	08-01-2010	ಮಾತೃ(ಶುಕ್ರ)ವಾರ	,,
72.	09-01-2010	ಶರಣ(ಶನಿ)ವಾರ	,,
73.	10-01-2010	ದೇವ(ಭಾನು)ವಾರ	ಕೂಡಲ ಸಂಗಮಕ್ಕೆ ಪ್ರಯಾಣ

ಓಂ ಶ್ರೀ ಗುರು ಬಸವ ಲಿಂಗಾಯ ನಮಃ

೩೬೬೬೬೬



ಬಸವ ಶರಣೆ ದಾನಮ್ಮದೇವಿ



ಬಸವ ಶರಣರಾದ ಆಯ್ದಕ್ಕಿ ಮಾರಯ್ಯ ಮತ್ತು
ಆಯ್ದಕ್ಕಿ ಲಕ್ಕಮ್ಮನವರು